ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಜೂನ್ 2020 ಮಾಸ ಪತ್ರಿಕೆ

ಸಂಪುಟ/Volume : 42
ಸಂಚಿಕೆ/Issue : 9
ಪುಟ/Pages : 36
ಬೆಲೆ/Price : ₹ 10/-

Akhila Karnataka Shikshaka Samachar | June 2020 | Monthly



# ರಾಮಾಯಣದ ವಿಶ್ವಭ್ರಮಣ

Hanuman statue. In Pura Tanah Lot Temple Tambanan Bali Island Indonesia

A Journal of Karnataka State Secondary Teachers' Association

# ಸಂಪಾದಕೀಯ

## ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯದಲ್ಲಿ ಶಿಕ್ಷಕರ ಪಾತ್ರ

ನಮ್ಮ ಸಹೃದಯ ಶಿಕ್ಷಕ ಕಾರ್ಯಕರ್ತರಿಗೆ ಈ ಮೇಲಿನ ವಾಕ್ಯವನ್ನು ಹಿಂದಿನ ಮೂರು ತಿಂಗಳಿನಿಂದ ಅದೆಷ್ಟು ಬಾರಿ ಕೇಳಿದ್ದೇವೆ ಎನಿಸಬಹುದು. ಹೌದು ಇಲಾಖೆಯ ಕಡೆಯಿಂದ ಎಷ್ಟು ಬಾರಿ ಸಭೆಗಳನ್ನು ಕರೆದು ಹೇಳಿದ್ದಾರೋ ತಿಳಿಯದು. ಆದರೆ ಅದು ಇಲಾಖೆ ಕಡೆಯಿಂದ. ನಾವು ವಿದ್ಯಾರ್ಥಿಗಳ ಪೋಷಕರಂತೆ ಯೋಚಿಸಬಹುದೇ ಎಂಬುದು ನನ್ನ ಅನಿಸಿಕೆ. ನಮ್ಮ ಮನೆಯಲ್ಲಿಯೇ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿದ್ದರೆ ಅದರ ಅನುಭವವೂ ನಮಗೆ ಆಗಿರಬಹುದು. ಆದರೆ ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳ ಪೋಷಕರು ಪರೀಕ್ಷಾ ಕಾರ್ಯಕ್ಕಾಗಲೀ, ಮೌಲ್ಯಮಾಪನ ಕಾರ್ಯಕ್ಕಾಗಲೀ ನಿಯೋಜನೆಗೊಳ್ಳುವಂತಿಲ್ಲ ಎಂಬುದು ನಮಗೆಲ್ಲಾ ಗೊತ್ತಿರುವ ವಿಷಯವೇ. ಈಗ ನಾವು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳನ್ನು ನಮ್ಮ ಮಕ್ಕಳೆಂದು ತಿಳಿದು ನಮ್ಮ ಕಾರ್ಯವನ್ನು ಮಾಡಬೇಕಿದೆ. ನಾವು ಯಾವಾಗಲೂ ವಿದ್ಯಾರ್ಥಿಗಳನ್ನು ನಮ್ಮ ಮಕ್ಕಳೆಂದು ತಿಳಿದೇ ಬೋಧನೆ ಮಾಡುವುದು ಎಂದು ನನ್ನ ಅನೇಕ ವೃತ್ತಿಬಾಂಧವರು ಹೇಳಬಹುದು. ಬಹಳ ಸಂತೋಷ. ಈಗಲೂ ಹಾಗೆಂದು ಕೊಂಡೆ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯವನ್ನು ಮಾಡೋಣ.

ಇಂತಹ ಕ್ಲಿಷ್ಟಕರ ಕೋವಿಡ್ ಸಮಯದಲ್ಲಿ ಮಕ್ಕಳು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯಲು ತಯಾರಾಗಿದ್ದಾರೆ. ಆಗಿದ್ದರೆ ಅವರು ಪರೀಕ್ಷೆ ಬರೆಯಲು ಬಂದಾಗ ಆ ವಿದ್ಯಾರ್ಥಿಗಳ ಪೋಷಕರಾಗಿ ನಾವು ಏನೆಲ್ಲಾ ಮುಂಜಾಗರೂಕತೆ ತೆಗೆದುಕೊಳ್ಳಬಹುದು. ನೋಡೋಣವೇ.

- ಪರೀಕ್ಷಾ ಕೇಂದ್ರವನ್ನು ಸ್ಯಾನಿಟೈಜ್ ಮಾಡಬೇಕೆಂದು ಇಲಾಖೆ ಆದೇಶಿಸಿದೆ. ಆದೇಶದಂತೆ ಸ್ಯಾನಿಟೈಜ್ ಮಾಡಿಸುವಾಗ ಪರೀಕ್ಷೆ ಬರೆಯಲು ನಮ್ಮ ಮಕ್ಕಳೇ ಬರುತ್ತಿದ್ದಾರೆ, ಅವರಿಗೆ ಸೋಂಕು ತಗುಲದಂತೆ ಹೇಗೆ ಪ್ರತಿಯೊಂದು ಕೋಣೆಯನ್ನು ಸ್ಯಾನಿಟೈಜ್ ಮಾಡಿಸಬಹುದು ಎಂಬುದನ್ನು ಬಹಳ ಸೂಕ್ಷ್ಮವಾಗಿ ಗಮನಿಸಿ ನಗರಸಭೆ ಮತ್ತು ಪುರಸಭೆಯವರು ಸ್ಯಾನಿಟೈಜ್ ಮಾಡಲು ಬಂದಾಗ ಅವರಿಗೆ ಆ ಕೆಲಸವನ್ನು ಮಾಡಲು ಹೇಳಿ ಬಿಟ್ಟುಬಿಡದೇ ನಾವು ಮುತುವರ್ಜಿ ವಹಿಸಿ ನಿಂತು ಮಾಡಿಸಬಹುದೇ? ಸ್ಯಾನಿಟೈಜ್ ಮಾಡಲು ಬಳಸುವ ದ್ರಾವಣ ಸರಿಯಾದ ಪ್ರಮಾಣದಲ್ಲಿ ಬಳಸಲಾಗಿದೆಯೇ? ಎಂಬುದನ್ನು ಗಮನಿಸಬಹುದು. ಪ್ರತಿಯೊಂದು ಪರೀಕ್ಷೆಯ ನಂತರ ಪ್ರತಿ ಕೋಣೆಯನ್ನು ಸ್ಯಾನಿಟೈಸ್ ಮಾಡಬೇಕು.
- ವಿದ್ಯಾರ್ಥಿಗಳಿಗೆ ಪರೀಕ್ಷೆಯ ಭಯವೊಂದಾದರೆ, ಈಗ ಈ ಕೋರೋನಾ ಭಯದ ಜೊತೆ ಪರೀಕ್ಷೆ ಬರೆಯುವುದು ಅನಿವಾರ್ಯವಾಗಿದೆ. ಪರೀಕ್ಷಾ ಭಯ ಹೋಗಲಾಡಿಸುವ ಜೊತೆಗೆ ಕೋರೋನಾ ಭಯ ಹೋಗಲಾಡಿಸಲು ನಾವು ಇನ್ನು ಮೇಲೆ ನಿರಂತರ ವಿದ್ಯಾರ್ಥಿಗಳಿಗೆ ದೂರವಾಣಿ ಕರೆ ಮಾಡಬಹುದೇ? ಪರೀಕ್ಷಾ ಕೇಂದ್ರ ಅವರಿಗೆ ಮನೆಯಷ್ಟೇ ಸುರಕ್ಷಿತ ಎಂಬುದನ್ನು ವಿದ್ಯಾರ್ಥಿಗಳಿಗೆ ದೂರವಾಣಿ ಕರೆ ಮಾಡಿ ಮಾತನಾಡುವಾಗ ತಿಳಿಸಬಹುದೇ?
- ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ 2 ತಾಸು ಮುಂಚಿತವಾಗಿ ಬಂದು ಸಾಮಾಜಿಕ ಅಂತರವನ್ನು ಮನಸ್ಸಿನಲ್ಲಿಟ್ಟುಕೊಂಡು, ತಮ್ಮ ಪರೀಕ್ಷಾ ಕೋಣೆಯನ್ನು ಗುರುತಿಸಿ, ನಿರಾತಂಕವಾಗಿ ಪರೀಕ್ಷೆ ಬರೆಯಲು ಅವರಿಗೆ ಮೊದಲೇ ಪರೀಕ್ಷಾ ಕೋಣೆಯ ಸಂಖ್ಯೆಯನ್ನು ಪರೀಕ್ಷಾ ಕೇಂದ್ರದವರ ಜೊತೆ ಮಾತನಾಡಿ ವಿದ್ಯಾರ್ಥಿಗಳಿಗೆ ತಿಳಿಸಬಹುದೇ?
- ಸಂಘ-ಸಂಸ್ಥೆಗಳಿಂದ ನೀಡಿರುವ ಮಾಸ್ಕ್‌ಗಳನ್ನು ವಿದ್ಯಾರ್ಥಿಗಳಿಗೆ ಮೊದಲೇ ವಿತರಿಸಬಹುದೇ? ಮಕ್ಕಳಿಗೂ ಹ್ಯಾಂಡ್ ಸ್ಯಾನಿಟೈಜರ್ ಹಾಕಿ, ಅವರಿಗೆ ಅದರ ಮಹತ್ವವನ್ನು ತಿಳಿಸಬೇಕು.
- ಯಾವುದಾದರೂ ಮಕ್ಕಳಿಗೆ ಜ್ವರ, ಶೀತವಿದ್ದರೆ ಪರೀಕ್ಷಾ ಕೇಂದ್ರದಲ್ಲಿರುವ ಶಿಕ್ಷಕರು ಆತಂಕಗೊಳ್ಳದೇ, ಮಕ್ಕಳಿಗೂ ಗಾಬರಿಗೊಳಿಸದೇ ಬೇರೊಂದು ಪರೀಕ್ಷಾ ಕೋಣೆಯಲ್ಲಿ ಮಗುವು ನಿರಾತಂಕವಾಗಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಬೇಕು.

**ಇನ್ನು ಮೌಲ್ಯಮಾಪನದ ಕರ್ತವ್ಯದಲ್ಲಿ ಶಿಕ್ಷಕರು ಗಮನಿಸಬೇಕಾದ ಅಂಶಗಳು:**

- ಪರೀಕ್ಷಾ ಕಾರ್ಯ ನಿರ್ವಿಘ್ನವಾಗಿ ಮುಗಿದರೇ ಅರ್ಧ ಕೆಲಸವಾದಂತೆಯೇ ಸರಿ. ನಮ್ಮ ವಿದ್ಯಾರ್ಥಿಗಳು ಸುರಕ್ಷಿತವಾಗಿ ಪರೀಕ್ಷೆ ಬರೆದು ಮುಗಿಸಿದ್ದಾರೆ, ಆದರೆ ನಂತರ ಕೆಲಸವೇ ಶಿಕ್ಷಕರದ್ದೂ, ಮೌಲ್ಯಮಾಪನ ಕಾರ್ಯ. ಪರೀಕ್ಷೆಯಲ್ಲಿ ಮಗುವಿನ ಸುರಕ್ಷತೆ ನೋಡಿದರೆ, ಮೌಲ್ಯಮಾಪನದಲ್ಲಿ ಶಿಕ್ಷಕರ ಸುರಕ್ಷತೆಯ ಬಗ್ಗೆ ಯೋಚಿಸಬೇಕು.
- ಇದುವರೆಗೂ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದ ಸುರಕ್ಷಾ ಕ್ರಮಗಳನ್ನು ನಾವು ಕೈಗೊಂಡರೆ ಸೋಂಕಿನಿಂದ ದೂರವಿರಬಹುದು.
- ಇನ್ನು ಪರೀಕ್ಷಾ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವಾಗ ಈಗಿನ ಸಂದರ್ಭ, ಮಕ್ಕಳ ಮನಸ್ಥಿತಿ, ಪೋಷಕರ ದುಗುಡಾ, ಶಿಕ್ಷಕರ ಪರಿಶ್ರಮ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಎಲ್ಲಾ ಶಿಕ್ಷಕ ಬಂಧುಗಳು ಮೌಲ್ಯಮಾಪನ ಕಾರ್ಯವನ್ನು ಮಾಡಬೇಕು. ಶಿಕ್ಷಕರಾದ ನಾವು ವರ್ಷವಿಡೀ ಮಕ್ಕಳ ಎದುರಿಗೆ ನಿಂತು ಅವರನ್ನು ಶಿಲ್ಪಿಯು ಹೇಗೆ ಒಂದು ವಿಗ್ರಹವನ್ನು ಕೆತ್ತುತ್ತಾನೋ, ಆ ರೀತಿ ಕೆತ್ತಿದ್ದೆವು. ಆದರೆ ಏನೂ ಮಾಡುವುದು ಕೊನೆಯಲ್ಲಿ ಮಕ್ಕಳ ಎದುರಿಗೆ ನಾವು ನಿಲ್ಲಲೂ ಆಗದೇ ತಂತ್ರಜ್ಞಾನದ ಮೊರೆ ಹೋಗಿ ಅವರಿಗೆ ತಯಾರಿ ಮಾಡಿದ್ದೇವೆ. ಶಿಕ್ಷಕರಿಗಂತೂ ಯಾವುದೇ ಕಾರಣಕ್ಕೂ ತಂತ್ರಜ್ಞಾನದ ಮೊರೆ ಹೊಕ್ಕು ನೀಡಿರುವ ಆನ್‌ಲೈನ್ ಶಿಕ್ಷಣ ನೆಮ್ಮದಿ ತರದು. ಆದರೂ ಶಿಕ್ಷಕರು ಸುಮ್ಮನೆ ಕೂರಲು ಆಗದೇ ವಾಟ್ಸ್‌ಆಪ್ ಮೂಲಕ ಮಕ್ಕಳಿಗೆ ಪ್ರಶ್ನೆಪತ್ರಿಕೆ ಕಳುಹಿಸಿ, ಅವರ ಸಂದೇಹಗಳನ್ನು ನಿವಾರಿಸಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದ್ದಾರೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ನಾವು ಈ ಬಾರಿಯ ಮೌಲ್ಯಮಾಪನ ಕಾರ್ಯವನ್ನು ಮಾಡಬೇಕಾಗಿದೆ.

ತಾನೊಂದು ಬಗೆದರೆ, ದೈವವೊಂದು ಬಗೆದೀತು ಎನ್ನುವಂತೆ ಈ ಬಾರಿ ಆಗಿದೆ. ಎಲ್ಲವನ್ನು ಧೈರ್ಯದಿಂದಲೇ ನಿಭಾಯಿಸುವ ಶಿಕ್ಷಕರು ನಾವು. ವಿದ್ಯಾರ್ಥಿಗಳಿಗೂ ಧೈರ್ಯ ಹೇಳುತ್ತಾ ನಮ್ಮ ಕಾರ್ಯವನ್ನು ನಾವು ಶ್ರದ್ಧೆಯಿಂದ ಸುರಕ್ಷಿತವಾಗಿ ಮಾಡೋಣ.

ವಿದ್ಯಾರ್ಥಿಗಳಿಗೂ ಹಾಗೂ ಶಿಕ್ಷಕರೆಲ್ಲರಿಗೂ ಸುರಕ್ಷಿತವಾಗಿ ಪರೀಕ್ಷಾ ಕಾರ್ಯವಾಗಲಿ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬಯಸುತ್ತದೆ.

ಸಂಪಾದಕ

# ಸೂಕ್ತಿ

ನೀನು ನಿಸ್ವಾರ್ಥಿಯೇ? ಎಂಬುದು ಪ್ರಶ್ನೆ. ನಿಸ್ವಾರ್ಥಿಯಾಗಿದ್ದರೆ ಯಾವ ಒಂದು ಧಾರ್ಮಿಕ ಗ್ರಂಥವನ್ನು ಓದದೆಯೂ, ದೇವಸ್ಥಾನ ಅಥವ ಚರ್ಚ್‌ಗೆ ಹೋಗದೆಯೂ ನೀನು ಪರಿಪೂರ್ಣನಾಗುತ್ತೀಯೆ.

- ಸ್ವಾಮಿ ವಿವೇಕಾನಂದ

# ಪರಿವಿಡಿ


- ಬಂಕಿಮಚಂದ್ರರ 'ಆನಂದಮಠ' 3
- ಮಾಸ್ತಿ ಕನ್ನಡದ ಆಸ್ತಿ 5
- ಸೇವಾಮೂರ್ತಿ ಲಕ್ಷ್ಮಣ 7
- ಉತ್ತರ ಜಿಲ್ಲಾ ಪದಾಧಿಕಾರಿಗಳ ಸಭೆ ವರದಿ 9
- ರಾಷ್ಟ್ರ ನಿರ್ಮಾಪಕರಾಗಲು ಶಿಕ್ಷಕರ ಮುಂದಿರುವ ಸವಾಲುಗಳು 10
- ಶಿಕ್ಷಣಕ್ಕೆ ಕರೋನ ಗ್ರಹಣ 14
- ಶಿಕ್ಷಕ ಮತ್ತು ಮನಸ್ಥೈರ್ಯ – ಡಾ|| ವಿ.ಬಿ.ಆರತಿ 15
- ರಾಮಾಯಣದ ವಿಶ್ವಭ್ರಮಣ (ಭಾಗ –2) 18
- ಶಿಕ್ಷಕರ ದೀಪಸ್ಥಂಭ – ಡಾ. ಎಚ್ಚೆನ್ 25
- ಬೆಂಗಳೂರು ವಿಭಾಗ ಹಂತದ ಬೈಠಕ್ 27
- 'ಮೇ ಸಂಚಿಕೆಯ' ಬಗ್ಗೆ ಓದುಗರ ಅನಿಸಿಕೆ 27
- ಕಾಲೇಜು ಶಿಕ್ಷಣ ಆಯುಕ್ತರೊಂದಿಗೆ KRMSS ನ ಫಲಪ್ರದ ಸಭೆ 28
- ಚಿತ್ರಸುದ್ದಿ 29

# ಬಂಕಿಮಚಂದ್ರರ 'ಆನಂದಮಠ'

**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**




**ವಂದೇ ಮಾತರಂ** – ವಂದೇ ಮಾತರಂ ಎಂಬ ಕೂಗು ಕಿವಿದೆರೆಗಳನ್ನು ತಲುಪುತ್ತಿದ್ದಂತೆಯೇ ಎಲ್ಲರ ನರನರಗಳಲ್ಲಿ ದೇಶಪ್ರೇಮದ ವಿದ್ಯುತ್ ಸಂಚಾರವಾಗುತ್ತಿತ್ತು. ಹೌದು, ಇದು ಪಂಚಾಕ್ಷರೀ ಮಂತ್ರವೇ ಆಗಿತ್ತು. ಪ್ರೇರಣಾದಾಯೀ ತಾರಕಮಂತ್ರವೇ ಆಗಿತ್ತು.

ಅದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶಾದ್ಯಂತ ಚಟುವಟಿಕೆಗಳು ನಡೆಯುತ್ತಿದ್ದ ಕಾಲ. ಭಾರತೀಯರ ತನುಮನಗಳಲ್ಲಿ 'ವಂದೇಮಾತರಂ' ಎಂಬ ಘೋಷಣೆ ರೋಮಾಂಚನವನ್ನುಂಟು ಮಾಡುತ್ತಿತ್ತು. ಜೊತೆಗೆ ಮಾತೃಭೂಮಿಯ ಋಣವನ್ನು ಸಲ್ಲಿಸಬೇಕೆಂಬ ಅರಿವನ್ನೂ ಬಡಿದೆಬ್ಬಿಸುತ್ತಿತ್ತು. ಸಮಸ್ತ ಭಾರತೀಯರನ್ನು ಒಂದುಗೂಡಿಸುತ್ತ, ಪರಕೀಯರ ದಾಸ್ಯದಿಂದ ತಾಯ್ನೆಲವನ್ನು ಮುಕ್ತಗೊಳಿಸುವ ಕರ್ತವ್ಯಪ್ರಜ್ಞೆಯನ್ನು ಎಚ್ಚರಿಸುತ್ತಿತ್ತು.

ಸ್ವಾತಂತ್ರ್ಯ ಹೋರಾಟಗಾರರು ಇದನ್ನು ಉಚ್ಚರಿಸುತ್ತ ಎಲ್ಲ ಕಡೆ ಸಂಘಟಿತರಾಗುತ್ತ, ಭಾರತಮಾತೆಯ ಸೇವೆಗೆ ಕರೆನೀಡುತ್ತಿದ್ದರು. 'ವಂದೇಮಾತರಂ' ದೇಶವನ್ನು 'ತಾಯಿ' ಎಂದು ಸಂಬೋಧಿಸಿ ನಮಸ್ಕರಿಸುವ ಈ ಚಿಂತನೆಯೇ ಜನರನ್ನು ಪ್ರದೇಶ, ಭಾಷೆ, ವರ್ಗಭೇದವಿಲ್ಲದೆ ಒಂದಾಗಿಸುವ ಅದ್ಭುತ ಶಕ್ತಿಯಾಗಿತ್ತು. ಆಬಾಲವೃದ್ಧರಾದಿಯಾಗಿ ಎಲ್ಲರಲ್ಲಿ ಹೊಸ ಚೈತನ್ಯದೊಂದಿಗೆ ಬ್ರಿಟಿಷರೆಂಬ ಶತ್ರುಗಳನ್ನೆದುರಿಸುವ ಕೆಚ್ಚನ್ನು ತುಂಬುತ್ತಿತ್ತು. ಅಷ್ಟೇ ಅಲ್ಲ, ವಿದೇಶಗಳಲ್ಲಿದ್ದ ಭಾರತೀಯರಲ್ಲಿಯೂ ದೇಶಪ್ರೇಮವನ್ನು ಜಾಗೃತಗೊಳಿಸುವ ಗೀತೆಯಾಗಿತ್ತು, ವಂದೇಮಾತರಂ. ಇದು ದೇಶದೆಲ್ಲೆಡೆ ಮೊಳಗುತ್ತ ಬ್ರಿಟಿಷರನ್ನು ಕಂಗಾಲಾಗಿಸುತ್ತಿತ್ತು.

19–20ನೇ ಶತಮಾನದ ಸಂಧಿಕಾಲದಲ್ಲಿ ನೆಲವನ್ನು ತಾಯಿ ಎಂದು ನೋಡುವ ದೃಷ್ಟಿಕೋನಕ್ಕೆ ದಾರಿಮಾಡಿಕೊಟ್ಟಿದ್ದು ಬಂಗಾಳದಲ್ಲಿ ಶಕ್ತಿ ಸಂಪ್ರದಾಯದ ಮಾತೃಸ್ವರೂಪದ ಆರಾಧನೆ. ಹೀಗೆ ಶಕ್ತಿಯು ಭಾರತಮಾತೆಯಾಗಿ ಅವತರಿಸಿದ್ದಳು.

ಆ ಕಾಲದಲ್ಲಿ ಬಂಗಾಳದಲ್ಲಿ ಸ್ವಾಭಿಮಾನ, ದೇಶಭಕ್ತಿಗಳನ್ನು ಪ್ರೇರೇಪಿಸುವ ಅನೇಕ ಸಾಹಿತ್ಯಕೃತಿಗಳ ರಚನೆಯಾಗುತ್ತಿತ್ತು. ಸಮಾನಮನಸ್ಕ ಸಾಹಿತಿಗಳು, ದೇಶಭಕ್ತರು ನಿಯತವಾಗಿ ಒಂದೆಡೆ ಸೇರಿ ದೇಶದ ಭೂತ, ವರ್ತಮಾನ, ಭವಿಷ್ಯದ ಬಗ್ಗೆ ಚರ್ಚಿಸುತ್ತಿದ್ದರು. ಪರಕೀಯರ ಕೈಯಿಂದ ಮಾತೃಭೂಮಿಯನ್ನು ರಕ್ಷಿಸುವ ಹಂಬಲದಿಂದ ಆ ಸ್ನೇಹಕೂಟದಲ್ಲಿ ನಡೆಯುತ್ತಿದ್ದ ಚರ್ಚೆ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕಾರಿಯಾಗುತ್ತಿತ್ತು. ಮೊದಲಿಗೆ, ಜನರಲ್ಲಿ ಅದರ ಅರಿವನ್ನು ಮೂಡಿಸಲು ಚಿಂತಿಸಿ ಒಬ್ಬೊಬ್ಬರೂ ಒಂದೊಂದು ಸಾಹಿತ್ಯಕೃತಿಯನ್ನು ನಿಗದಿತ ಕಾಲದಲ್ಲಿ ರಚಿಸಬೇಕೆಂದು ನಿಶ್ಚಯಿಸಿದ್ದರು. ಹೀಗೆ ಸೇರುತ್ತಿದ್ದ ಸ್ನೇಹವಲಯದಲ್ಲಿ ಜೋಗೇಂದ್ರನಾಥ ವಿದ್ಯಾಭೂಷಣ್, ಭೂದೇವಿ ಮುಖರ್ಜಿ, ಶಚೀಂದ್ರನಾಥ್, ಬಂಕಿಮಚಂದ್ರಚಟ್ಟೋಪಾಧ್ಯಾಯ, ದೀನಬಂಧುಮಿತ್ರ, ಸುರೇಂದ್ರನಾಥಬ್ಯಾನರ್ಜಿ, ಈಶ್ವರಚಂದ್ರವಿದ್ಯಾಸಾಗರ ಮೊದಲಾದ ವಿಭಿನ್ನ ಕ್ಷೇತ್ರಗಳಲ್ಲಿ ವೃತ್ತಿಪರರಾಗಿದ್ದ ವಿದ್ವಾಂಸರು ಇರುತ್ತಿದ್ದರು. ಅವರೆಲ್ಲರೂ ಅಪಾರವಾದ ದೇಶ ಪ್ರೇಮವನ್ನು ಹೊಂದಿದವರಾಗಿದ್ದರು.



ಆ ಸಮಯದಲ್ಲಿಯೇ ನಮ್ಮ ಅದ್ಭುತ ಶಕ್ತಿಯಾದ 'ವಂದೇಮಾತರಂ' ಗೀತೆಯನ್ನು ಒಳಗೊಂಡ 'ಆನಂದಮಠ' ಎಂಬ ಸಾಹಿತ್ಯಕೃತಿ ಬಂಕಿಮಚಂದ್ರರಿಂದ ರಚನೆಯಾಗಿತ್ತು. ಆ ಗೀತೆಯೇ ಕೃತಿಗೆ ಅತ್ಯಂತ ಪ್ರಸಿದ್ಧಿಯನ್ನು ತಂದು ಕೊಟ್ಟಿತ್ತು. ಅದರೊಂದಿಗೆ ದುರ್ಗೇಶನಂದಿನಿ, ದೇವಿ ಚೌಧುರಾಣಿ (ಮೊದಲ ಕೃತಿ) ಮೃಣಾಲಿನಿ, ಕಪಾಲಕಾಂಡಲ ಮೊದಲಾದ ಹಲವಾರು ಕೃತಿಗಳನ್ನು ರಚಿಸಿದ್ದರೂ 'ಆನಂದ ಮಠ' ಮಾತ್ರ ಕೇವಲ ಬಂಗಾಳಿ ಸಾಹಿತ್ಯದಲ್ಲಿ ಮಾತ್ರವಲ್ಲದೆ ಇಡೀ ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿತ್ತು. 1882ರಲ್ಲಿ ಇದು ರಚನೆಗೊಂಡದ್ದು.

ಆನಂದಮಠ ಕಾದಂಬರಿ ಬಂಕಿಮಚಂದ್ರರೇ ನಡೆಸುತ್ತಿದ್ದ 'ಬಂಗದರ್ಶನ' ಎಂಬ ಪತ್ರಿಕೆಯಲ್ಲಿ (ಮಾಸ) ಎರಡು ವರ್ಷಗಳ ಕಾಲ ಧಾರಾವಾಹಿಯಾಗಿ ಪ್ರಕಟಗೊಳ್ಳುತ್ತಿತ್ತು. ಕವಿಯಾಗಿ ಕಾದಂಬರಿಕಾರರಾಗಿ, ಸಂಪಾದಕರಾಗಿ, ಪ್ರಬಂಧಕಾರರಾಗಿ, ಪತ್ರಕರ್ತರಾಗಿದ್ದ ಬಂಕಿಮಚಂದ್ರರು ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಹುದ್ದೆಯನ್ನು ನಿರ್ವಹಿಸುತ್ತಿದ್ದರು. ಬ್ರಿಟಿಷ್ ಸರ್ಕಾರದಲ್ಲಿ ಉದ್ಯೋಗಿಯಾಗಿದ್ದರೂ ಅಂತರಂಗದಲ್ಲಿ ಭಾರತೀಯತೆಯನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡಿದ್ದವರು. ಸ್ವತಃ ವಿವೇಕಾನಂದರೂ ಸಹ ಭಾರತ ವಿಮೋಚನೆಗೆ ಬಂಕಿಮರ ಕೃತಿಗಳಿಂದ ಪ್ರಭಾವಿತರಾಗಿ ಸ್ವಾಭಿಮಾನಿ ದೇಶಭಕ್ತರಾಗಲು ಪ್ರೇರಣೆ ಹೊಂದಿದ್ದರು. ಭಾರತ ವಿಮೋಚನೆಗೆ ದುಷ್ಟದಮನಕಾರಿಣಿ ಜಗದಂಬೆ ಕಾಳಿಯನ್ನು ಆವಾಹನೆ ಮಾಡಿ ನಾಡಿಗೆ ನೀಡಿದ 'ವಂದೇಮಾತರಂ' ಗೀತೆ ಇಡೀ ದೇಶದ ಜನತೆಗೆ ನೀಡಿದ್ದ ಮಂತ್ರ ದೀಕ್ಷೆಯಾಗಿತ್ತು. ಇದರ ಜನಪ್ರಿಯತೆ, ಪ್ರಭಾವ ಎಷ್ಟು ಹೆಚ್ಚಿತ್ತೆಂದರೆ ಸಾಮಾನ್ಯ ಜನರೂ ಪರಸ್ಪರ ಸಂಧಿಸಿದಾಗ 'ವಂದೇಮಾತರಂ' ಎಂದು ಅಭಿವಂದಿಸುವುದು ರೂಢಿಯಾಗಿತ್ತು.

'ಆನಂದಮಠ' ಧಾರಾವಾಹಿಯಾಗಿ ಪ್ರಕಟಗೊಳ್ಳುತ್ತಿದ್ದ ಕಾಲದಲ್ಲಿ ಜನತೆ ಪ್ರತಿ ಸಂಚಿಕೆಗೆ ತುದಿಗಾಲಿನಲ್ಲಿ ನಿಂತು ನಿರೀಕ್ಷಿಸುತ್ತಿದ್ದರು. ಅದು ಅವರ ನರನಾಡಿಗಳಲ್ಲಿ ಉತ್ಸಾಹ, ಆವೇಶಗಳು ಉಕ್ಕಿ ಹರಿಯುವಂತೆ ಮಾಡುತ್ತಿತ್ತು. ಜನರು ಚಾತಕಪಕ್ಷಿಗಳಂತೆ ಕಾಯುತ್ತಿದ್ದರು. ಒಂದೇ ಸಲಕ್ಕೆ ಪ್ರತಿಕಂತನ್ನು ಓದಿ ಮುಗಿಸುತ್ತಿದ್ದ ಓದುಗರು ಬಂಕಿಮಚಂದ್ರರರನ್ನು ಆರಾಧಿಸುವಷ್ಟು ಮೆಚ್ಚಿಕೊಂಡಿದ್ದರು. ವಿದ್ಯಾವಂತರು, ಸುಸಂಸ್ಕೃತರ ಮನೆಗಳಲ್ಲೆಲ್ಲ ಅವರ ಸಾಹಿತ್ಯದ ಕುರಿತು ಚರ್ಚೆ ನಡೆಯುತ್ತಿತ್ತು. ಅವು ಜನರಲ್ಲಿ ತಮ್ಮ ದೇಶ, ಧರ್ಮ, ಸಂಸ್ಕೃತಿಯ ಬಗ್ಗೆ ಅಭಿಮಾನವನ್ನು, ಶ್ರದ್ಧೆಯನ್ನು ಮೂಡಿಸುತ್ತಿದ್ದವು. ಪ್ರತಿಯೊಬ್ಬರೂ ತಾನು ದೇಶಕ್ಕಾಗಿ ಏನು ಮಾಡಬೇಕೆಂದು ಪ್ರಶ್ನಿಸಿಕೊಳ್ಳುವಂತೆ

**ಪುಟ 4 ಕ್ಕೆ** ➤

➢ ಪುಟ 3 ರಿಂದ.....

ಚಿಂತನೆಗೆ ಹಚ್ಚುತ್ತಿದ್ದವು. ಹೀಗೆ ಲಕ್ಷಾಂತರ ಬಂಗಾಳಿಗಳು ಬಂಕಿಮರ ಸಾಹಿತ್ಯದ ಆರಾಧಕರಾದುದಷ್ಟೇ ಅಲ್ಲ, ದೇಶಸೇವೆಗಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಲು ಅಗತ್ಯವಾದ ಮಾನಸಿಕ ಸಿದ್ಧತೆಯನ್ನು ಹೊಂದುವಂತಾಗಿತ್ತು.

'ಆನಂದಮಠ' ಒಂದು ಕಾಲ್ಪನಿಕ ವಸ್ತು ಕೇಂದ್ರಿತವಾದ ಕಾದಂಬರಿ. 1770ರಲ್ಲಿ ಬಂಗಾಳದಲ್ಲಿ ಉಂಟಾಗಿದ್ದ ಬರಗಾಲದ ಪರಿಸ್ಥಿತಿಯನ್ನು ಆಧರಿಸಿದ್ದು, 18ನೇ ಶತಮಾನದ ಉತ್ತರಾರ್ಧದ ಕೊನೆಯಲ್ಲಿ ನಡೆದ ಸನ್ಯಾಸಿಗಳ ಕ್ರಾಂತಿಯ ಹಿನ್ನೆಲೆಯಿಂದ ಸ್ಫೂರ್ತಿಗೊಂಡು ರೂಪಿತವಾದದ್ದು.

'ಆನಂದಮಠ' ಕೇವಲ ಭಾವೋದ್ವೇಗಕ್ಕೆ ಈಡು ಮಾಡುವ ಕಾದಂಬರಿಯಷ್ಟೇ ಆಗಿರಲಿಲ್ಲ. ಸಾಹಿತ್ಯ ಮೌಲ್ಯವೂ ಇದ್ದು, ಜನರಲ್ಲಿ ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಬೇಕೆಂಬ ಆದರ್ಶವನ್ನೂ ಹುಟ್ಟುಹಾಕುತ್ತಿತ್ತು. ಸ್ವತಃ ರವೀಂದ್ರನಾಥ ಠಾಕೂರರೂ ಆ ಕಾದಂಬರಿ ಓದಲು ಚಡಪಡಿಸುತ್ತಿದ್ದರು.

ಬಂಗಾಳದ 'ದಿನಾಜ್‌ಪುರ'ದ ಸುತ್ತ ನಡೆಯುವ ಕಥೆ ಇದು. ಬರಗಾಲದ ಪರಿಣಾಮವಾಗಿ ಊರಿನ ಜನರೆಲ್ಲ ಆಶ್ರಯವನ್ನು ಅರಸುತ್ತ ದೂರ ದೂರದ ಪ್ರದೇಶಗಳಿಗೆ ವಲಸೆ ಹೊರಡುತ್ತಾರೆ. ಅಲ್ಲಿನ ಶ್ರೀಮಂತ ಜಮೀನ್ದಾರ ಮಹೇಂದ್ರ ಕೂಡ ತನ್ನ ಪತ್ನಿ ಕಲ್ಯಾಣಿ ಮತ್ತು ಪುತ್ರಿಯೊಡನೆ ದೂರದ ಪಟ್ಟಣಕ್ಕೆ ಹೊರಡುತ್ತಾನೆ. ದಾರಿಯಲ್ಲಿ ಕಾರಣಾಂತರಗಳಿಂದ ಪತ್ನಿ ಪುತ್ರಿಯರಿಂದ ಬೇರೆಯಾಗಿಬಿಡುತ್ತಾನೆ. ದರೋಡೆಕೋರರ ಕೈಗೆ ಸಿಕ್ಕಿಬಿದ್ದ ಕಲ್ಯಾಣಿ ಹೇಗೋ ತಪ್ಪಿಸಿಕೊಂಡು ಪುತ್ರಿಯೊಡನೆ ಕಾಡಿನಲ್ಲಿ ಅಲೆಯುತ್ತ ಪ್ರಜ್ಞಾಶೂನ್ಯಳಾಗುತ್ತಾಳೆ.

'ಆನಂದಮಠ' ಸತ್ಯಾನಂದ ಸ್ವಾಮಿಯ ನೆಲೆಮನೆಯಾಗಿದ್ದು ಮಾತೃಭೂಮಿಯ ಸೇವೆಗಾಗಿ ಕಂಕಣಬದ್ಧರಾಗಿದ್ದ ಯುವ ಜನರು ಕಾರ್ಯಶೀಲರಾಗಿರುತ್ತಾರೆ. ಸತ್ಯಾನಂದಸ್ವಾಮಿಯ ಆ ಯುವತಂಡ ತರಬೇತಿಯಿಲ್ಲದ ಆದರೆ ಶಿಸ್ತಿನ ಸಿಪಾಯಿಗಳಾಗಿದ್ದರು. ದೇಶಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧರಾಗಿ ಮನೆಬಿಟ್ಟು ಹೊರಬಂದ ದೇಶಭಕ್ತರಾಗಿದ್ದರು. ಕ್ರಮಬದ್ಧವಾದ ಹೋರಾಟವನ್ನು ಕಲಿಯದಿದ್ದರೂ ಮಾತೃಭೂಮಿಯನ್ನು ರಕ್ಷಿಸಲು ಸಿದ್ಧರಾಗಿದ್ದರು. ಕಾದಂಬರಿಯ ಮುಖ್ಯಪಾತ್ರಗಳು ಸನ್ಯಾಸಿ ಸತ್ಯಾನಂದ, ಅವರ ಆಪ್ತ ಶಿಷ್ಯರೆಂದು ಭವಾನಂದ, ಜೀವಾನಂದರಿರುತ್ತಾರೆ. ಸತ್ಯಾನಂದ ಮಾತೃಭೂಮಿ ದೇವಿಯ ರೂಪವೆಂದು ಮೂರು ರೂಪಗಳನ್ನು ಮಠದ ದೇಗುಲದಲ್ಲಿ ಆರಾಧಿಸುತ್ತಿರುತ್ತಾರೆ. ಭವಾನಿ, ದುರ್ಗಾ, ರುಂಡಮಾಲ ಎಂಬ ಮೂರು ರೂಪಗಳು ಆಕೆ ಪರಕೀಯರನ್ನು ತನ್ನ ನೆಲದಿಂದ ಓಡಿಸಲು ರುಂಡಮಾಲಾಧಾರಿಯಾಗಿ ವಿಜೃಂಭಿಸುತ್ತಾಳೆ ಎಂಬ ಸಂಕೇತ ಅಲ್ಲಿರುತ್ತದೆ. ಸತ್ಯಾನಂದರು ಅನುಚರರು ಬರಗಾಲದ ಪರಿಣಾಮವಾಗಿ ಬಡತನದಿಂದ ಕಂಗೆಟ್ಟಿದ್ದ ಸುತ್ತಲಿನ ಗ್ರಾಮಸ್ಥರಿಗೆ ಬ್ರಿಟಿಷ್ ಅಧಿಕಾರಿಗಳು ಹೆದರಿಸಿ, ಬೆದರಿಸಿ ವಸೂಲು ಮಾಡಿದ್ದ ಕಂದಾಯದ ಹಣವನ್ನು, ದವಸ ಧಾನ್ಯಗಳನ್ನು ಕೇಂದ್ರ ಕಛೇರಿಗೆ ಸಾಗಾಣಿಕೆ ಮಾಡುವಾಗ ಅಡ್ಡಗಟ್ಟಿ, ಹೋರಾಡಿ ಲೂಟಿ ಮಾಡಿ ತಂದು ಆ ಬಡವರಿಗೆ ತಲುಪಿಸುತ್ತಿರುತ್ತಾರೆ. ಬ್ರಿಟಿಷರಿಗೆ ಆ ರೀತಿಯಲ್ಲಿ ಆನಂದಮಠದ ವೀರರು ಚಳ್ಳೆಹಣ್ಣು ತಿನ್ನಿಸುತ್ತಿರುತ್ತಾರೆ.

ಅಂತಹ ಒಂದು ಸಂದರ್ಭದಲ್ಲಿಯೇ ಪತ್ನಿ, ಪುತ್ರಿಯರನ್ನು ಹುಡುಕುತ್ತ ಹೊರಟಿದ್ದ ಮಹೇಂದ್ರನಿಗೆ ಭವಾನಂದರ ಭೇಟಿಯಾಗಿ ಮೊದಲಿಗೆ ಲೂಟಿಕೋರರೆಂಬ ಭ್ರಮೆಯುಂಟಾದರೂ ನಂತರದಲ್ಲಿ ಅವರೆಲ್ಲ ಮಾತೃಭೂಮಿಯ ರಕ್ಷಣೆಗೆ ನಿಂತವರೆಂಬ ಸತ್ಯದ ಅರಿವಾಗುತ್ತದೆ. ವೈಯಕ್ತಿಕ ಸುಖ, ಸಂತೋಷವನ್ನು ತ್ಯಾಗಮಾಡಿ ಬಂದವರೆಂಬುದನ್ನೂ ತಿಳಿಯುತ್ತಾನೆ. ತಾನೂ ಅವರೊಂದಿಗೆ ಸೇರಲು ನಿರ್ಧರಿಸುತ್ತಾನೆ. ತನ್ನ ಪತ್ನಿ, ಪುತ್ರಿ ಇಬ್ಬರೂ ಆನಂದಮಠದ ರಕ್ಷಣೆಯಲ್ಲಿರುವ ವಿಷಯವೂ ತಿಳಿಯುತ್ತದೆ. ಅವರನ್ನು ಭೇಟಿಮಾಡಲು ಹೋಗಿ, ಸತ್ಯಾನಂದರನ್ನು ಕಂಡು, ಅವರ ಆಶೀರ್ವಾದ ಪಡೆದು ತನ್ನ ನಿರ್ಧಾರವನ್ನು ತಿಳಿಸುತ್ತಾನೆ.

ಈ ಮಧ್ಯೆ ಬ್ರಿಟಿಷ್ ಸೈನ್ಯದ ತುಕಡಿಯೊಂದಿಗೆ ಹೋರಾಡುವ ಸಂದರ್ಭದಲ್ಲಿ ಭವಾನಂದ, ಜೀವಾನಂದರಿಬ್ಬರೂ ಸಾಯುತ್ತಾರೆ. ಮಹೇಂದ್ರ ಕುಟುಂಬವನ್ನು ಸುರಕ್ಷಿತ ತಾಣವಾಗಿದ್ದ ತನ್ನ ಊರಿನಲ್ಲಿ ನೆಲೆಗೊಳಿಸಿ ತಾನು ಸತ್ಯಾನಂದರೊಂದಿಗೆ ಸೇರಿಕೊಳ್ಳುತ್ತಾನೆ. ಮುಂದೆ ಸನ್ಯಾಸಿಗಳ ಹೋರಾಟಕ್ಕೆ ಅಪಜಯವಾದರೂ ಭವಿಷ್ಯದ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿ ಹಾಕಿದಂತಾಗುತ್ತದೆ. ಪಾತ್ರಗಳೆಲ್ಲ ಸಾಮಾನ್ಯರೇ, ಆದರೆ ಆ ದಿನಗಳಲ್ಲಿ 'ಆನಂದಮಠ'ವನ್ನು ಓದಿದವರೆಲ್ಲ ತಾವೂ ಸನ್ಯಾಸಿಯ ಪಾತ್ರದೊಂದಿಗೆ ಇದ್ದಂತೆ ಕಲ್ಪಿಸಿಕೊಳ್ಳುತ್ತಿದ್ದರು. ಭವಾನಂದ, ಜೀವಾನಂದರಂತೆ ದೇಶಸೇವೆಗೆ ಮನೆಬಿಟ್ಟು ಹೊರಡುವ ಸಂಕಲ್ಪಕ್ಕೆ ಮುಂದಾಗುತ್ತಿದ್ದರು. 'ಆನಂದಮಠ' ಓದಿದಷ್ಟೂ ಮತ್ತೆ ಮತ್ತೆ ಓದಬೇಕೆಂಬ ಆಸೆ ಮೂಡಿಸುವ ಮಾಂತ್ರಿಕ ಶಕ್ತಿ ಹೊಂದಿತ್ತು. 'ರಾಷ್ಟ್ರವೆಂದರೇನು? ಮಾತೃಭೂಮಿ ಎಂದರೇನು'? ಅದೊಂದು ಮಹಾಶಕ್ತಿ ಎಂಬ ಭಾವನೆಗಳು ಮನಸ್ಸಿನಲ್ಲಿ ಉಂಟಾಗುತ್ತ ಅವೆಲ್ಲದರ ಬಗ್ಗೆ ಚಿಂತನೆ ಮಾಡುವಂತೆ ಪ್ರೇರಣೆ ನೀಡುತ್ತಿತ್ತು.

'ಆನಂದಮಠ' ಕಾದಂಬರಿಯನ್ನು ಕನ್ನಡಕ್ಕೆ ಬಿ.ವೆಂಕಟಾಚಾರ್ಯರು ಅನುವಾದಿಸಿದರು. ಅಷ್ಟೇ ಅಲ್ಲ ಬಂಕಿಮರ ಎಲ್ಲ ಕಾದಂಬರಿಗಳನ್ನೂ ಅವರು ಕನ್ನಡಕ್ಕೆ ತಂದರು. ಇದರ ಇಂಗ್ಲಿಷ್ ಅವತರಣಿಕೆಯೂ ' The Abbey of Bliss' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಅಷ್ಟೇ ಅಲ್ಲ ಭಾರತದ ಬಹುತೇಕ 'ವಂದೇಮಾತರಂ' ಗೀತೆಯು ಪ್ರಾದೇಶಿಕ ಭಾಷೆಗಳಿಗೆ ಅನುವಾದಗೊಂಡಿತು, 1920ರವರೆಗೂ ರಾಷ್ಟ್ರಗೀತೆಯ ಗೌರವವನ್ನು ಪಡೆದಿತ್ತು. ಲಾಲಾಲಜಪತರಾಯ್ ಲಾಹೋರ್‌ನಿಂದ ಹೊರಡಿಸುತ್ತಿದ್ದ ಪತ್ರಿಕೆಗೆ 'ವಂದೇಮಾತರಂ' ಎಂದು ಹೆಸರು ನೀಡಿದ್ದರು. ಅದಕ್ಕೆ ಪ್ರೇರಣೆ 'ಆನಂದಮಠದ ವಂದೇಮಾತರಂ' ಗೀತೆ. 1907ರಲ್ಲಿ ಮೇಡಂ ಕಾಮ ಜರ್ಮನಿಯ ಸ್ಟುಟ್‌ಗಾರ್ಟ್‌ನಲ್ಲಿ ಸ್ವತಂತ್ರ ಭಾರತದ ಮೊದಲ ಧ್ವಜದ ಅನಾವರಣ ಮಾಡುವಾಗ ಅದರ ಮಧ್ಯೆ "ವಂದೇಮಾತರಂ" ಎಂಬ ಘೋಷಣೆಯಿತ್ತು. ಸ್ವಾತಂತ್ರ್ಯ ಹೋರಾಟಗಾರರು ಎಲ್ಲ ಕಡೆ ಬ್ರಿಟಿಷರ ವಿರುದ್ಧ ನಡೆಸುತ್ತಿದ್ದ ಹೋರಾಟಗಳಲ್ಲಿ ಅವರ ಪ್ರಮುಖ ಘೋಷಣೆ 'ವಂದೇಮಾತರಂ' ಆಗಿತ್ತು. ಗುಂಡೇಟಿನಿಂದ ಸಾಯುವ ಘಳಿಗೆಯಲ್ಲಿ ಕೂಡ ಆ ದೇಶಭಕ್ತರು ಹೇಳುತ್ತಿದ್ದ ಅಂತಿಮ ಮಂತ್ರವೇ 'ವಂದೇಮಾತರಂ' ಆಗಿರುತ್ತಿತ್ತು.

1947, ಆಗಸ್ಟ್ 15 ಪ್ರಾತಃಕಾಲ 6–30ಕ್ಕೆ ಆಕಾಶವಾಣಿಯಿಂದ ಪಂ.ಓಂಕಾರನಾಥಠಾಕೂರರು ರಾಗ 'ದೇಶ್'ನಲ್ಲಿ ಹಾಡಿದ 'ವಂದೇಮಾತರಂ' ಪ್ರಸಾರವಾಗಿತ್ತು. 'ಆನಂದಮಠ' ಕಾದಂಬರಿಯಲ್ಲಿ ಭವಾನಂದ ಹಾಡುವ 'ವಂದೇಮಾತರಂ' ನಮ್ಮ ದೇಶದ ಭೌಗೋಳಿಕ ಸಂಪತ್ತನ್ನು ವರ್ಣಿಸುತ್ತ ಆ ಮಾತೆಗೆ ನಮಸ್ಕರಿಸುವ ಗೀತೆಯಾಗಿದೆ. ಸಂಸ್ಕೃತ ಭಾಷೆಯಲ್ಲಿ ರಚನೆಗೊಂಡಿರುವ ಈ ಗೀತೆ ದೇಶದ ಉತ್ತರ–ದಕ್ಷಿಣ, ಪೂರ್ವ–ಪಶ್ಚಿಮ ನಾಲ್ಕೂ ದಿಕ್ಕುಗಳಲ್ಲಿ ಎಲ್ಲರ ಕಂಠಗಳಲ್ಲಿ ಮೊಳಗುತ್ತ ಸ್ವಾತಂತ್ರ್ಯ ಹೋರಾಟಕ್ಕೆ ಹುರಿದುಂಬಿಸುತ್ತಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ಕೋಟ್ಯಂತರ ಭಾರತೀಯರಲ್ಲಿ ದೇಶಪ್ರೇಮದ ತರಂಗಗಳನ್ನೆಬ್ಬಿಸಿ, ವೀರಯೋಧರನ್ನಾಗಿಸಿದ್ದ 'ವಂದೇಮಾತರಂ' ಗೀತೆ, ಆಕಾಶವಾಣಿಯಲ್ಲಿ ಪ್ರಾತಃಕಾಲದಲ್ಲಿ ಪ್ರಸಾರ ಮಾಡುತ್ತಿದ್ದ, ಈಗಲೂ ಮಾಡುತ್ತಿರುವ 'ವಂದೇಮಾತರಂ' ಗೀತೆ ಜನರ ತಾಯ್ನಾಡಿಗೆ ಭಕ್ತಿಯಿಂದ ನಮಸ್ಕರಿಸಿ ದಿನವನ್ನು ಪ್ರಾರಂಭಿಸುವ ಅದ್ಭುತ ಪರಿಣಾಮವನ್ನು ಬೀರುತ್ತಿರುವ ಗೀತೆ. ಇಂದಿಗೂ ಭಾರತದ 'ನ್ಯಾಷನಲ್ ಸಾಂಗ್' ಎಂಬ ಗೌರವ ಹೊಂದಿರುವ ಗೀತೆ. ಇಂತಹ ವಿಶಿಷ್ಟ ಶಕ್ತಿಹೊಂದಿದ ಗೀತೆಯಿಂದ ಸಂಪನ್ನವಾದ ಕೃತಿ 'ಆನಂದಮಠ'.

ಇಂದಿನ ಯುವ ಜನಾಂಗಕ್ಕೆ ಇಂತಹ ಪುಸ್ತಕಗಳ ಪರಿಚಯವಾಗಬೇಕಾದುದು ಅತ್ಯವಶ್ಯಕವಾಗಿದೆ. ಅವರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಮೂಡಿಸಲು ಸಹಕಾರಿಯಾಗುತ್ತದೆ.

●

# ಮಾಸ್ತಿ ಕನ್ನಡದ ಆಸ್ತಿ


**ಶ್ವೇತಾದ್ರಿ**
**ನಿವೃತ್ತ ಮುಖ್ಯ ಶಿಕ್ಷಕರು**

ಮಾಸ್ತಿ ಕನ್ನಡದ ಆಸ್ತಿ !! ಮಾಸ್ತಿ ಏನು ? ಅದು ಹೇಗೆ ಕನ್ನಡದ ಆಸ್ತಿ ಆಗುತ್ತದೆ ? ಲೇಖನದ ಶೀರ್ಷಿಕೆಯಿಂದ ಈ ಎಲ್ಲ ಪ್ರಶ್ನೆಗಳೂ ಮೂಡಬಹುದು. ಹೌದು. 'ಶ್ರೀನಿವಾಸ' ಕಾವ್ಯನಾಮದ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರನ್ನು ಪ್ರೀತಿ ಹಾಗೂ ಗೌರವ ಪೂರ್ವಕವಾಗಿ ಜನರು 'ಕನ್ನಡದ ಆಸ್ತಿ' ಎಂದು ಕರೆದಿದ್ದಾರೆ. ಹಾಗಾದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಯಾರು ? ಅವರ ಸಾಧನೆ ಏನು ಎಂಬುದನ್ನು ಕಿರಿದಾಗಿ ಪರಿಚಯಿಸುವ ಪ್ರಯತ್ನ ಈ ಲೇಖನ.

ಕನ್ನಡ ಭಾಷೆ ಹಾಗೂ ಸಾಹಿತ್ಯ ಆದಿ ಕವಿ ಪಂಪನಿಂದ ಪ್ರಾರಂಭವಾಗಿ ಇಂದಿನವರೆಗೂ ಶ್ರೀಮಂತವಾಗಿದೆ. ಪ್ರಾಚೀನ ಕವಿಗಳು ತಮ್ಮ ಉತ್ಕೃಷ್ಟ ಕಾವ್ಯಗಳ ರಚನೆಯ ಮೂಲಕ ರಾಜ ಮಹಾರಾಜರ ಗೌರವಕ್ಕೆ ಪಾತ್ರರಾದರೆ 20 – 21ನೇ ಶತಮಾನದಲ್ಲಿ ಭಾರತವು ಸಾಹಿತ್ಯಕ್ಕೆ ನೀಡುವ ಅತ್ಯುನ್ನತ ಪ್ರಶಸ್ತಿ ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡದ ಎಂಟು ಜನ ಸಾಹಿತಿಗಳು ತಮ್ಮ ಶ್ರೇಷ್ಠ ಸಾಹಿತ್ಯ ರಚನೆಯ ಮೂಲಕ ತಂದುಕೊಡುವುದರ ಮೂಲಕ ಕನ್ನಡ ನಾಡಿನ, ಸಾಹಿತ್ಯದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಇದು ಕನ್ನಡಿಗರೆಲ್ಲರೂ ಹೆಮ್ಮೆಪಡುವ ಸಂಗತಿಯಾಗಿದೆ. ಕುವೆಂಪು, ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯಯಂಗಾರ್, ವಿ. ಕೃ. ಗೋಕಾಕ್, ಯು. ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರರು ಕನ್ನಡ ಸಾಹಿತ್ಯ ಸರಸ್ವತಿಯ ಮಕುಟಕ್ಕೆ ಜ್ಞಾನಪೀಠದ ರತ್ನವನ್ನು ಮುಡಿಸಿ ಸಾಹಿತ್ಯ ಲೋಕದಲ್ಲಿ ಕನ್ನಡದ ಗೌರವವನ್ನು ಹೆಚ್ಚಿಸಿದ್ದಾರೆ. ಹಾಗಾಗಿ ಆಧುನಿಕ ಕನ್ನಡನಾಡಿನ ಶಿಲ್ಪಿಗಳಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಪ್ರಮುಖರಲ್ಲಿ ಒಬ್ಬರಾಗಿದ್ದಾರೆ.

ಸಾಹಿತ್ಯದ ಪ್ರಮುಖ ಪ್ರಕಾರಗಳೆಂದರೆ ಕಥೆ, ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ. ಮಾಸ್ತಿಯವರು ಈ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಕೈಯಾಡಿಸಿ ಕೃತಿಗಳನ್ನು ರಚಿಸಿದ್ದಾರೆ. ಆದರೆ ಅವರ ಪ್ರಧಾನ ಮಾಧ್ಯಮ ಸಣ್ಣಕಥೆ. ಮಾಸ್ತಿಯವರನ್ನು ಕನ್ನಡ ಸಣ್ಣಕಥೆಗಳ ಜನಕರು ಎಂದೂ ಕರೆಯುವುದುಂಟು. ಆದರೆ ಅವರಿಗಿಂತ ಮೊದಲು ಕೆರೂರು ವಾಸುದೇವಾಚಾರ್ಯರು, ಪಂಜೆ ಮಂಗೇಶರಾಯರು, ಎಂ. ಎನ್. ಕಾಮತರು ಕನ್ನಡದಲ್ಲಿ ಸಣ್ಣಕಥೆಗಳನ್ನು ರಚಿಸಿದ್ದಾರೆ. ಮಾಸ್ತಿಯವರು ಸಣ್ಣಕಥೆಯನ್ನು ವಿಶಿಷ್ಟ ಮಾಧ್ಯಮವಾಗಿಸಿಕೊಂಡು ಅದಕ್ಕೊಂದು ಸ್ವರೂಪವನ್ನು ನೀಡಿ ತನ್ನದೇ ಆದ ವೈಶಿಷ್ಟ್ಯವನ್ನು ತಂದು ಕೊಟ್ಟರು. ಮಾಸ್ತಿಯವರು ಕಥೆಗಳನ್ನು ರಚಿಸಿದ ನಂತರ ಅದನ್ನು ಅನುಸರಿಸಿ ಅನೇಕರು ಸಣ್ಣಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಕನ್ನಡದಲ್ಲಿ ಕಥಾಪ್ರಕಾರವನ್ನು ಜನಪ್ರಿಯಗೊಳಿಸಿದರು. ಮಾಸ್ತಿಯವರ ಬಗ್ಗೆ ಪ್ರಖ್ಯಾತ ವಿಮರ್ಶಕರಾದ ಗಿರಡ್ಡಿ ಗೋವಿಂದರಾಜರು ಹೀಗೆ ಹೇಳುತ್ತಾರೆ : "ಮಾಸ್ತಿಯವರು ನಮ್ಮ ಒಬ್ಬ ಮೇಜರ್ ಬರಹಗಾರರು. ಜಗತ್ತಿನ ಸಾಹಿತ್ಯದಲ್ಲಿ ಸಣ್ಣಕಥೆಯನ್ನು ಮುಖ್ಯ ಮಾಧ್ಯಮ ಮಾಡಿಕೊಂಡು, ಮೇಜರ್ ಸಾಧನೆ ಮಾಡಿ ಮೇಜರ್ ಬರಹಗಾರರಾದ ಕೆಲವೇ ಸಾಹಿತಿಗಳಲ್ಲಿ ಮಾಸ್ತಿ ಒಬ್ಬರು".

ಮಾಸ್ತಿಯವರ 15 ಕಥಾ ಸಂಕಲನಗಳು ಪ್ರಕಟಗೊಂಡಿವೆ. 1988ರಲ್ಲಿ ಮಾಸ್ತಿಯವರ 'ಸಮಗ್ರ ಕಥೆಗಳನ್ನು ಎರಡು ಸಂಪುಟಗಳಲ್ಲಿ ನೂರು ಕಥೆಗಳನ್ನು ಪ್ರಕಟಿಸಲಾಗಿದೆ. ಮಾಸ್ತಿಯವರ ಮೊದಲ ಕಥಾ ಸಂಕಲನ 'ರಂಗನ ಮದುವೆ' ಪ್ರಕಟವಾದುದು 1921ರಲ್ಲಿ. ಮಾಸ್ತಿಯವರ ಎಲ್ಲ ಕಥೆಗಳಲ್ಲಿ ಅವರ ಆಸಕ್ತಿ ಇರುವುದು ಮನುಷ್ಯ ಸ್ವಭಾವದ ಒಳ್ಳೆತನ, ಸೌಂದರ್ಯ, ಮತ್ತು ಉದಾತ್ತತೆಗಳಲ್ಲಿ. ಸಣ್ಣಕಥೆಗಳು ಬದುಕಿನ ಅರ್ಥ, ಸ್ವರೂಪಗಳನ್ನು



ವಿಶ್ಲೇಷಿಸಬಲ್ಲ ಮಾಧ್ಯಮ ಎಂಬುದನ್ನು ತಮ್ಮ ಕಥೆಗಳ ಮೂಲಕ ಅವರು ತೋರಿಸಿಕೊಟ್ಟರು.

'ಶ್ರೀನಿವಾಸ'ರು ಸುಮಾರು 125 ಕೃತಿಗಳನ್ನು ರಚಿಸಿದ್ದಾರೆ. 'ಸುಬ್ಬಣ್ಣ' ಶ್ರೀನಿವಾಸರ ನೀಳ್ಗತೆ. ಕಾದಂಬರಿಗಳಲ್ಲಿ ಪ್ರಮುಖವಾದುದು 'ಚೆನ್ನಬಸವನಾಯಕ' ಹಾಗೂ 'ಚಿಕವೀರರಾಜೇಂದ್ರ'. ಮಾಸ್ತಿಯವರ ಕಾವ್ಯಗಳಲ್ಲಿ ಮುಖ್ಯವಾದುದು 'ಶ್ರೀರಾಮಪಟ್ಟಾಭಿಷೇಕ'. 5ಕಾವ್ಯಗಳು, 2 ಕಾವ್ಯನಾಟಕಗಳನ್ನು ರಚಿಸಿದ್ದಾರೆ. "ಶ್ರೀರಾಮಪಟ್ಟಾಭಿಷೇಕ ಆಧುನಿಕ ಕನ್ನಡ ಕಾವ್ಯ ಜಗತ್ತಿನಲ್ಲಿ ಒಂದು ಮಹತ್ವದ ಕೃತಿ. ಒಂದು ಯುಗದ ಸಂಸ್ಕೃತಿಯ ಕಲ್ಪನೆ ಇಲ್ಲಿ ಹರಳುಗಟ್ಟಿದೆ. ಜೊತೆಗೆ ನವೋದಯ ಯುಗದ ಸಾಹಿತ್ಯದ ಒಂದು ಮುಖ್ಯ ಲಕ್ಷಣ ಇಲ್ಲಿ ಶಿಖರವನ್ನು ಮುಟ್ಟುತ್ತದೆ ; ಇದು ಮನುಷ್ಯನ ಯೋಗ್ಯತೆಯಲ್ಲಿ, ಘನತೆಯಲ್ಲಿ ದೃಢ ವಿಶ್ವಾಸ" ಎಂಬುದು ಎಲ್. ಎಸ್. ಶೇಷಗಿರಿರಾಯರ ಅಭಿಪ್ರಾಯ. ಮಾಸ್ತಿಯವರು ಸುಮಾರು 13 ನಾಟಕಗಳನ್ನು ರಚಿಸಿದ್ದು ಅವುಗಳಲ್ಲಿ ಬಹಳ ಜನಪ್ರಿಯವಾದುದು 'ಕಾಕನಕೋಟೆ', ತಾಳಿಕೋಟೆ ಹಾಗೂ 'ಯಶೋಧರಾ'. ಇದಲ್ಲದೆ ರವೀಂದ್ರನಾಥ ಠಾಕೂರರನ್ನು ಕುರಿತ ಜೀವನ ಚರಿತ್ರೆಯು ಪ್ರಕಟವಾಗಿದೆ. ವಾಲ್ಮೀಕಿ ರಾಮಾಯಣದ ಸಮೀಕ್ಷೆ, ಆದಿಕವಿ ವಾಲ್ಮೀಕಿ ಮಾಸ್ತಿಯವರ ರಚನೆ. ಇವುಗಳಲ್ಲದೆ ಕೆಲವು ಅನುವಾದ, ವಿಮರ್ಶಾಕೃತಿಗಳು ಪ್ರಕಟವಾಗಿದೆ.

ಪತ್ರಕರ್ತರಾಗಿಯೂ ಮಾಸ್ತಿಯವರು ದುಡಿದು ಅದರ ವಿಶಿಷ್ಟ ಅನುಭವವನ್ನು ಹೊಂದಿದ್ದರು. ಮಾಸ್ತಿಯವರು ಸರ್ಕಾರಿ ಕೆಲಸದ ನಿವೃತ್ತಿಯ ನಿರೀಕ್ಷೆಯಲ್ಲಿದ್ದಾಗ ಸಮಾಜಸೇವೆಯಲ್ಲಿ ತೊಡಗಿಸಿಕೊಳ್ಳಲು ಯೋಚಿಸಿದರು. ಆಗ ಬಂದದ್ದೇ ಸಾಹಿತ್ಯ ಪತ್ರಿಕೆಯನ್ನು ಆರಂಭಿಸುವ ಆಲೋಚನೆ. ದ. ರಾ. ಬೇಂದ್ರೆ ಮುಂತಾದವರೊಂದಿಗೆ ಚರ್ಚಿಸಿ 1939ರಲ್ಲಿ ಧಾರವಾಡದಲ್ಲಿ 'ಜೀವನ' ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಅದು ಯುದ್ಧದ ಸಮಯ. ಪತ್ರಿಕೆಗೆ ವರಮಾನ ಸಾಲದೆ ಬಹಳ ಕಷ್ಟದಲ್ಲಿ ಸಿಲುಕಿತು. ನಂತರ 1944ರಲ್ಲಿ ಪತ್ರಿಕೆಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿದರು. 25 ವರ್ಷಗಳ ಕಾಲ ಮಾಸ್ತಿಯವರೇ ಪತ್ರಿಕೆಯನ್ನು ನಡೆಸಿ ಬೆಳ್ಳಿಹಬ್ಬವನ್ನು ಆಚರಿಸಿದರು. ಚಂದಾದಾರರ ಕೊರತೆ, ಜಾಹಿರಾತಿಗಾಗಿ ಕಷ್ಟಪಡಬೇಕಾಯಿತು. ಈ ವೇಳೆಗೆ ಅವರಿಗೆ 80 ವರ್ಷ ಸಮೀಪಿಸುತ್ತಿತ್ತು. ಆದರೂ ಸೊಗಸಾದ ವಿಶೇಷ ಸಂಚಿಕೆಗಳನ್ನು ಹೊರತಂದರು. 'ಜೀವನ' ಪತ್ರಿಕೆಯ ಮೂಲಕ ಅನೇಕ ಉದಯೋನ್ಮುಖ ಬರಹಗಾರರಿಗೆ ಅವಕಾಶ ಮಾಡಿಕೊಟ್ಟರು, ನಂತರ ಸ್ನೇಹಿತರೊಬ್ಬರಿಗೆ ಪತ್ರಿಕೆಯನ್ನು ವಹಿಸಿಕೊಟ್ಟರು. ಈ ಸಂದರ್ಭದಲ್ಲಿ ಮಾಸ್ತಿಯವರು ಹೀಗೆ ಬರೆಯುತ್ತಾರೆ : "ಜೀವನ ಪತ್ರಿಕೆಯ ಇತಿಹಾಸ ನನ್ನ ಜೀವನದ ಇತಿಹಾಸದ ಒಂದು ಅಧ್ಯಾಯ. ಪತ್ರಿಕೆ ಕನ್ನಡ ಜನತೆಯ

ಪುಟ 6 ಕ್ಕೆ ➤

➢ ಪುಟ 5 ರಿಂದ.....

ಜೀವನದ ಸೇವಕ. ಅದು ವ್ಯಕ್ತಿಯನ್ನು ಅವಲಂಬಿಸಿ ನಿಲ್ಲಬಾರದು. ವ್ಯಕ್ತಿಗಳು ಹಿಂದೆ ನಿಲ್ಲುತ್ತಾರೆ. ಪತ್ರಿಕೆ ಮುಂದೆ ನಡೆಯಬೇಕು. ಪತ್ರಿಕೆಯ ಕೆಲಸವನ್ನು ಮಿತ್ರರಿಗೆ ಒಪ್ಪಿಸುತ್ತಾ ನಾನು ದೈವ ಸನ್ನಿಧಿಯಲ್ಲಿ ಈ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ನಾಡು ನುಡಿಯ ಸೇವೆಯನ್ನು ಸಂತಸವಾಗಿ ನಡೆಸುತ್ತಾ 'ಜೀವನ' ಸಾವಿರ ಕಾಲ ನಡೆಯಲಿ. ನಮ್ಮ ಜನ ಇದನ್ನು ಹೆಮ್ಮೆಯಿಂದ ತಮ್ಮದೆಂದು ನೋಡಿಕೊಳ್ಳುವಂತೆ ದೈವ ಅನುಗ್ರಹಿಸಲಿ. ಕನ್ನಡ ಚೆನ್ನವಾಗಲಿ ' ಸಿರಿಗನ್ನಡ ಗೆಲ್ಲಲಿ'. ಮಾಸ್ತಿಯವರ ಆಶಯದಲ್ಲಿ ಬಹಳಷ್ಟು ನಮ್ಮ 'ಶಿಕ್ಷಕ ಸಮಾಚಾರ' ಪತ್ರಿಕೆಗೂ ಅನ್ವಯಿಸುತ್ತದೆ. ಪತ್ರಿಕೆಗೆ ಚಂದಾದಾರರು ಸಾಕಷ್ಟು ಹೆಚ್ಚಿ ಪತ್ರಿಕೆ ಜನಪ್ರಿಯತೆಯನ್ನು ಪಡೆಯುವಂತಾಗಲೆಂದು ಆಶಿಸೋಣ.

ಮಾಸ್ತಿಯವರು 'ಕನ್ನಡದ ಆಸ್ತಿ' ಎಂದು ಮನೆ ಮಾತಾಗುವಷ್ಟು ದೊಡ್ಡ ಸಾಹಿತಿಯಾದಂತೆಯೇ ಅವರು ಬಹು ಹಿರಿಯ ವ್ಯಕ್ತಿಯೂ ಕೂಡ. ಅವರ ವ್ಯಕ್ತಿತ್ವದ ಕಡೆ ಇಣುಕು ನೋಟವನ್ನು ಹರಿಸೋಣ. ಮಾಸ್ತಿಯವರು ಜನಿಸಿದ್ದು 1891ರ ಜೂನ್ 6ರಂದು. ಸರಿಯಾಗಿ 95 ವರ್ಷಗಳ ಸಾರ್ಥಕ ತುಂಬು ಜೀವನವನ್ನು ನಡೆಸಿ 1986ರ ಜೂನ್ 6ರಂದೇ ಇಹಲೋಕವನ್ನು ತ್ಯಜಿಸಿದರು. ಅವರ ಸ್ಥಳ ಕೋಲಾರ ಜಿಲ್ಲೆಯ ಮಾಸ್ತಿ ಗ್ರಾಮ. ಅವರ ಆರಂಭಿಕ ವಿದ್ಯಾಭ್ಯಾಸ ಮಾಸ್ತಿಯ ಶಾಲೆಯಲ್ಲಿ. ನಂತರ ಅವರ ಶಿಕ್ಷಣ ಹೊಂಗೇನಹಳ್ಳಿಯಲ್ಲಿ ಮುಂದುವರೆಯಿತು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದರು. ಶಾಲೆಯಲ್ಲಿ ಉಪಾಧ್ಯಾಯರಾದ ನಾರಣಪ್ಪನವರು ಮಾಸ್ತಿಯವರ ಮೇಲೆ ಪ್ರಭಾವ ಬೀರಿದ್ದರು. ಅವರಿಂದಾಗಿ ಸಾಹಿತ್ಯದ ಪರಿಚಯವೂ ಆಗಿತ್ತು. ರಾಮಾಯಣ, ಜೈಮಿನಿ ಭಾರತಗಳನ್ನು ಓದುವ, ಕೇಳುವ ಅವಕಾಶ ದೊರೆಯಿತು. ಮುಂದೆ ಅವರು ರಾಮಾಯಣ ಪಾರಾಯಣವನ್ನು ನಿತ್ಯವೂ ಮಾಡುತ್ತಿದ್ದರು. ಎಲ್. ಎಸ್. ನಂತರ ಮುಂದಿನ ಓದಿಗೆ ಮಾಸ್ತಿಯವರು ಮೈಸೂರಿನ ವೆಸ್ಲಿಯನ್ ಹೈಸ್ಕೂಲನ್ನು ಸೇರಿದರು. ಬಡತನದಿಂದಾಗಿ ಅಲ್ಲಿ ಮಾಸ್ತಿಯವರು ವಾರಾನ್ನದ ಊಟದ ವ್ಯವಸ್ಥೆಗೆ ಹೊಂದಿಕೊಳ್ಳಬೇಕಾಯಿತು. ಪ್ರಾಢಶಾಲೆಯಲ್ಲಿ ಇಂಗ್ಲಿಷ್ ಬಳಕೆ ಬಂತು. ವಿದ್ಯಾರ್ಥಿಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿದರು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಎಫ್. ಎ. ಪರೀಕ್ಷೆಯಲ್ಲೂ ಪ್ರಥಮ ದರ್ಜೆಯ ಉತ್ತೀರ್ಣತೆ. ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದರು. ಭೌತಶಾಸ್ತ್ರ, ರಸಾಯನಶಾಸ್ತ್ರಗಳ ಅಧ್ಯಯನವನ್ನು ಆರಿಸಿಕೊಂಡರು. ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾದ ಟೇಟ್‌ರವರ ಪ್ರಭಾವ ಮಾಸ್ತಿಯವರ ಮೇಲೆ ಬಹಳವಾಗಿ ಆಯಿತು. "ಟೇಟ್ ರವರ ಪಾತ್ರಕ್ರಮದಿಂದ ಅವರು ನನಗೆ ಯಾವುದೇ ವಿಷಯವನ್ನು ಕುರಿತು ನಾನೇ ಯೋಚನೆ ಮಾಡಬೇಕು, ನಾನೇ ನಿಶ್ಚಯಕ್ಕೆ ಬರಬೇಕು, ಬೇರೆ ಎಷ್ಟು ಜನರ ಸಹಾಯ ಪಡೆದರೂ ನಿಶ್ಚಯ ಕೊನೆಗೆ ನನ್ನದಾಗಿರಬೇಕು ಎನ್ನುವುದನ್ನು ಕಲಿಸಿಕೊಟ್ಟರು. ಈ ಉಪದೇಶ, ಮಾತು ಸರಳವಾಗಿರಬೇಕು. ಅದು ಅರ್ಥವನ್ನು ಸ್ಪಷ್ಟವಾಗಿ ತಿಳಿಸಬೇಕು, ಅರ್ಥ ಸ್ಪಷ್ಟವಾಗುವುದಕ್ಕೆ ಎಷ್ಟು ಬೇಕೋ ಅಷ್ಟಕ್ಕಿಂತ ಹೆಚ್ಚಿನ ಪದಗಳನ್ನು ಬಳಸಬಾರದು ಎಂದೂ ಕಲಿಸಿತು" ಎಂದು ಮಾಸ್ತಿಯವರು ಅಭಿಪ್ರಾಯಪಡುತ್ತಾರೆ. ಬಿ. ಎ. ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾದರು. ಎಂ. ಎ. ಓದಿಗಾಗಿ ಮದರಾಸಿಗೆ ಹೊರಟರು. ನಾಲ್ಕು ತಿಂಗಳಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ತೆಗೆದುಕೊಂಡು ಪ್ರಥಮ ಸ್ಥಾನ ಗಳಿಸಿದರು. ಪರಿಣಾಮವಾಗಿ 26 ವರ್ಷ ವಯಸ್ಸಿಗೆ ಅಸಿಸ್ಟೆಂಟ್ ಕಮೀಷನರ್ ಆಗಿ ನೇಮಕಗೊಂಡರು. ಜೊತೆಜೊತೆಗೆ ಎಂ. ಎ. ಪದವಿಯನ್ನೂ ಪೂರ್ಣಗೊಳಿಸಿದರು.

ಸರ್ಕಾರಿ ಸೇವೆಯಲ್ಲಿ ಜಿಲ್ಲಾಧಿಕಾರಿ, ಅಸಿಸ್ಟೆಂಟ್ ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಸೆಕ್ರೆಟರಿ. ಹೀಗೆ ವೈವಿಧ್ಯಮಯ ಹುದ್ದೆಗಳಲ್ಲಿ ಕೆಲಸ ಮಾಡಿದರು. ಅಧಿಕಾರಿಯಾಗಿ ಮಾಸ್ತಿಯವರು ಸಮರ್ಥರು, ಪ್ರಾಮಾಣಿಕರು ಎಂದು ಹೆಸರು ಮಾಡಿದರು. ಮೈಸೂರು ಸಂಸ್ಥಾನದ ಮಹಾರಾಜ ಜಯಚಾಮರಾಜ ಒಡೆಯರರು ಮಾಸ್ತಿಯವರಿಗೆ 'ರಾಜಸೇವಾಪ್ರಸಕ್ತ' ಬಿರುದನ್ನು ನೀಡಿದರು. ಈ ಸಂದರ್ಭದಲ್ಲಿ ಮಹಾರಾಜರು "ನೀವು ನಿಮ್ಮ ಶಾಶ್ವತ ಕೃತಿಗಳಿಂದ ನಮ್ಮ ಭಾಷೆಯನ್ನೂ, ಸಾಹಿತ್ಯವನ್ನೂ ಶ್ರೀಮಂತಗೊಳಿಸಿದ್ದೀರಿ. ನೂರಾರು ವರ್ಷಗಳ ನಂತರ, ನಾನೂ ಉಳಿದವರೂ ಜನರ ನೆನಪಿನಿಂದ ಮರೆಯಾಗಿ ಹೋದಾಗ, ನೀವು ಮತ್ತು ನಿಮ್ಮ ಕಾರ್ಯ ನೆನಪಿನಲ್ಲಿ ಉಳಿಯುತ್ತದೆ" ಎಂದು ಹೇಳಿದರು. ಮಾಸ್ತಿಯವರು ನಿರೀಕ್ಷಿಸಿದ್ದ ಮಂತ್ರಿಸ್ಥಾನ ದೊರಕಲಿಲ್ಲ. ಆ ಕಾರಣದಿಂದ 1944ರ ಏಪ್ರಿಲ್ 16ರಂದು ನಿವೃತ್ತಿಯನ್ನು ಪಡೆದರು. ಸರ್ಕಾರಿ ಸೇವೆಯಲ್ಲಿ ಮಾಸ್ತಿಯವರು ಆತ್ಮಗೌರವವನ್ನು ಉಳಿಸಿಕೊಂಡರು. ತಮ್ಮ ಹಕ್ಕನ್ನು ಸಾಧಿಸಲು ಶ್ರಮಪಟ್ಟರು ; ತಮಗೆ ನ್ಯಾಯವಾಗಿ ದೊರಕಬೇಕಾದದ್ದು ತಪ್ಪಿ ಹೋಗುತ್ತದೆ ಎಂದಾಗ ಕಾಗದಗಳನ್ನು ಬರೆದು ಮೇಲಿನ ಅಧಿಕಾರಿಗಳನ್ನು ಕಂಡರು. ಆದರೆ ಅವರನ್ನು ಒಲಿಸಿಕೊಳ್ಳಲು ಎಂದೂ ಪ್ರಯತ್ನಿಸಲಿಲ್ಲ. ಮಂತ್ರಿಗಳು, ದಿವಾನರು ಕ್ರಮಬಿಟ್ಟು ಯಾರಿಗಾದರೂ ಸಹಾಯ ಮಾಡಬೇಕೆಂದು ಸೂಚಿಸಿದಾಗ ನಮ್ರವಾಗಿ ನಿರಾಕರಿಸಿದರು.

ನಿವೃತ್ತಿಯ ನಂತರವೂ ಮಾಸ್ತಿಯವರು ಸಾಹಿತ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಪ್ರತಿದಿನ ವಾಕಿಂಗ್ ಇರುತ್ತಿತ್ತು. ಸಂಜೆ ಬಸವನಗುಡಿ ಕ್ಲಬ್ಬಿಗೆ ತಪ್ಪದೆ ಪ್ರತಿದಿನವೂ ಭೇಟಿಕೊಡುತ್ತಿದ್ದರು. ಮಕ್ಕಳ ಬಗ್ಗೆ ಅವರ ಒಲವು ಬಹಳ. ಮಕ್ಕಳನ್ನು ಕಂಡಾಗ ಪ್ರೀತಿಯಿಂದ ಮಾತನಾಡಿಸಿ ಪೆಪ್ಪರಮೆಂಟು, ಚಾಕಲೇಟುಗಳನ್ನು ಕೊಟ್ಟು ಮನೆಯವರಷ್ಟೇ ಹತ್ತಿರವಾಗಿದ್ದರು. ಹಾಗಾಗಿ ಬಡಾವಣೆಯ ಮಕ್ಕಳಿಗೆ ಅವರು ಪೆಪ್ಪರಮೆಂಟ್, ಚಾಕಲೇಟ್ ತಾತ. ಅವರ ಮನಸ್ಸೂ ಮಕ್ಕಳಂತೆ ಮೃದು, ನಿರ್ಮಲ. ಯಾರೇ ತಮ್ಮನ್ನು ಭೇಟಿಯಾದರೂ ಆತ್ಮೀಯತೆಯಿಂದ ಮಾತನಾಡಿಸುವರು. ತಾವೂ ನಕ್ಕು ಅವರನ್ನೂ ನಗಿಸುತ್ತಿದ್ದರು. ಮಾಸ್ತಿಯವರದು ಬಿಚ್ಚು ಮನಸ್ಸಿನ ಮಾತು, ನೇರ ನಡೆ. ಅಭಿಪ್ರಾಯ ಬೇರೆಯಾಗಿದ್ದರೂ ಯಾವ ಕಹಿಗೂ ಅವಕಾಶವಿರಲಿಲ್ಲ.

ಮಾಸ್ತಿಯವರ ಪ್ರತಿಭೆಗೆ ಸಹಜವಾಗಿಯೇ ಅನೇಕ ಪ್ರಶಸ್ತಿ, ಗೌರವಗಳು ಅವರ ಮಡಿಲನ್ನು ಸೇರಿದೆ. 1929ರಲ್ಲಿ ಬೆಳಗಾವಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. ಆಗ ಅವರಿಗೆ ಕೇವಲ 38 ವರ್ಷ. ಇದಲ್ಲದೆ ದಕ್ಷಿಣ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 1961ರಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ. ಲಿಟ್., ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಷಿಪ್ ಹಾಗೂ 'ಚಿಕವೀರರಾಜೇಂದ್ರ' ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಎಲ್ಲಾ ಪ್ರಶಸ್ತಿಗಳಿಗೂ ಮೀರಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಕನ್ನಡ ನಾಡಿನ ಜನಮನದಲ್ಲಿ ಕನ್ನಡದ ಆಸ್ತಿಯಾಗಿ ಉಳಿದಿದ್ದಾರೆ.

"ಎಲ್ಲ ಮನುಷ್ಯರಿಗಿರುವಂತೆ ಮಾಸ್ತಿಯವರಿಗೂ ಮಿತಿಗಳಿದ್ದವು. ಆದರೆ ಸಣ್ಣತನ, ದುಷ್ಟತನ ಅವರ ಹತ್ತಿರ ಸುಳಿಯಲಿಲ್ಲ ; ಅಧಿಕಾರಿಯಾಗಿ ಪ್ರಾಮಾಣಿಕತೆಯಿಂದ, ಸೇವಾಭಾವನೆಯಿಂದ ನಡೆದುಕೊಂಡರು; ವ್ಯಕ್ತಿಯಾಗಿ, ಹೃದಯವಂತರಾಗಿ, ಸೂಕ್ಷ್ಮ ಸಂವೇದನೆಯವರಾಗಿ, ಇತರರಿಗೆ ಒಳ್ಳೆಯದನ್ನು ಹಾರೈಸುತ್ತ ಬಾಳಿದರು. ಆತ್ಮಗೌರವವನ್ನು ಬಿಡಲಿಲ್ಲ, ಅಹಂಭಾವಕ್ಕೆ ಎಡೆಕೊಡಲಿಲ್ಲ. ತಾವು ನಂಬಿದ ಮೌಲ್ಯಗಳಿಗೆ ನಿಷ್ಠರಾಗಿ ಬದುಕಿದರು. ನಾಡು ನುಡಿಗಳಿಗೆ ತಮ್ಮನ್ನು ತೇಯ್ದುಕೊಂಡರು". ಇದು ಎಲ್. ಎಸ್. ಶೇಷಗಿರಿರಾಯರ ಅಭಿಮತ. ತಮ್ಮ ಜೀವನದ ಬಗ್ಗೆ ಮಾಸ್ತಿಯವರು ಹೀಗೆ ಹೇಳುತ್ತಾರೆ : "ನನ್ನ ಜೀವನ ಒಟ್ಟಿನಲ್ಲಿ ಸುಖವುಂಡ, ಜಯಕಂಡ ಜೀವನ ಎನ್ನಬಹುದು. . . ಹೊರಗಿನ ಜೀವನದಂತೆ ಮನೆಯಲ್ಲಿನ ಜೀವನವೂ ನನ್ನ ಪಾಲಿಗೆ ಸುಖವಾಗಿಯೇ ಇದೆ". ●

# ಸೇವಾಮೂರ್ತಿ ಲಕ್ಷ್ಮಣ

**ವಿದ್ವಾನ್ ಡಾ॥ ವೆಂಕಟರಮಣ ದೇವರು ಭಟ್ಟ**
**ಪ್ರಧಾನಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ**





ಶ್ರೀಮದ್ರಾಮಾರಾಮಾಯಣದಲ್ಲಿ ಶ್ರೀರಾಮನ ವಿಷಯದಲ್ಲಿ ಮಹರ್ಷಿವಾಲ್ಮೀಕಿ ಹೇಳುವ ಮಾತು "ರಾಮೋ ವಿಗ್ರಹವಾನ್ ಧರ್ಮಃ" ರಾಮನು ಶರೀರವನ್ನು ಧರಿಸಿದ ಧರ್ಮದ ಮೂರ್ತಿಯೇ ಆಗಿದ್ದಾನೆ. ಹಾಗೆಯೇ ರಾಮಾಯಣ ಮಹಾಕಾವ್ಯವನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ಲಕ್ಷ್ಮಣನು ಸೇವಾಮೂರ್ತಿಯಾಗಿ ಶರೀರವನ್ನು ಧರಿಸಿ ಅವತರಿಸಿದ್ದಾನೆ ಎಂಬುದು ನಮ್ಮೆಲ್ಲರ ಅಂತರಂಗದಲ್ಲಿ ಒಡಮೂಡುವುದು. ಸೇವಾಧರ್ಮಕ್ಕೆ ಇನ್ನೊಂದು ಹೆಸರು ಲಕ್ಷ್ಮಣ ಎಂದರೆ ತಪ್ಪಾಗಲಾರದು.

ಸೇವಾಧರ್ಮವು ಪರಮ ಕಠಿಣವೂ ಸಹನಶೀಲವೂ ಆದ ಧರ್ಮ. ಭರ್ತೃಹರಿಯು ನೀತಿಶತಕದಲ್ಲಿ ಸೇವೆಯೆನ್ನುವುದು ಎಷ್ಟು ಕಷ್ಟಕರ ಮತ್ತು ಧರ್ಮಸಂಕಟವನ್ನುಂಟುಮಾಡುತ್ತದೆ ಎಂಬುದನ್ನು ತುಂಬ ಮಾರ್ಮಿಕವಾಗಿ ನಿರೂಪಿಸಿದ್ದಾರೆ.

**ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ।**

ಸೇವಾವೃತ್ತಿ ಕಠಿಣವಾದದ್ದು ಮತ್ತು ಯೋಗಿಗಳಿಗೂ ನಡೆಸಲು ಶಕ್ಯವಿಲ್ಲದ್ದು. ಏಕೆಂದರೆ ಸೇವಕನು ಮೌನಸ್ವಭಾವದವನಾದರೆ ಮೂಕನೆಂದು ಹಂಗಿಸುತ್ತಾರೆ. ವಾಚಾಳಿಯಾದರೆ ಹರಟೆಮಲ್ಲ ಎನ್ನುತ್ತಾರೆ. ಹತ್ತಿರದಲ್ಲಿದ್ದರೆ ಅವಿನೀತ ಎನ್ನುತ್ತಾರೆ. ದೂರದಲ್ಲಿದ್ದರೆ ಅಸಮರ್ಥ ಎಂದು ಭಾವಿಸುತ್ತಾರೆ. ತಾಳ್ಮೆ ಇದ್ದರೆ ಹೇಡಿ, ತಾಳ್ಮೆಯಿಲ್ಲದವನಾದರೆ ಕೋಪಿಷ್ಠ ಎನ್ನುತ್ತಾರೆ. ಒಟ್ಟಿನಲ್ಲಿ ಸೇವೆಯೆನ್ನುವುದು ಮನುಷ್ಯನ ಅಹಂಕಾರವನ್ನು ಕೋಪವನ್ನು ನಷ್ಟಪಡಿಸುತ್ತದೆ ಮತ್ತು ಸಹನೆಯನ್ನು ಪರೀಕ್ಷಿಸುತ್ತದೆ. ಲಕ್ಷ್ಮಣನ ಜೀವನದುದ್ದಕ್ಕೂ ಪರಿಶೀಲಿಸಿದಾಗ ಇದು ನಮ್ಮ ಅರಿವಿಗೆ ಬರುತ್ತದೆ. ಹುಟ್ಟಿನಿಂದಲೂ ರಾಮಲಕ್ಷ್ಮಣರದ್ದು ಅವಿನಾಭಾವ ಸಂಬಂಧ.

**ಅಥ ಲಕ್ಷ್ಮಣಶತ್ರುಘ್ನೌ ಸುಮಿತ್ರಾಜನಯತ್ ಸುತೌ॥**
**ಸರ್ವಾಸ್ತ್ರಕುಶಲೌ ವೀರೌ ವಿಷ್ಣೋರರ್ಧಸಮನ್ವಿತೌ।**

ವೀರರೂ, ಸರ್ವಾಸ್ತ್ರಕುಶಲರೂ, ವಿಷ್ಣುವಿನ ಅಂಶಭೂತರೂ ಆದ ಲಕ್ಷ್ಮಣಶತ್ರುಘ್ನರು ಸುಮಿತ್ರೆಯಲ್ಲಿ ಜನಿಸಿದರು. ಅವಳಿ ಮಕ್ಕಳಲ್ಲಿ ಲಕ್ಷ್ಮಣನು ಹಿರಿಯ. ಇವನು ರಾಮನು ಹುಟ್ಟಿದ ಮಾರನೆಯ ದಿನ ದಶಮೀ ತಿಥಿಯಲ್ಲಿ ಆಶ್ಲೇಷಾ ನಕ್ಷತ್ರದ ಕಡೆಯ ಪಾದದಲ್ಲಿ ಕರ್ಕಾಟಕ ಲಗ್ನದಲ್ಲಿಯೇ ಹುಟ್ಟಿದ. ಅಣ್ಣತಮ್ಮಂದಿರಲ್ಲಿ ಇರಬೇಕಾದ ಸೌಭ್ರಾತ್ರಕ್ಕೆ ಲಕ್ಷ್ಮಣನು ನಿದರ್ಶನ.

**ಬಾಲ್ಯಾತ್ ಪ್ರಭೃತಿ ಸುಸ್ನಿಗ್ಧೋ ಲಕ್ಷ್ಮಣೋ ಲಕ್ಷ್ಮಿವರ್ಧನಃ।**
**ರಾಮಸ್ಯ ಲೋಕರಾಮಸ್ಯ ಭ್ರಾತುರ್ಜ್ಯೇಷ್ಠಸ್ಯ ನಿತ್ಯಶಃ॥**
**ಸರ್ವಪ್ರಿಯಕರಸ್ತಸ್ಯ ರಾಮಸ್ಯಾಪಿ ಶರೀರತಃ।**
**ಲಕ್ಷ್ಮಣೋ ಲಕ್ಷ್ಮಿಸಂಪನ್ನೋ ಬಹಿಃಪ್ರಾಣ ಇವಾಪರಃ॥**
**ನ ಚ ತೇನ ವಿನಾ ನಿದ್ರಾಂ ಲಭತೇ ಪುರುಷೋತ್ತಮಃ।**

ಲಕ್ಷ್ಮಣನಾದರೋ ತನ್ನ ಅಣ್ಣನಾದ ಲೋಕಾಭಿರಾಮ ಶ್ರೀರಾಮನೊಡನೆ ಬಾಲ್ಯದಿಂದಲೂ ಅತ್ಯಂತ ಸ್ನೇಹದಿಂದಿದ್ದನು. ರಾಮನಿಗೂ ಲಕ್ಷ್ಮಣನನ್ನು ಕಂಡರೆ ತನ್ನ ಶರೀರಕ್ಕಿಂತಲೂ ಹೆಚ್ಚಿನ ಪ್ರೀತಿ. ಲಕ್ಷ್ಮಣನೆಂದರೆ ಹೊರಗಡೆ ಸಂಚರಿಸುವ ತನ್ನ ಪ್ರಾಣವೋ ಎಂದೇ ತಿಳಿದಿದ್ದನು. ಅವನು ಜೊತೆಯಲ್ಲಿ ಮಲಗಿಕೊಳ್ಳದಿದ್ದರೆ ರಾಮನಿಗೆ ನಿದ್ರೆಯೇ ಬಾರದು.

ಲಕ್ಷ್ಮಣನಿಗೂ ರಾಮನಲ್ಲಿ ಮೊದಲಿನಿಂದಲೂ ಅನನ್ಯ ಭ್ರಾತೃಪ್ರೇಮ. ಆ ಕಾರಣಕ್ಕಾಗಿಯೇ ರಾಮನಿಗೇನಾದರೂ ಅನ್ಯಾಯವಾದರೆ ಕೋಪಗೊಂಡು ಕೆಂಡಾಮಂಡಲವಾಗುತ್ತಾನೆ. ಇದನ್ನು ರಾಮಾಯಣದಲ್ಲಿ ಅನೇಕ ಕಡೆ ಗಮನಿಸಬಹುದು. ಶ್ರೀರಾಮನ ಪಟ್ಟಾಭಿಷೇಕ ಸಂದರ್ಭದಲ್ಲಂತೂ ಲಕ್ಷ್ಮಣನ ಕೋಪದ ಕಟ್ಟೆ ಒಡೆದದ್ದನ್ನು ಅವನಾಡುವ ಮಾತಿನಿಂದಲೇ ತಿಳಿಯಬಹುದು. ರಾಮನ ಮೇಲಿನ ಪ್ರೀತಿ ಜನ್ಮಕೊಟ್ಟ ತಂದೆ ದಶರಥಮಹಾರಾಜನನ್ನೂ ಸಹ ಕಡೆಗಣಿಸುವಂತೆ ಮಾಡಿತು. ಲಕ್ಷ್ಮಣನು ಕೌಸಲ್ಯೆಗೆ ಹೇಳುವ ಕರ್ಣಕಠೋರ ಮಾತುಗಳು:

**ನ ರೋಚತೇ ಮಮಾಪ್ಯೇತದಾರ್ಯೇ ಯದ್ರಾಘವೋ ವನಮ್।**
**ತ್ಯಕ್ತ್ವಾ ರಾಜ್ಯಶ್ರಿಯಂ ಗಚ್ಛೇತ್ ಸ್ತ್ರಿಯಾ ವಾಕ್ಯವಶಂಗತಃ॥**

"ಅಮ್ಮ, ಶ್ರೀರಾಮನು ಒಬ್ಬ ಹೆಂಗಸಿನ ಮಾತಿಗೊಳಗಾಗಿ ರಾಜ್ಯಲಕ್ಷ್ಮಿಯನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೋಗುವುದು ನನಗೂ ಹಿಡಿಸುವುದಿಲ್ಲ.

**ಪ್ರೋತ್ಸಾಹಿತೋಽಯಂ ಕೈಕೇಯ್ಯಾ ಸ ದುಷ್ಟೋ ಯದಿ ನಃ ಪಿತಾ।**
**ಅಮಿತ್ರಭೂತೋ ನಿಃಸಂಗಂ ವಧ್ಯತಾಂ ಬಧ್ಯತಾಮಪಿ॥**

ನಮ್ಮ ತಂದೆಯೆನಿಸಿಕೊಂಡ ಆ ದುಷ್ಟನೇನಾದರೂ ಕೈಕೇಯಿಂದ ಪ್ರೋತ್ಸಾಹಗೊಂಡು ನಮ್ಮನ್ನು ವಿರೋಧಿಸಿದರೆ ನಿರ್ದಾಕ್ಷಿಣ್ಯವಾಗಿ ಅವನ್ನು ಸಾಯಿಸಿಬಿಡೋಣ, ಇಲ್ಲವಾದರೆ ಹಿಡಿದು ಸೆರೆಯಲ್ಲಿಡೋಣ.

**ಹನಿಷ್ಯೇ ಪಿತರಂ ವೃದ್ಧಂ ಕೈಕೇಯ್ಯಾಸಕ್ತಮಾನಸಮ್।**
**ಕೃಪಣಂ ಚಾಸ್ಥಿರಂ ಬಾಲಂ ವೃದ್ಧಭಾವೇನ ಗರ್ಹಿತಮ್॥**

ಈ ತಂದೆಯೆನಿಸಿಕೊಂಡವನು ವೃದ್ಧನಾದರೂ ಕೈಕೇಯಿಯ ವ್ಯಾಮೋಹದಿಂದ ಹುಡುಗಾಟವಾಡುತ್ತಿದ್ದಾನೆ. ಚಂಚಲಚಿತ್ತನಾದ ಈ ಕ್ಷುದ್ರಮನುಷ್ಯನನ್ನು ಕೊಂದುಹಾಕುತ್ತೇನೆ."

**ಪುಟ 8 ಕ್ಕೆ ➢**

➤ ಪುಟ 7 ರಿಂದ.....

**ಲೋಕಪಾಲಾಃ ಸಮಸ್ತಾಸ್ತೇ ನಾದ್ಯ ರಾಮಾಭಿಷೇಚನಮ್।**
**ನ ಚ ಕೃತ್ಸ್ನಾಸ್ತ್ರಯೋ ಲೋಕಾ ವಿಹನ್ಯುಃ ಕಿಂ ಪುನಃ ಪಿತಾ॥**

ದಿಕ್ಪಾಲಕರೆಲ್ಲ ಒಟ್ಟಾಗಿ ಬಂದರೂ ಮೂರುಲೋಕವೇ ಅಡ್ಡಗಟ್ಟಿದರೂ, ರಾಮ! ನಿನ್ನ ಪಟ್ಟಾಭಿಷೇಕವನ್ನು ತಡೆದು ನಿಲ್ಲಿಸಲಾರರು. ಇನ್ನು ನಿನ್ನ ತಂದೆಯು ಏನು ಮಾಡಿಯಾನು?"

ಲಕ್ಷ್ಮಣನ ಈ ಆಲೋಚನಾ ಸರಣಿಯನ್ನು ಅವಲೋಕಿಸಿದಾಗ ಎಂಥವರಿಗೂ ಲಕ್ಷ್ಮಣನ ಮೇಲೆ ಅಗೌರವ ಉಂಟಾಗುವುದು ಸಹಜ. ಇಂಥಹದ್ದೇ ಸನ್ನಿವೇಶ ಇನ್ನೊಮ್ಮೆ ಘಟಿಸಿದ್ದು ಚಿತ್ರಕೂಟವನದಲ್ಲಿ. ರಾಮಲಕ್ಷ್ಮಣಸೀತೆಯರು ವನವಾಸದಲ್ಲಿದ್ದಾಗ, ಶ್ರೀರಾಮನನ್ನೇ ರಾಜನನ್ನಾಗಿ ಮಾಡಬೇಕೆಂದು ನಿಶ್ಚಯಿಸಿದ ಭರತನು ಸೇನಾಸಮೇತನಾಗಿ ಚಿತ್ರಕೂಟದೆಡೆ ಬರುತ್ತಿರುವಾಗ ದೂರದಿಂದಲೇ ಗಮನಿಸಿದ ಲಕ್ಷ್ಮಣನು, ಭರತನು ಅಣ್ಣನ ಮೇಲೆ ಯುದ್ಧಕ್ಕೆಂದೇ ಬಂದಿರಬೇಕೆಂದು ನಿಶ್ಚಯಿಸಿ ಕೋಪಗೊಂಡು ಅವನ ಮೇಲೆ ಯುದ್ಧಮಾಡಲು ಸನ್ನದ್ಧನಾಗುತ್ತಾನೆ. ಲಕ್ಷ್ಮಣನ ಈ ತುಮುಲ, ಕೋಪ ಮತ್ತು ಅಂತರಂಗದ ವೇದನೆಗೆ ಕಾರಣ ತನ್ನ ಪ್ರೀತಿಯ ಅಣ್ಣನಿಗೆ ಉಂಟಾದ ಅನ್ಯಾಯ. ಅಣ್ಣನ ಮೇಲಿನ ಅತಿಯಾದ ಪ್ರೀತಿ ಇಂತಹ ವಿಪರೀತ ಭಾವನೆಯ ಪರಿಣಾಮಕ್ಕೆ ಕಾರಣವಾಯಿತೆಂದು ಎಂಥಹವರಿಂದಲೂ ಊಹಿಸಲು ಸಾಧ್ಯ. ನಮ್ಮ ಅತ್ಯಂತ ಪ್ರೀತಿಪಾತ್ರರಾದವರಿಗೆ ಅನ್ಯಾಯವಾದಾಗ ನಮಗೂ ಸಹ ಕೋಪಬರುವುದು ಸಹಜ ಅಲ್ಲವೇ?

ಲಕ್ಷ್ಮಣನು ಮೇಲ್ನೋಟಕ್ಕೆ ಉಗ್ರಸ್ವಭಾವದವನಂತೆ ತೋರಿದರೂ ಅವನು ಸೌಮ್ಯಸ್ವಭಾವದವನೇ. ಹಾಗಾಗಿಯೇ ಶ್ರೀರಾಮನು ಅವನನ್ನು ಸಂಬೋಧಿಸಿ ಹೇ ಸೌಮ್ಯ! ಅಂತಲೇ ಕರೆಯುತ್ತಾನೆ. ರಾಮನು ಮೃದುಮಧುರ ಮಾತುಗಳಿಂದ ಅರ್ಥೈಸಿದಾಗ ತಕ್ಷಣ ತನ್ನ ತಪ್ಪಿನ ಅರಿವಾಗಿ ಲಕ್ಷ್ಮಣನು ಕ್ಷಮೆ ಕೇಳುತ್ತಾನೆ. ಇದು ಲಕ್ಷ್ಮಣನಲ್ಲಿ ಕಾಣಬಹುದಾದಂತಹ ವಿಶೇಷಗುಣ. ಇಂಥಹ ಎಷ್ಟೋ ಘಟನೆಗಳನ್ನು ರಾಮಾಯಣದಲ್ಲಿ ಕಾಣಬಹುದು. ರಾಮನು ವನವಾಸಕ್ಕೆ ಹೊರಟಾಗ ಲಕ್ಷ್ಮಣನು "ನಾನೂ ನಿನ್ನ ಜೊತೆಗೆ ಕಾಡಿಗೆ ಬರುತ್ತೇನೆ, ಅನುಮತಿ ಕೊಡು" ಎಂದು ಹೇಳಿದಾಗ, ರಾಮನು ಅವನ ಬೇಡಿಕೆಯನ್ನು ನಿರಾಕರಿಸಿ "ವನವಾಸಕ್ಕೆ ಹೋಗಲು ಅಪ್ಪಣೆಯಾಗಿರುವುದು ನನಗೆ ಮಾತ್ರ. ಆದ್ದರಿಂದ ನೀನು ಪತ್ನಿಯಾದ ಊರ್ಮಿಳೆಯ ಜೊತೆಯಲ್ಲಿ ಇಲ್ಲಿಯೇ ಇದ್ದು ತಾಯಂದಿರನ್ನು ನೋಡಿಕೋ" ಎಂದು ಹೇಳುತ್ತಾನೆ. ಆಗ ಲಕ್ಷ್ಮಣನು ಹೇಳುವ ಮಾತುಗಳು: "ಅಣ್ಣ! ಸದಾ ನಿನ್ನ ಜೊತೆಗೇ ಬರುತ್ತಿರಬಹುದೆಂದು ನನಗೆ ಎಂದೋ ಅನುಮತಿಯನ್ನು ಕೊಟ್ಟಿದ್ದೀಯೆ. ಹೀಗಿರುವಾಗ ಈಗ ನನ್ನನ್ನು ತಡೆಯುವುದೇಕೆ? ಅರಣ್ಯಕ್ಕೆ ಬರಲು ನನಗೆ ಅಪೇಕ್ಷೆಯಾಗಿರುವಾಗ ನೀನು ಬೇಡವೆನ್ನಬೇಕಾದರೆ ನಾನು ಯಾವ ತಪ್ಪನ್ನು ಮಾಡಿದೆನೋ ಎಂದು ಸಂದೇಹವಾಗುತ್ತದೆ. ಅದೇನೆಂದು ನಾನು ತಿಳಿಯಬೇಕು. ನಾನು ನಿನಗೆ ಎಚ್ಚರ–ನಿದ್ರೆಗಳೆಂಬ ವ್ಯತ್ಯಾಸವಿಲ್ಲದಂತೆ ಸರ್ವಾವಸ್ಥೆಗಳಲ್ಲೂ ಸೇವೆ ಮಾಡುವುದೇ ನನ್ನ ಧರ್ಮ" ಎಂದು ಹೇಳಿ, ಹಠಮಾಡಿ ಅಣ್ಣನನ್ನು ಒಪ್ಪಿಸಿ ತಾನೂ ವನವಾಸಕ್ಕೆ ತೆರಳುತ್ತಾನೆ.

**ತಂ ವ್ರಜಂತಂ ಪ್ರಿಯೋ ಭ್ರಾತಾ ಲಕ್ಷ್ಮಣೋಽನುಜಗಾಮ ಹ।**
**ಸ್ನೇಹಾದ್ವಿನಯಸಂಪನ್ನಃ ಸುಮಿತ್ರಾನಂದವರ್ಧನಃ॥**

ಸುಮಿತ್ರಾದೇವಿಯ ನಲ್ಮೆಯ ಮಗನೂ, ಶ್ರೀರಾಮನಪ್ರೀತಿಯ ತಮ್ಮನೂ, ವಿನೀತನೂ ಆದ ಲಕ್ಷ್ಮಣನು ಅಣ್ಣನಮೇಲಿನ ಸ್ನೇಹದಿಂದ ಅವನ್ನು ಹಿಂಬಾಲಿಸಿ ತಾನೂ ಅರಣ್ಯಕ್ಕೆ ಹೊರಟುಬಿಟ್ಟನು. ಇಲ್ಲಿಂದ ಮುಂದೆ ಲಕ್ಷ್ಮಣನ ನಿಜವಾದ ಸೇವೆಯ ಆಳ–ಅಗಲ ಗೊತ್ತಾಗುವುದು. ಹದಿನಾಲ್ಕು ವರ್ಷಗಳಕಾಲ ಕಾಡಿನಲ್ಲಿ ಸರಿಯಾಗಿ ನಿದ್ದೆಮಾಡದೆ ಅಣ್ಣ ಅತ್ತಿಗೆಯ ಸೇವೆಯನ್ನು ಅನವರತ ಅನನ್ಯಭಕ್ತಿಯಿಂದ ಮಾಡಿದ ಮಹಾಪುರುಷ. ಗುಹಲಕ್ಷ್ಮಣರು ರಾತ್ರಿಯೆಲ್ಲ ನಿದ್ರೆಮಾಡದೇ ಸಂಭಾಷಿಸುತ್ತಿರುವಾಗ, ಲಕ್ಷ್ಮಣನು ಗುಹನಿಗೆ ಹೇಳುವ ಮಾತು ಮನಕಲಕುವಂಥಹದ್ದು.

**ಕಥಂ ದಾಶರಥೌ ಭೂಮೌ ಶಯಾನೇ ಸಹ ಸೀತಯಾ।**
**ಶಕ್ಯಾ ನಿದ್ರಾ ಮಯಾ ಲಬ್ಧುಂ ಜೀವಿತಂ ವಾ ಸುಖಾನಿ ವಾ॥**

ಶ್ರೀರಾಮನೂ ಸೀತಾದೇವಿಯೂ ನೆಲದಮೇಲೆ ಮಲಗಿರುವಾಗ ನನಗೆ ನಿದ್ರೆ ಬರುವುದಾದರೂ ಹೇಗೆ? ಆಹಾರವಾಗಲಿ, ಸುಖವಾಗಲಿ ಬೇಕೆನಿಸೀತೆ?

ರಾಮನಿಗೂ ಸಹ ಲಕ್ಷ್ಮಣನ ಮೇಲೆ ಅಗಾಧ ಪ್ರೀತಿ. ಲಂಕೆಯಲ್ಲಿ ಯುದ್ಧನಡೆಯುತ್ತಿರುವಾಗ ಲಕ್ಷ್ಮಣನು ಜ್ಞಾನತಪ್ಪಿ ಬಿದ್ದಸಮಯದಲ್ಲಿ ರಾಮನು ಗೋಳಿಡುವ ಪರಿ:

**ಶಕ್ಯಾ ಸೀತಾಸಮಾ ನಾರೀ ಮರ್ತ್ಯಲೋಕೇ ವಿಚಿನ್ವತಾ।**
**ನ ಲಕ್ಷ್ಮಣಸಮೋ ಭ್ರಾತಾ ಸಚಿವಃ ಸಾಂಪರಾಯಿಕಃ॥**

ಹುಡುಕಿ ನೋಡಿದರೆ ಸೀತೆಯಂತಹ ಹೆಂಡತಿ ಸಿಗಬಹುದು. ಆದರೆ ಲಕ್ಷ್ಮಣನಂಥ ಮಹಾವೀರನಾದ ಸಹೋದರ ಎಲ್ಲಿ ಸಿಗುತ್ತಾನೆ? ರಾಮನ ಈ ಮಾತು ರೋಮಾಂಚನವನ್ನುಂಟು ಮಾಡುವಂಥದ್ದು. ರಾಮನಿಗೆ ಲಕ್ಷ್ಮಣನ ಮೇಲೆ ಇರುವ ವಾತ್ಸಲ್ಯ ಸೀತೆಯ ಮಾತಿನಿಂದಲೂ ಧ್ವನಿತವಾಗುತ್ತದೆ.

**ಮತ್ತಃ ಪ್ರಿಯತರೋ ನಿತ್ಯಂ ಭ್ರಾತಾ ರಾಮಸ್ಯ ಲಕ್ಷ್ಮಣಃ।**
**ಯಂ ದೃಷ್ಟ್ವಾ ರಾಘವೋ ನೈವ ವೃತ್ತಮಾರ್ಯಮ್ ಅನುಸ್ಮರೇತ್॥**

"ನನ್ನ ಪತಿ ರಾಮಚಂದ್ರನಿಗೆ ಲಕ್ಷ್ಮಣನೇ ನನಗಿಂತ ಹೆಚ್ಚು ಪ್ರಿಯನಾದವನು. ಲಕ್ಷ್ಮಣನ ಜೊತೆಯಲ್ಲಿದ್ದರೆ ರಾಮಚಂದ್ರನಿಗೆ ಸ್ವರ್ಗಸ್ಥನಾದ ತಂದೆ ದಶರಥನ ನೆನಪೂ ಬಾರದು". ಸಾಮಾನ್ಯವಾಗಿ ಪತಿಗೆ ಪತ್ನಿಯೇ ಅತ್ಯಂತ ಪ್ರಿಯಳು. ಅದರಲ್ಲೂ ರಾಮನಿಗೆ ಸೀತೆ ಹೃದಯಸ್ಥಾನದಲ್ಲಿರುವವಳು. ಸೀತೆಯಿಲ್ಲದೇ ರಾಮನಿಲ್ಲ. ಹೀಗಿರುವಾಗ ಸೀತೆಯ ಈ ಮಾತು ಅವರೀರ್ವರ ಅನ್ಯೋನ್ಯಪ್ರೀತಿ ಎಷ್ಟು ಸಾಪೇಕ್ಷ ಎಂಬುದನ್ನು ಸಾದರಪಡಿಸುತ್ತದೆ. ವನವಾಸದಲ್ಲಂತೂ ಲಕ್ಷ್ಮಣನು ರಾಮನಿಗೆ ಕೇವಲ ತಮ್ಮನಾಗಿರದೆ ಪ್ರಿಯಸಖನೂ ಆಗಿದ್ದನು. ಅಣ್ಣನ ಸುಖ, ದುಃಖ, ನೋವು, ನಲಿವು, ದುಮ್ಮಾನಗಳಿಗೆ ಸ್ಪಂದಿಸಿ ಸಂಜೀವಿನಿಯಂತಿದ್ದನು. ಸೀತೆಯನ್ನು ಕಳೆದುಕೊಂಡಂತಹ ರಾಮನು ಗಿಡ, ಮರ, ಪ್ರಾಣಿ, ಪಕ್ಷಿಗಳ ಮನಕರಗುವಂತೆ ಅರಣ್ಯರೋದನ ಮಾಡುತ್ತಿರಲಾಗಿ ಲಕ್ಷ್ಮಣನ ಸಾಂತ್ವನದ ಮಾತುಗಳೇ ರಾಮನನ್ನು ಬದುಕಿಸಿವೆ ಎಂದರೆ ತಪ್ಪಾಗಲಾರದು. ಮುಂದೆ ಸೀತೆಯನ್ನು ಅರಸುತ್ತಾ ಕಿಷ್ಕಿಂದೆಗೆ ಹೋದಾಗ ಸುಗ್ರೀವಾದಿಗಳ ಭೇಟಿಯಾದ ಸಂದರ್ಭದಲ್ಲಿ ಅವರು ತೋರಿಸಿದ ಆಭರಣಗಳನ್ನು ನೋಡಿದ ಕೂಡಲೇ ಶ್ರೀರಾಮನಿಗೆ ಸೀತೆಯ ನೆನಪಾಗಿ ದುಃಖ ಉಕ್ಕಿಬಂದು ಕಣ್ಣು ಮಂಜಾಗಿ ಆಭರಣಗಳನ್ನು ಗುರುತಿಸುವುದು ಅಸಾಧ್ಯವಾಯಿತು. ಆಗ ಲಕ್ಷ್ಮಣನು ಆ ಆಭರಣಗಳನ್ನು ನೋಡಿ ಕೊಟ್ಟ ಉತ್ತರ ಮೈ ನವಿರೇಳಿಸುವಂತಹದ್ದು.

**ನಾಹಂ ಜಾನಾಮಿ ಕೇಯೂರೇ ನಾಹಂ ಜಾನಾಮಿ ಕುಂಡಲೇ।**
**ನೂಪುರೇತ್ವಭಿಜಾನಾಮಿ ನಿತ್ಯಂ ಪಾದಾಭಿವಂದನಾತ್॥**

ಅಣ್ಣ! ಈ ಕೇಯೂರ ಕುಂಡಲಗಳನ್ನು ನಾನು ಕಂಡವನಲ್ಲ. ನನಗೆ ಅವುಗಳ ಗುರುತಿಲ್ಲ. ಈ ಕಾಲಂದಿಗೆಗಳು ಮಾತ್ರ ಅತ್ತಿಗೆಯವೇ ಹೌದು. ನಿತ್ಯವೂ ದೇವಿಯ ಪಾದಗಳಿಗೆ ವಂದಿಸುವಾಗ ಇವುಗಳನ್ನು ನೋಡಿದ್ದೇನೆ". ಎಂತಹ ಉನ್ನತವಾದ ವಿಚಾರಧಾರೆಯನ್ನು ಲಕ್ಷ್ಮಣನು ಇಲ್ಲಿ ಹರಿಬಿಟ್ಟಿದ್ದಾನೆ. ಭಾರತೀಯ ಸಂಸ್ಕೃತಿಯಲ್ಲಿ ನಾರಿಯ ಸ್ಥಾನಮಾನ ಎಷ್ಟು ಪೂಜನೀಯವಾಗಿದೆ ಎಂಬುದನ್ನು ಸಾರುತ್ತಿದೆ. 'ಮಾತೃವತ್ ಪರದಾರೇಷು ಸ್ತ್ರೀಯರನ್ನು ತಾಯಿಯಂತೆ ಗೌರವಿಸು' ಎಂದು ಸಾರುತ್ತದೆ ನಮ್ಮ ಸನಾತನ ಸಂಸ್ಕೃತಿ.

ಪುಟ 9 ಕ್ಕೆ ➤

➢ ಪುಟ 8 ರಿಂದ.....

ನಮ್ಮ ಪೂರ್ವಿಕರು ಸಹಸ್ರಾರು ವರ್ಷಗಳಿಂದಲೂ ಇದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಆದರೆ ಇಂದಿನ ಮುಂದುವರೆದ ಸಮಾಜ ಸ್ತ್ರೀಸ್ವಾತಂತ್ರ್ಯ ಎಂಬ ಬಣ್ಣದ ಮಾತಿನ ಮೋಡಿಯಿಂದ ಸ್ವೇಚ್ಛಾಚಾರಕ್ಕೆ ರಹದಾರಿಯನ್ನು ಮಾಡಿಕೊಟ್ಟು ಸ್ತ್ರೀಯರನ್ನು ಶೋಷಣೆಮಾಡುತ್ತ, ಅತ್ಯಾಚಾರ ವ್ಯಭಿಚಾರಗಳ ಕೂಪಕ್ಕೆ ತಳ್ಳುವುದರ ಮೂಲಕ ಆರೋಗ್ಯಕರ ಕೌಟುಂಬಿಕ ವ್ಯವಸ್ಥೆಯನ್ನೇ ಹಾಳುಮಾಡಲು ಹೊರಟಿದೆ.

ಕಾಲಪುರುಷನ ಆಗಮನ ಮತ್ತು ನಂತರದ ಘಟನೆಗಳಂತೂ ಅತ್ಯಂತ ಹೃದಯವಿದ್ರಾವಕ. ಇಲ್ಲಿ ವಿಧಿಯ ಆಟ ಎಷ್ಟು ಬಲವತ್ತರವಾದದ್ದು ಹಾಗೂ ಕ್ರೂರವಾದದ್ದು ಎಂಬುದನ್ನು ತಿಳಿದುಕೊಳ್ಳಬಹುದು. ಇಲ್ಲಿನ ಸಂದರ್ಭಗಳು ಲಕ್ಷ್ಮಣನ ಸ್ವಾಮಿನಿಷ್ಠೆಗೆ ಮತ್ತು ಬುದ್ಧಿಶಕ್ತಿಗೆ ಒರೆಗಲ್ಲನ್ನು ಹಚ್ಚಿದಂತಿದೆ. ಚಿಂತಾಕ್ರಾಂತನಾಗಿ ಧರ್ಮಸಂಕಟದ ದ್ವಂದ್ವದಲ್ಲಿ ಸಿಲುಕಿ ದಾರಿಕಾಣದೇ ಕುಳಿತಿರುವ ಧರ್ಮಮೂರ್ತಿ ಶ್ರೀರಾಮನಿಗೆ ಸೇವಾಮೂರ್ತಿ ಲಕ್ಷ್ಮಣನೇ ಪರಿಹಾರಮಾರ್ಗವನ್ನು ಬೋಧಿಸುವಂಥಹ ವಿಚಿತ್ರ ಸನ್ನಿವೇಶವನ್ನು ಬಹುಶಃ ಯಾರೊಬ್ಬರೂ ಮರೆಯಲಾರರು. ಕಾಲಪುರುಷನು ಶ್ರೀರಾಮನಲ್ಲಿಗೆ ಬಂದು "ನಿನ್ನೊಡನೆ ರಹಸ್ಯ ಸಂಭಾಷಣೆ ಮಾಡಬೇಕಿದೆ. ನಿನ್ನ ನಂಬಿಕೆಗೆ ತುಂಬ ಪಾತ್ರನಾದ ಒಬ್ಬನನ್ನು ಬಾಗಿಲಿನಲ್ಲಿ ಕಾವಲಿರಲು ಹೇಳು. ನಾವು ಮಾತನಾಡುತ್ತಿರುವುದನ್ನು ಯಾರೂ ನೋಡಬಾರದು, ಕೇಳಲೂ ಬಾರದು. ಹಾಗೇನಾದರೂ ಮಾಡಿದರೆ ಅವರಿಗೆ ಮರಣದಂಡನೆ ನೀಡು" ಎಂದು ಹೇಳುತ್ತಾನೆ. ಆಗ ರಾಮನು–" ಲಕ್ಷ್ಮಣ, ನೀನು ದ್ವಾರದಲ್ಲಿ ನಿಲ್ಲು. ನನಗೂ ಈ ಮುನಿಗಳಿಗೂ ನಡೆಯುವ ಸಂಭಾಷಣೆ ರಹಸ್ಯವಾದದ್ದು. ಈ ಸಮಯದಲ್ಲಿ ಯಾರಾದರೂ ಒಳಗೆ ಬಂದು ನಮ್ಮ ಮಾತುಕಥೆಗಳನ್ನು ಕೇಳಿದರೆ ಅಥವಾ ನೋಡಿದರೆ ಆತನನ್ನು ನಾನು ವಧಿಸುವೆನು" ಎಂದು ಆಜ್ಞಾಪಿಸುತ್ತಾನೆ.

ಆದರೆ ಕಾಲಚಕ್ರ ವಿಪರೀತವಾಗಿ ಸುತ್ತುತ್ತದೆ. ಶ್ರೀರಾಮನೂ ಕಾಲಪುರುಷನೂ ಸಂಭಾಷಿಸುತ್ತಿರುವಾಗ ಮಹಾಮುಂಗೋಪಿಯಾದ ದುರ್ವಾಸಮುನಿಗಳು ರಾಮನನ್ನು ಸಂದರ್ಶಿಸಲು ರಾಜದ್ವಾರಕ್ಕೆ ಬಂದರು. ಆಗ ಕಾವಲಾಗಿ ನಿಂತಿದ್ದ ಲಕ್ಷ್ಮಣನು 'ಶ್ರೀರಾಮನು ಕಾರ್ಯಾಂತರದಲ್ಲಿ ವ್ಯಾಪೃತನಾಗಿದ್ದಾನೆ, ಸ್ವಲ್ಪ ಹೊತ್ತು ಕಾಯಬೇಕಾಗಿದೆ, ಎಂದು ಹೇಳಲಾಗಿ, ಕೋಪಗೊಂಡ ದುರ್ವಾಸರು "ಎಲೈ ಲಕ್ಷ್ಮಣ, ಈ ಕ್ಷಣದಲ್ಲಿಯೇ ರಾಮನಿಗೆ ತಿಳಿಸದಿದ್ದರೆ, ನಿನ್ನ ರಾಜ್ಯವನ್ನು ನಿನ್ನನ್ನು ಈ ನಗರವನ್ನು ರಾಮನನ್ನು ಶಪಿಸಿಬಿಡುವೆನು" ಎಂದು ಆರ್ಭಟಿಸಿದರು. ಆ ಮಾತನ್ನು ಕೇಳಿ ಲಕ್ಷ್ಮಣನು, ಅವರು ಹಾಗೆ ಮಾಡತಕ್ಕವರೇ ಎಂದು ನಿಶ್ಚಯಿಸಿ "ನನ್ನೊಬ್ಬನಿಗೆ ಮರಣವಾದರೂ ಬರಲಿ, ಸರ್ವನಾಶವಾಗದಿರಲಿ" ಎಂದು ನಿರ್ಣಯಿಸಿ, ಒಳಗೆ ಹೋಗಿ ದುರ್ವಾಸರು ಬಂದಿರುವರೆಂದು ಶ್ರೀರಾಮನಿಗೆ ನಿವೇದಿಸುತ್ತಾನೆ.

ಆಜ್ಞೆಯನ್ನು ಮೀರಿದ್ದಕ್ಕೆ ಲಕ್ಷ್ಮಣನಿಗೆ ಶಿಕ್ಷೆ ವಿಧಿಸಲು ಶ್ರೀರಾಮನಿಗೂ ಸಂಕಟ. ತಲೆತಗ್ಗಿಸಿ ದೈನ್ಯದಿಂದ ಕುಳಿತಿರುವ ಅಣ್ಣನನ್ನು ಕಂಡು ಲಕ್ಷ್ಮಣನು ಉತ್ಸಾಹದಿಂದ ಹೇಳುವ ಮಾತು:

**ಯದಿ ಪ್ರೀತಿರ್ಮಹಾರಾಜ ಯದ್ಯನುಗ್ರಾಹ್ಯತಾ ಮಯಿ।**
**ಜಹಿ ಮಾಂ ನಿರ್ವಿಶಂಕಸ್ತ್ವಂ ಧರ್ಮಂ ವರ್ಧಯ ರಾಘವ॥**

ಮಹಾರಾಜ, ನನ್ನಲ್ಲಿ ಪ್ರೀತಿ ಇರುವುದಾದರೆ, ನಾನು ಅನುಗ್ರಹಕ್ಕೆ ಪಾತ್ರನಾದರೆ, ನಿಶ್ಶಂಕೆಯಿಂದ ನನ್ನನ್ನು ವಧಿಸು. ಧರ್ಮವನ್ನು ಪೋಷಿಸು" ಎಂದನು.

ಆಗ ರಾಜಗುರುಗಳಾದ ವಸಿಷ್ಠರು " ರಾಘವ, ಲಕ್ಷ್ಮಣನ ವಿಯೋಗವು ಉಂಟಾಗುವುದೆಂದು ಗೊತ್ತಿತ್ತು. ಈತನನ್ನು ಪರಿತ್ಯಜಿಸು. ಕಾಲವು ಪ್ರಬಲವಾದುದು. ಪ್ರತಿಜ್ಞೆಯು ಸುಳ್ಳಾದರೆ ಧರ್ಮವು ಲಯವಾದೀತು" ಎಂದು ಹೇಳಲಾಗಿ ಶ್ರೀರಾಮನು:

**ವಿಸರ್ಜಯಾಮಿ ಸೌಮಿತ್ರೇ ಮಾ ಭೂದ್ಧರ್ಮವಿಪರ್ಯಯಃ।**
**ತ್ಯಾಗೋ ವಧೋ ವಾ ವಿಹಿತಃ ಸಾಧೂನಾಂ ತೂಭಯಂ ಸಮಮ್॥**

ಸೌಮಿತ್ರಿ, ಧರ್ಮಗ್ಲಾನಿಯಾಗಬಾರದೆಂದು ನಿನ್ನನ್ನು ಪರಿತ್ಯಜಿಸಿದ್ದೇನೆ. ಸಜ್ಜನರಿಗೆ ವಧೆ ಅಥವಾ ಪರಿತ್ಯಾಗ ಇವೆರಡೂ ಸಮವೆಂದು ಶಾಸ್ತ್ರವಿಹಿತವಾಗಿದೆ.

ನಂತರ ಅವನು ನೇರವಾಗಿ ಸರಯೂ ನದಿತೀರಕ್ಕೆ ಹೋಗಿ ಶುದ್ಧಾಚಮನ ಮಾಡಿ ಸಕಲೇಂದ್ರಿಯ ದ್ವಾರಗಳನ್ನು ನಿರೋಧಿಸಿ ಯೋಗಯುಕ್ತನಾಗಿ ಶ್ವಾಸೋಚ್ಛ್ವಾಸಗಳನ್ನು ನಿಗ್ರಹಿ ಭೌತಿಕದೇಹವನ್ನು ತ್ಯಜಿಸಿ ಸ್ವರ್ಗಲೋಕವನ್ನು ಸೇರುತ್ತಾನೆ. ರಾಮನಿಲ್ಲದೆ ಲಕ್ಷ್ಮಣನಿಲ್ಲ, ಲಕ್ಷ್ಮಣನಿಲ್ಲದೆ ರಾಮನಿಲ್ಲ. ಲಕ್ಷ್ಮಣನನ್ನು ವಿಸರ್ಜಿಸಿದ ಮೇಲೆ ಶ್ರೀರಾಮನು ಶೋಕಸಂತಪ್ತನಾಗಿ ಭರತನಿಗೆ ಪಟ್ಟಾಭಿಷೇಕ ಮಾಡಿ ಮಹಾಪ್ರಸ್ಥಾನ ಸಂಕಲ್ಪದ ಮೂಲಕ ಸ್ವರ್ಗಾರೋಹಣ ಮಾಡುತ್ತಾನೆ.

ಎಂಥವರಿಗೂ ಕಣ್ಣೀರು ಮಿಡಿದು ಬರುವ ಸಂದರ್ಭ. ಲಕ್ಷ್ಮಣನ ಜೀವನವೆಲ್ಲ ತ್ಯಾಗವೇ ತುಂಬಿದೆ. ಅವನು ಸೇವಾಪುರುಷ. ಭಾರತೀಯ ಮೌಲ್ಯಗಳ ಕಣ್ಮಣಿ ಲಕ್ಷ್ಮಣ.

●

# ಉತ್ತರ ಜಿಲ್ಲಾ ಪದಾಧಿಕಾರಿಗಳ ಸಭೆ ವರದಿ

ದಿನಾಂಕ 30.5.20 ರಂದು ಮಧ್ಯಾಹ್ನ 5 ಗಂಟೆಯಿಂದ 6 ಗಂಟೆಯವರೆಗೆ ಬೆಂಗಳೂರು ಉತ್ತರ ಜಿಲ್ಲಾ ಪದಾಧಿಕಾರಿಗಳ ಆನ್ ಲೈನ್ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ರಾಜ್ಯಕಾರ್ಯಕಾರಿಣಿಯ ನಿರ್ಣಯಗಳನ್ನು ಜೆ.ಎಂ ಜೋಷಿಯವರು ಸಭೆಗೆ ತಿಳಿಸಿದರು. ಸದಸ್ಯತ್ವ ಅಭಿಯಾನ ವರದಿಯನ್ನು ಮಂಡಿಸಲಾಯಿತು. ಉತ್ತರ ವಲಯ–2 ಮತ್ತು ಉತ್ತರವಲಯ–4ರಲ್ಲಿ ಸಂಘಟನೆಯನ್ನು ಬಲಪಡಿಸಲು ತೀರ್ಮಾನಿಸಲಾಯಿತು. ಎಸ್ಎಸ್ಎಲ್‌ಸಿ ಪರೀಕ್ಷಾ ಸಮಯದಲ್ಲಿ ಶಿಕ್ಷಕರು ಕೈಗೊಳ್ಳಬೇಕಾದ ಸಂರಕ್ಷಣಾ ಮುನ್ನೆಚ್ಚರಿಕೆಗಳನ್ನು ಅನುಸರಿಸುವಂತೆ ತಿಳಿಸಲಾಯಿತು. ಲಾಕ್‌ಡೌನ್ ಸಂದರ್ಭದಲ್ಲಿ ನಮ್ಮ ಸಂಘದ ಪದಾಧಿಕಾರಿಗಳು ಮಾಡುತ್ತಿರುವ ಶೈಕ್ಷಣಿಕ ಚಟುವಟಿಕೆಗಳು ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

2020–21 ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಮತ್ತು ಸಂಘದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ 8,9,10ನೇ ತರಗತಿಗಳ ಪಠ್ಯಗಳನ್ನು ಶೇ 38 ಕಡಿತಗೊಳಿಸುವಂತೆ ಸಂಘವು ಚರ್ಚಿಸಿ ನೀಡಿರುವ ವರದಿಯನ್ನು ಶಿಕ್ಷಣ ಮಂತ್ರಿಗಳಿಗೆ ವರದಿಯನ್ನು ನೀಡಿರುವುದಾಗಿ ತಿಳಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಹಿರಿಯರಾದ ಶ್ರೀಯುತ ಹೆಚ್.ಎನ್ ನಾಗಭೂಷಣರಾವ್‌ರವರು ಭಾಗವಹಿಸಿ ಜೀವ ಮತ್ತು ಜೀವನದ ಬಗ್ಗೆ ಪದಾಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಕಛೇರಿಯ ಪ್ರಮುಖರಾದ ಶ್ರೀಯುತ ಕೃಷ್ಣಮೂರ್ತಿಯವರು ಸಂಘಟನೆಯ ಬಲವರ್ಧನೆಗೆ ಸಲಹೆ ನೀಡಿದರು. ಈ ಸಭೆಯಲ್ಲಿ ಶ್ರೀಮತಿ ಸೀತಾಭಟ್, ಮಹಿಳಾ ಪ್ರಮುಖರು ಪ್ರಾರ್ಥನೆ ಮಾಡಿದರು. ಬೆಂಗಳೂರು ವಿಭಾಗದ ಪ್ರಮುಖರಾದ ಶ್ರೀಮಲ್ಲಿಕಾರ್ಜುನ್ ಕೂಡಗಿರವರು ಸ್ವಾಗತಿಸಿದರು. ಶ್ರೀ ಗಂಗಾಧರ್‌ರವರು ವಂದನೆ ಸಲ್ಲಿಸಿದರು. ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿಗಳಾದ ಗಂಗಪ್ಪನವರು ಸಭೆಯನ್ನು ನಿರ್ವಹಿಸಿದರು.

**– ವರದಿ : ಗಂಗಪ್ಪ, ಕಾರ್ಯದರ್ಶಿ, ಬೆಂಗಳೂರು ಉತ್ತರ ಜಿಲ್ಲೆ**

# ರಾಷ್ಟ್ರ ನಿರ್ಮಾಪಕರಾಗಲು ಶಿಕ್ಷಕರ ಮುಂದಿರುವ ಸವಾಲುಗಳು – ಶ್ರೀ ಸ್ವಾಮಿ ವೀರೇಶಾನಂದ ಗುರುಗಳು



**ಶ್ರೀಮತಿ ಲಾವಣ್ಯ ಸಿ.ಎಸ್**
**ಸಹಶಿಕ್ಷಕಿ, ಸರಕಾರಿ ಮಾದರಿ ಪ್ರಾಥಮಿಕ ಶಾಲೆ, ಹಾರೋಹಳ್ಳಿ, ಕನಕಪುರ ತಾ॥**

"ಬದಲಾವಣೆ" ಜಗದ ನಿಯಮ. ಅಂತೆಯೇ ಬದಲಾವಣೆಗೆ ತಕ್ಕಂತೆ ನಮ್ಮ ಬದುಕನ್ನು ಬದಲಿಸಿಕೊಳ್ಳುವುದು ಅನಿವಾರ್ಯ. ತಂತ್ರಜ್ಞಾನ, ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಕೃತಿ ಶೋಷಣೆಗೆ ಒಂದಿಷ್ಟು ವಿರಾಮ ದೊರೆತಿದೆ. ಪ್ರಕೃತಿ ಮಾತೆ ಕಣ್ಣಿಗೆ ಕಾಣದ ಒಂದು ಸೂಕ್ಷ್ಮ ಜೀವಿಯ ಮೂಲಕ ಮನುಷ್ಯ ಲೋಕಕ್ಕೆ ಪಾಠ ಕಲಿಸಲು ಮುಂದಾಗಿದ್ದಾಳೆ, ಕಲಿಸಿದ್ದಾಳೆ ಕೂಡ. ಕೋವಿಡ್ 19ರ ಆಕಸ್ಮಿಕ ಅವಾಂತರಗಳಿಗೆ ಮಾನವ ಜಗತ್ತು ಕಕ್ಕಾಬಿಕ್ಕಿಯಾಗಿ ಅತಂತ್ರವಾಗಿರುವ ಈ ಹೊತ್ತಿನಲ್ಲಿ ಬದುಕಿನ ಹೋರಾಟ, ತಂತ್ರಜ್ಞಾನದ ಅಗ್ರ ವೇದಿಕೆಯಾದ ಅಂತರ್ಜಾಲದ ಮೂಲಕ ಕೊಂಚ ಮಾರ್ಪಾಟಾಗಿ ಸಾಗುತ್ತಿದೆ. ಕ್ರಮೇಣ ಹತ್ತು ಹಲವಾರು ಕಾರ್ಯಗಳು ಸೋಂಕನ್ನು ದೂರವಿರಿಸುವ ದೃಷ್ಟಿಯಲ್ಲಿ, ಸಾಮಾಜಿಕ ಅಂತರದ ಪರಿಪಾಲನಾ ನಿಮಿತ್ತ ಆನ್‌ಲೈನ್‌ನಲ್ಲಿ ಜರುಗುತ್ತಿದೆ. ಹಣಕಾಸು, ವ್ಯವಹಾರ, ಸಂಸದೀಯ ಸಭೆಗಳು ಸೇರಿದಂತೆ ಶಿಕ್ಷಣ ಕ್ಷೇತ್ರವು ವಿಧಿಯಿಲ್ಲದೆ ಆನ್‌ಲೈನ್‌ನತ್ತ ಮುಖ ಮಾಡಿದೆ. ಈ ಮಧ್ಯೆಯೇ ದಿನಾಂಕ 20.05.2020 ರಂದು ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕೋರಿಕೆಯ ಮೇರೆಗೆ ಫೇಸ್‌ಬುಕ್ ಲೈವ್ ಮೂಲಕ "ರಾಷ್ಟ್ರ ನಿರ್ಮಾಪಕರಾಗಲು ಶಿಕ್ಷಕರ ಮುಂದಿರುವ ಸವಾಲುಗಳು" ಎಂಬ ವಿಷಯದ ಕುರಿತು ತುಮಕೂರಿನ ಸ್ವಾಮಿ ವೀರೇಶಾನಂದ ಸರಸ್ವತಿ ಗುರುಗಳು ಸರ್ವ ಶಿಕ್ಷಕರನ್ನುದ್ದೇಶಿಸಿ ಮಾತನಾಡಿದರು. ಅವರ ಮಾತಿನ ಸೂಕ್ಷ್ಮ ವಿಷಯಾಧಾರಿತ ವೇದನೆಗಳ ಸಾರಾಂಶ ಇಲ್ಲಿದೆ.

1965ರಲ್ಲಿಯೇ ಸ್ಥಾಪನೆಗೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ಕೈಗೊಂಡಿರುವ ಮಾಧ್ಯಮಿಕ ಶಿಕ್ಷಕ ಸಂಘದ ಅಪಾರ ಕೊಡುಗೆಯನ್ನು ಸ್ಮರಿಸುತ್ತಲೇ ಮಾತು ಆರಂಭಿಸಿದ ಶ್ರೀಗಳು ಗುರು, ಗುರು–ಪರಂಪರೆ, ವೇದೋಪನಿಷತ್ತು, ಗ್ರಂಥ ಭಂಡಾರಿಕೆಗಳಲ್ಲಿನ ಧರ್ಮ, ಗುರು ಮಹತ್ವವನ್ನು ದೃಷ್ಟಾಂತಗಳ ಮೂಲಕ ಸರಾಗವಾಗಿ ಸಾರಿದರು. ನಾವು ಪೂಜ್ಯ ವೇದವ್ಯಾಸರಿಂದಲೇ ಗುರು–ಪರಂಪರೆಯನ್ನು ಹೊಂದಿದ್ದೇವೆ. ಆಷಾಡಮಾಸದಲ್ಲಿ ಗುರುಪೂರ್ಣಿಮಾ ದಿನದಂದು ಗುರುವಿನ ಶ್ರೇಷ್ಠತೆಯನ್ನು ಆಚರಣೆಯ ಮೂಲಕ ಮನದುಂಬಿ ಆಸ್ವಾದಿಸುತ್ತೇವೆ.

ಸ್ವಾತಂತ್ರ್ಯ ನಂತರದಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನದ ನಿಮಿತ್ತ ಶಿಕ್ಷಕರ ದಿನವನ್ನು ಆಚರಿಸುವುದುಂಟು. ಆದರೆ ಈ ಗುರುವಿನ ಮಹತ್ವದ ಆಚರಣೆ ಸ್ವಾತಂತ್ರ್ಯ ನಂತರದಲ್ಲಿ ಬೆಳಕಿಗೆ ಬಂದುದಲ್ಲ. ಬದಲಾಗಿಈ ಸಂಭ್ರಮದಾಚರಣೆ ಭಾರತೀಯರ ಪ್ರಾಚೀನ ಆಚರಣೆಯೂ ಹೌದು. ಶಿಕ್ಷಕರ ದಿನವನ್ನು ಸಂಭ್ರಮಿಸುವ ನಾವು, ಗುರುಪೂರ್ಣಿಮೆಯ ಮಹತ್ವವನ್ನು ಮಕ್ಕಳಲ್ಲಿ ತಿಳಿಹೇಳಬೇಕಾಗಿದೆ. ಗುರುಪೂರ್ಣಿಮೆಯ ಮಹತ್ವ ಅಂತಿದ್ದಲ್ಲ. ಈ ವಿಚಾರವಾಗಿ ಸಂತ ಕಬೀರರ ಒಂದು ಮಾತು ನೆನಪಿಗೆ ಬರುತ್ತದೆ– "ಅಕಸ್ಮಾತ್ ಆಗಿ ಗುರು ಹಾಗೂ ಗೋವಿಂದರೀರ್ವರೂ ಒಟ್ಟಿಗೆ ನನ್ಮುಂದೆ ಪ್ರತ್ಯಕ್ಷರಾದರೆ ನಾನು ಸಾಕ್ಷಾತ್ ಗೋವಿಂದನ ಹೊರತಾಗಿ ಶ್ರೀಗುರುವನ್ನು ಸ್ವೀಕರಿಸುತ್ತೇನೆ. ಏಕೆಂದರೆ ಗೋವಿಂದರ ಸಾಕ್ಷಾತ್ಕಾರವನ್ನು ಪರಿಚರಿಸಯಿಸುವವನೇ ಗುರು". ಕಬೀರರ ಈ ಮಾತು ಅದೆಷ್ಟು ಸತ್ಯ ಮತ್ತು ಸೋಜಿಗ!

ಗುರುವಿನ ಮಹಿಮೆಯು ಇಲ್ಲಿಗೆ ನಿಲ್ಲುವುದಿಲ್ಲ. ಭಕ್ತಿ ಭಂಡಾರಿ ಬಸವೇಶ್ವರರು ತಮ್ಮ ವಚನವೊಂದರಲ್ಲಿ 'ಶಿವಪಥ ಅರಿವಿಡೆ ಗುರು ಪಥ ಮೊದಲು' ಎಂದಿದ್ದಾರೆ. ಇದರರ್ಥ ಶಿಕ್ಷಕನನ್ನು ಕಾಣಲು ಹಾತೊರೆಯುವ ನಾವು ಆ ಭಾಗ್ಯ ಕರುಣಿಸುವ ಗುರುಸಾನಿಧ್ಯವನ್ನು ಹುಡುಕಬೇಕು ಎಂದು. ಇನ್ನೂ ರಾಮಾಯಣ ಕಾಲದಲ್ಲಿಯೂ ಶ್ರೀ ರಾಮನ ವಿಶಿಷ್ಟತೆಯ ಮೂಲಕ ಹಾಸುಹೊಕ್ಕಾಗಿದೆ. ದ್ವಾಪರಯುಗದಲ್ಲಿಯೂ 'ಕೃಷ್ಣಂ ಒಂದೇ ಜಗದ್ಗುರುಂ' ಎಂದು ಗುರುವಿನ ವ್ಯಾಪ್ತಿಯನ್ನು ಉಲ್ಲೇಖಿಸಲಾಗಿದೆ.

"Krishna was kingmaker and was not King" ಎಂಬುದು ಭಗವಂತನ ವಾಣಿಯಾದ ಶ್ರೀಮದ್ಭಗವದ್ಗೀತೆಯಲ್ಲಿ ಸಾಬೀತಾಗುತ್ತದೆ. ಕುರುಕ್ಷೇತ್ರದಲ್ಲೂ ಭಗವಂತನುಪದೇಶಕ್ಕೆ ಒಳಗಾಗುವ ಮಿತ್ರನಾದ ಅರ್ಜುನ ಭಕ್ತನಾಗಿ ಹೊರಹೊಮ್ಮುವುದು ನಿಮಿತ್ತ. ಕಲಿಯುಗದಲ್ಲಿ ಭಗವಾನ್ ಬುದ್ಧನಿಂದ ಗುರುಪರಂಪರೆ ನವ ಚೈತನ್ಯ ಪಡೆಯಿತು. ಶ್ರೀಮದ್‌ಶಂಕರಾಚಾರ್ಯರು 'ದಶನಾಮಿ ಗುರು ಪರಂಪರೆ' ಯನ್ನು ಪರಿಚಯಿಸಿದರು. ಪ್ರತಿ ಗುರುವೂ ಯಾವ ವಿಚಾರವಾಗಿ ಗುರುತಿಸಿಕೊಂಡಿದ್ದನೋ ಆ ಗುರುತನ್ನು ದಶನಾಮಿ ಪರಂಪರೆಯಲ್ಲೂ ಕಾಣಬಹುದು. ಶಂಕರರಿಗಿಂತ 2 ಶತಮಾನಗಳ ಮುಂಚಿತವಾಗಿಯೇ ಇದ್ದ ರಾಜಾಭತೃಹರಿಯನ್ನು ನೆನೆಯಲೇಬೇಕು. ಈತ ಬರೆದ 'ವೈರಾಗ್ಯ ಶತಕ, ನೀತಿ ಶಕತಗಳು' ನೀತಿ ವೈರಾಗ್ಯಗಳ ಶ್ರೇಷ್ಠ ಅವತರಣಿಕೆಗಳು. ಇವನು ಯೌವ್ವನದಲ್ಲಿ ಬಲುವಿಲಾಸಿ, ಹಾಗೂ ಶೃಂಗಾರ ಶತಕವನ್ನು ನೀತಿಯ ಮುಖೇನ ಬರಹದಲ್ಲಿ ಸೃಷ್ಟಿಸಿದ್ದಾನೆ. ಭತೃಹರಿಯು ಹೀಗೇನ್ನುತ್ತಾನೆ–"ವಿದ್ಯಾ ಗುರೂಣಾಂ ಗುರುಃ" ಎಂದರೇ ಗುರುವಾದವನು ವಿದ್ಯೆಯನ್ನೇ ಗುರುವಾಗಿ ಸ್ವೀಕರಿಸಿ, ತನ್ನ ಜೀವಿತಾವಧಿಯಲ್ಲಿ ತಾ ಕಲಿತ ವಿದ್ಯೆಯ ಸಾರವನ್ನು ಆಚರಣೆಗೆ ತರುವ ಮೂಲಕ ತನ್ನ ವಿದ್ಯೆಯನ್ನು ಸಾಕ್ಷಾತ್ಕಾರಗೊಳಿಸಬೇಕು. ಇನ್ನೊಂದು ಮಾತು "ವಿದ್ಯಾ ವಿಹೀಣಃ ಪಶುಃ" ವಿದ್ಯೆಯಿಂದ ವಂಚಿತನಾದವನನ್ನು ಪಶುವಿನಂತೆ ಕಾಣಲಾಗುತ್ತದೆ ಎಂಬುದೂ ಸಹ ವಿದ್ಯೆಯ ಕುರಿತ ಭತೃಹರಿಯ ಮತ್ತೊಂದು ಉಕ್ತಿ.

ಜಗತ್ತಿನ ಪ್ರಥಮ ಘಟಿಕೋತ್ಸವವನ್ನು ನೆನಹುವ ತೈತ್ತರೀಯೋಪನಿಷತ್ ಹಲವು ಕಾರಣಗಳಿಂದ ಮಹತ್ವದ್ದು. ಈ ಕಾಲದಲ್ಲಿ ಪದವಿ ಪಡೆದು ಹೊರ ನಡೆಯುವ ತರುಣರನ್ನು ಕುರಿತೇ ಹೇಳುವ ಹಿತೋಪದೇಶ ಇದರಲ್ಲಿದೆ, 'Degree certificate' ಪಡೆದಾಕ್ಷಣ ಓದುವುದೆಲ್ಲವೂ ಮುಗಿಯಿತೆಂದರ್ಥವಲ್ಲ. ಜೀವನದುದ್ದಕ್ಕೂ ವಿದ್ಯಾರ್ಥಿಯಾಗಿರುವಂತೆ ಉಪನಿಷತ್ತು ಉಪದೇಶಿಸುತ್ತದೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಉಪನಿಷತ್ತಿನ ವಿವೇಕವನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ. ಭಾರತ ಕಂಡಂತಹ ಶ್ರೇಷ್ಠ ಪರಂಪರೆಯನ್ನು ರಕ್ಷಿಸುವ ಕರ್ತವ್ಯ ನಮ್ಮೆಲ್ಲರದ್ದು. ಈ ಅರ್ಥದಲ್ಲಿ ಇಡೀ ಜಗತ್ತನ್ನೇ ಗೆಲ್ಲಲು ಪಣತೊಟ್ಟು ಕಡೆಗೆ ಶ್ರೇಷ್ಠ ಗುರು ಪರಂಪರೆಯುಳ್ಳ ಭರತಖಂಡದಲ್ಲಿ ತಲೆಬಾಗಿದ ಕಥೆಯನ್ನು ನಾವಿಲ್ಲಿ ನೆನೆಯಬಹುದು. ಆದ್ದರಿಂದ ಗುರುವಿನ ಮುಂದೆ ತಲೆಬಾಗಬೇಕೆನ್ನುವುದು ಅಲೆಕ್ಸಾಂಡರ್‌ನಿಂದ ದೊರೆತ ನಿದರ್ಶನ.

ಪುಟ 11 ಕ್ಕೆ ➤

➢ ಪುಟ 10 ರಿಂದ.....

ಸಮಾಜದಲ್ಲಿ 4 ಆಶ್ರಮಗಳನ್ನು ಪರಿಪಾಲಿಸುವ ಛಾಯೆಯಿದೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸನ್ಯಾಸ. ಇವುಗಳೇ ವಯಸ್ಸಿನಾನ್ವಯದಂತೆ ಚಲಿಸುವ ಜೀವನದ 4 ಆಶ್ರಮ ಹಂತಗಳು. ಇವು ಭಾರತದಲ್ಲಿ ಹೆಚ್ಚು ಪ್ರಚಲಿತ. ನಿರ್ದಿಷ್ಟ ವಯೋಧರ್ಮದಲ್ಲಿ ತಾನು ಕಲಿಯುವ ವಿಷಯವನ್ನು ಸರಿಯಾದ ನಿಷ್ಠೆಯಲ್ಲಿ ಸ್ವೀಕರಿಸಿ ಗೆದ್ದಲ್ಲಿ ಮಾತ್ರ ಮುಂದಿನ ಆಶ್ರಮವನ್ನು ತಲುಪಬಹುದು. ಧರ್ಮ ಮನುಷ್ಯನಿಗೆ ಸಕಲ ಸರ್ವಸ್ವವನ್ನು ದಯಪಾಲಿಸುತ್ತದೆ. ಶ್ರೇಷ್ಠತೆ, ಗೌರವವನ್ನು ಹೆಚ್ಚಿಸುತ್ತದೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ರಾಜಕೀಯದಿಂದ ತುತ್ತಾದ ಧರ್ಮದ ಸ್ಥಿತಿಯನ್ನು ಕುರಿತು ಲಂಡನ್‌ನ ಸಂದರ್ಶನವೊಂದರಲ್ಲಿ ವಿವೇಕಾನಂದರು ಹೀಗೆನ್ನುತ್ತಾರೆ. "ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಧರ್ಮ ಮತ್ತು ರಾಜಕೀಯ ಎರಡನ್ನೂ ಸೂಕ್ಷ್ಮವಾಗಿ ಗಮನಿಸಿದರೆ ರಾಜಕೀಯ ವಿಚಾರಗಳಿಗೆ ಹೆಚ್ಚು ಪ್ರಾಧಾನ್ಯತೆ ದೊರೆಯುತ್ತದೆ ಹಾಗೂ ಧರ್ಮ 2ನೇ ದರ್ಜೆ ವಿಷಯವಾಗಿ ಮಾರ್ಪಾಟಾಗಿದೆ. ಧರ್ಮವೆನ್ನುವುದು ಮನುಷ್ಯನನ್ನು ಕೈಹಿಡಿದು ನಡೆಸುವ ಕಾಣದ ಶಕ್ತಿ. ಈ ದೆಸೆಯಲ್ಲಿ ಧರ್ಮವನ್ನು ಇಲ್ಲದಾಗಿಸಿ ಮುನ್ನಡೆಯುವುದು ವಿನಾಶದ ಸಂಕೇತ".

ಗತ ಕಾಲದಿಂದಲೂ ಗುರುಪರಂಪರೆಯು ಧರ್ಮ ಸಂಸ್ಥಾಪನೆಯ ಕಾರ್ಯದಲ್ಲಿ ನಿರತವಾಗಿದೆ. ಹತ್ತಾರು ಆಲೋಚನೆಗಳ, ಯೋಚನಾ ಲಹರಿಗಳ ನಡುವೆ ಗುರುವಿನ ಮಾತಿಗೆ ಹೆಚ್ಚು ಮಹತ್ವ ಸಿಕ್ಕಿರುವುದು ಗಮನಾರ್ಹ ಸಂಗತಿ. ಹಿಂದೊಮ್ಮೆ ತ್ರೇತಾಯುಗದಲ್ಲಿ ವಿಶ್ವಾಮಿತ್ರ ಮಹರ್ಷಿಯು ದುಷ್ಟರ ದಮನಕ್ಕಾಗಿ ದಶರಥನಲ್ಲಿ ಅವನ ಮಕ್ಕಳನ್ನು ಬೇಡಿದರು. ಇದರಿಂದ ಕಳವಳಗೊಂಡ ದಶರಥ ಮಹಾರಾಜ ಎಳೆ ಬಾಲಕರ ಬದಲಾಗಿ ತಾನೇ ಆ ದುಷ್ಟ ಶಕ್ತಿಗಳನ್ನು ಧ್ವಂಸಿಸುವೆನೆಂದು ಕೋರಿದನು. ಈ ಮಾತನ್ನು ನಿರಾಕರಿಸಿದ ವಿಶ್ವಾಮಿತ್ರರು ಕುಪಿತಗೊಂಡರು. ಸಂಕಷ್ಟಕ್ಕೆ ಸಿಲುಕಿದ ದಶರಥನಿಗೆ ಸಾಂತ್ವಾನದ ಸಲಹೆಗಳನ್ನಿತ್ತು ಸಮಾಧಾನಪಡಿಸಿದವರು, ರಾಜಗುರು ವಸಿಷ್ಠ ಮಹರ್ಷಿ. ದಶರಥನ ತಲೆಯಲ್ಲಿ ಮಿಣುಕಾಡಿದ ಅನೇಕ ಯೋಚನಾ ಗೊಂದಲಗಳಿಗೆ ಗುರುವಿನ ಕೃಪೆಯಿಂದ ಪರಿಹಾರ ಸಿಕ್ಕಿತು. ಇಲ್ಲಿ ಲೋಕ ಕಲ್ಯಾಣಾರ್ಥವಾಗಿ ಜನಿಸಿದ ಶ್ರೀರಾಮನ ಕಥೆ ನಿಮಿತ್ತ ಮಾತ್ರ. ಆದರೆ ಶ್ರೇಷ್ಠ ಮಾನವ ಪರಂಪರೆಯಲ್ಲಿಯ 'ಗುರುವಿನ ಮಹತ್ವ' ಅತೀ ಎತ್ತರದ ಸ್ಥಾನದಲ್ಲಿದೆ. ಅನಾದಿಕಾಲದಿಂದಲೂ ಗುರು ಮಾಡಿದ ಕಾರ್ಯಗಳು ಒಂದೆರೆಡಲ್ಲ. ಬರೀ ಸಲಹೆ-ಸೂಚನೆ ನೀಡಲಿಲ್ಲ. ರಾಜನನ್ನು ಯುದ್ಧ ಪ್ರೇಮಿಯಾಗಿಸದೇ, ವಿಶ್ವಪ್ರೇಮವನ್ನು ಬಿತ್ತಿದವರು ಗುರು. ಗುರು ಏನು ಮಾಡಿಲ್ಲ? ಅನ್ನುವ ಹಾಗೆ ಇಲ್ಲ.

ಭಾರತೀಯರ ಉದ್ಧಾರಕ್ಕೆಂದೇ ಜನ್ಮ ತಾಳಿದ ಭಗವಾನ್ ಬುದ್ಧ ದೇಶದ ಇತಿಹಾಸದಲ್ಲಿ ಅಗ್ರಗಣ್ಯ. ಅವನ ಭಕ್ತಿ ಚಳುವಳಿಗೆ ಪುಷ್ಠಿ ನೀಡಿದ್ದು ಅವನು ಬಳಸಿದ 'ಪಾಳೀ ಭಾಷೆ' ಜನ ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಬುದ್ಧ ತನ್ನ ಭಿಕ್ಷುಗಳಿಗೆ ಉಪದೇಶಿಸಿದನು. ಬುದ್ಧ ಬೋಧಿಸಿದ ಅನೇಕ ವಿಚಾರಗಳು ಉಪನಿಷತ್‌ಗಳಿಗೆ ಆಧಾರವಾಗಿತ್ತು. ಬುದ್ಧ ಗುರು ಪರಂಪರೆಯ ಶ್ರೇಷ್ಠಾತಿಶ್ರೇಷ್ಠ ಅನರ್ಘ್ಯರತ್ನ. ಈತನ ಕಾಲಾನಂತರ ಸುಮಾರು 1000 ವರ್ಷಗಳ ನಂತರ ಕೆಲ ತಿದ್ದುಪಡಿಗಳೊಂದಿಗೆ ಶಂಕರರ ಧರ್ಮ ಸಂಸ್ಥಾಪನೆ ಪ್ರಾರಂಭವಾಯಿತು. ಭೌಗೋಳಿಕವಾಗಿ ಪೂರ್ವ ರಾಷ್ಟ್ರಗಳಿಗೆ ಶಂಕರರಿಂದ ಉಪದೇಶವಾದರೆ ವಿವೇಕಾನಂದರು ಈ ಜಾಗೃತಿಯನ್ನು ಪಶ್ಚಿಮ ರಾಷ್ಟ್ರಗಳಿಗೂ ಪಸರಿಸಿದರು.

ಕೈಗಾರಿಕಾ ಕ್ರಾಂತಿಯು ಶುರುವಾಗಿದ್ದೇ ತಡ, ಮನುಷ್ಯ, ಮನುಷ್ಯ ಸಂಬಂಧಗಳಿಗಿಂತ ಮನುಷ್ಯ ಯಂತ್ರಗಳ ಸಂಬಂಧವೇ ಹೆಚ್ಚಾಯಿತು. ದೈವತ್ವಕ್ಕೆ ಸಮಾನವಾಗಿದ್ದ ಜಾನುವಾರುಗಳನ್ನು ಭೂಮಿ ಊಳಲು ಬಳಸಲಾಗುತ್ತಿತ್ತು. ಯಂತ್ರಗಳ ಉಗಮದಿಂದ ಜೀವವಿರದ ಯಂತ್ರಗಳಲ್ಲಿ ಪ್ರೀತಿ ಹೆಚ್ಚಿತು. ಯಾಂತ್ರಿಕ ಬದುಕಿನ ನಡುವೆ ಬೇರೆಡೆಯಲ್ಲಿಯೂ ಗಮನಾರ್ಹ ಬದಲಾವಣೆಯಾಯಿತು. ಈ ಬದಲಾವಣೆ ಸಂಗೀತ ಕ್ಷೇತ್ರಕ್ಕೂ ದಾಪುಗಾಲಿಟ್ಟಿತು. ಸಂಗೀತದಿಂದ ಮನುಕುಲವನ್ನು ಧರಿಸಿದ ಪರಂಪರೆ ವೈರುಧ್ಯನಾಗಿ ವಿಜೃಂಭಿಸಿತು. ತ್ಯಾಗರಾಜರು ಸಂಗೀತಕ್ಕಾಗಿ ಸನ್ಯಾಸ ಸ್ವೀಕರಿಸಿದರಂತೆ. ಹರಿದಾಸ, ಕನಕ, ಪುರಂದರರು, ಕಾಳಿದಾಸ ಕಾವ್ಯ, ತಾನ್‌ಸೇನ್ ಹಾಗೂ ವಚನಕಾರರೆಲ್ಲರ ಭಕ್ತಿಪರತೆ ಸಂಗೀತದ ಜತೆ ಜತೆಗೆ ಪಯಣಿಸಿದೆ. ಆದರೆ ಈ ಪ್ರಭಾವಳಿಯು ಮರೆಯಾಗಿ ಮನುಷ್ಯನನ್ನು ಪ್ರಚೋದಿಸುವ ವಿಕೃತ ಪ್ರಭಾವ ಬೀರುವ ಮತ್ತು ಇಂದ್ರಿಯಗಳ ಪ್ರಚೋದನೆಗೆಂದೇ ಪಾಶ್ಚಾತ್ಯ ಸಂಗೀತ ನೆಲೆಯೂರಿತು. ಇದರ ಗಮ್ಯತೆಯನ್ನು ನಾವೆಲ್ಲಾ ಮುರ್ಖರಂತೆ ಆಹ್ಲಾದಿಸುತ್ತಾ, ಮುಂದಿನ ಪೀಳಿಗೆಯನ್ನು ಇಂದ್ರಿಯ-ಭೋಗ್ಯ ವಸ್ತುಗಳನ್ನಾಗಿ ರೂಪಿಸುತ್ತಿದ್ದೇವೆ.

ಅಮೇರಿಕಾ ದೇಶದ ಒಬ್ಬ ನಾಟಕಕಾರ, ಕೈಗಾರಿಕಾ ಕ್ರಾಂತ್ರಿಯ ನಂತರ ಉಂಟಾದ ಕೆಲ ವೈಜ್ಞಾನಿಕ ಸಿದ್ಧಾಂತಗಳನ್ನು ಮಾನವ ಸ್ವೀಕರಿಸಿದ ರೀತಿಯನ್ನು ಕುರಿತು ಬಲು ಚೆನ್ನಾಗಿ ವಿವರಿಸಿದ್ದಾನೆ.

'ಡಾರ್ವಿನ್' ನ ವಿಕಾಸವಾದ ಬಂದ ಮೇಲೆ ಮನುಷ್ಯನ ಭೌತಿಕ ಜಗತ್ತಿನಿಂದ ದೇವರನ್ನು ಆಚೆ ಓಡಿಸಲಾಯಿತು. 'ನ್ಯೂಟನ್' ನ ಗುರುತ್ವ ಬಲದ ಮುಂದೆ 'ದೇವರು' ಎಂಬ ಬಲವನ್ನು ದುರ್ಬಲ ಮಾಡಿ ಓಡಿಸಿದರು. ಮುಂದೆ ಮಾನಸಿಕ ಕ್ರಾಂತಿಯ ಕುರಿತು ಸಿಗ್ಮಂಡ್ ಫ್ರಾಯಿಡ್ ಎಂಬ ಮನೋವಿಜ್ಞಾನಿ ನಡೆಸಿದ ಸಂಶೋಧನೆ ಮಾನಸಿಕ ವಿಚಾರಗಳ ಕ್ರಾಂತ್ರಿಯು ದೇವರು ಎಂಬುದನ್ನು ಮನುಷ್ಯನ ಮನಸ್ಸಿನಿಂದ ಮಾಯವಾಗಿಸಲು ನೆರವಾಯಿತು. ಈ ಮೇಲಿನ ವೈಜ್ಞಾನಿಕ ಸತ್ಯಾಪರತೆಗಳನ್ನು ಅರ್ಥೈಸಿಕೊಳ್ಳುವಲ್ಲಿ ಎಡವಿದ ಮಾನವ ಸಂಕುಲ ವಿಜ್ಞಾನ – ತರ್ಕ ಎಂಬ ಹೆಸರಿನಲ್ಲಿ ದೇವರು-ದಿಂಡಿರುಗಳನ್ನು ದೂರತಳ್ಳಿ ದೇವರ ಅಸ್ತಿತ್ವವನ್ನೇ ಪ್ರಶ್ನಿಸುವಷ್ಟು ಎತ್ತರ ಬೆಳೆಯಿತು ಎನ್ನುತ್ತಾನೆ ಈ ನಾಟಕಕಾರ. ಈ ವಿಚಾರ ಅತ್ತಿರಲಿ, ಸಮಾಜವಾದದ ವಾದವನ್ನು ಗಮನಿಸಬೇಕು ನೀವು! ಒಮ್ಮೆ ಚೀನಾದಲ್ಲಿ ಸಮಾಜವಾದದ ವಿರುದ್ಧದ ಕೂಗು ಹೆಚ್ಚಾದಾಗ ಅಲ್ಲಿನ ರಾಷ್ಟ್ರನಾಯಕರಿಂದ ಈ ಹೇಳಿಕೆ ಹೊರಬಂದಿತು- ದೇಶದಲ್ಲಿನ ಅರ್ಧ ಜನಸಂಖ್ಯೆ (ಅಂದರೆ ಸಮಾಜವಾದವನ್ನು ಅಲ್ಲಗಳೆಯುತ್ತಿರುವವರು) ಬೇಕಾದರೆ ಹಸಿವಿನಿಂದ ಸತ್ತು ಹೋಗಲಿ. ಇನ್ನರ್ಧ ನಮ್ಮ ಸಮಾಜವಾದವನ್ನು ಮೆಚ್ಚಿ ನಡೆದರೆ ಸಾಕು. ಪ್ರಜಾಪ್ರಭುತ್ವ ಕಲ್ಪನೆಯಲ್ಲಿ ಕ್ರಾಂತಿ ಮಾಡಲೆತ್ನಿಸಿದ ಕೆಲ ಚೀನಿಯ ಜನತೆಗೆ ಈ ನಾಯಕನ ದರ್ಪ, ದಬ್ಬಾಳಿಕೆ ಎಷ್ಟು ಯೋಗ್ಯ.

ಕಾಲಕಾಲದಲ್ಲೂ ರಾಷ್ಟ್ರವನ್ನು ಕಟ್ಟುವ ಕಾಪಾಡುವ ದ್ಯೂತಕದಲ್ಲಿ ನಮ್ಮ ಗುರುಪರಂಪರೆ ಸದಾ ಅಣಿಯಾಗಿದೆ. ಕೈಗಾರಿಕೆ ಕ್ರಾಂತಿಯೆಂಬ ವಿಷಬೀಜದಿಂದ ಸಮಾಜವು ಹದಗೆಟ್ಟಾಗ ವಿವೇಕ – ರಾಮಕೃಷ್ಣರು ರಾಷ್ಟ್ರವನ್ನು ಬಿಗಿದಪ್ಪಿ ಪೋಷಿಸಿದರು. ಇವರ ಹಾದಿಯಲ್ಲೇ ಅನೇಕಾನೇಕ ಸಾಧು-ಸಂತರುಗಳು ತಾಕೀತು ಮಾಡುತ್ತಾ, ತಿದ್ದುತ್ತಾ ಬಂದಿರುತ್ತಾರೆ. "ಜನನಿ ಜನ್ಮ ಭೂಮಿಶ್ಚಃ ಸ್ವರ್ಗಾದಪಿ ಗರೀಯಸಿ" ಎಂಬ ರಾಮನ ಉಕ್ತಿ ಹೆತ್ತ ತಾಯಿ, ಹೊತ್ತ ನಾಡು ಸ್ವರ್ಗಕ್ಕಿಂತಲೂ ಮಿಗಿಲು ಎಂದು ಸಾರುತ್ತದೆ. ಆದ್ದರಿಂದ ದೇಶದ ಹಿತ, ಅದರ ಮೇಲಿನ ಪ್ರೇಮವನ್ನು ಸಾಕಾರಾಗೊಳಿಸಲು ಯತ್ನಿಸಬೇಕೆ ವಿನಃ ಉರುಳಿಸಬಾರದು. 'ಕರ್ತವ್ಯ' ಪ್ರಜ್ಞೆಯ ಕುರಿತು ಕೃಷ್ಣನ ವಾಣಿಯೆದುರು ಮತ್ತೇನು ಹೊಳೆಯದು. ಕೃಷ್ಣ ಹೇಳುತ್ತಾನೆ- "ದೌರ್ಬಲ್ಯದಿಂದ ಮುಕ್ತನಾಗು, ಏಕೆಂದರೆ ಸಂಶಯದಲ್ಲಿ ಬದುಕುವವನ ಬದುಕು ನಾಶವಾಗುತ್ತದೆ" ಮುಂದುವರಿದು ಹೇಳುತ್ತಾನೆ- "ನನ್ನನ್ನು ಅರಿತ ಭಕ್ತ ಎಂದಿಗೂ ದುರ್ಬಲನಾಗುವುದಿಲ್ಲ, ನನ್ನ ಕೃಪೆ ಅವನ ಮೇಲೆ ಸದಾ ಇರುತ್ತದೆ".

'ಧರ್ಮ' ವೆಂದರೆ ತಾಯಿ, ನಮ್ಮನ್ನು ತಿದ್ದುವ ಮೇಧಾವಿ ಆಕೆ. ಒಳಿತು ಕೆಡುಕುಗಳ ಮಧ್ಯೆ, ನಂಬಿಕೆ-ಅಪನಂಬಿಕೆಗಳ ನಡುವೆ ಶ್ರೇಷ್ಠವಾದುದ್ದನ್ನು

ಪುಟ 12 ಕ್ಕೆ ➢

➢ ಪುಟ 11 ರಿಂದ.....

ಆಯ್ದುಕೊಳ್ಳುವ ಮಾರ್ಗವಿದು. ಮನುಷ್ಯನಾದವನು ಒಂದೋ ದೈವತ್ವದ ಅನುಯಾಯಿ, ಇಲ್ಲವೇ ತತ್ವದ ಅನುಯಾಯಿಯಾಗಿರುತ್ತಾನೆ. ಇವೆರಡೂ ಕೊಂಚ ವ್ಯತ್ಯಾಸದಲ್ಲಿದ್ದರೂ ಇವೆರಡಕ್ಕೂ 'ಧರ್ಮ'ವೇ ಮೂಲ. (ಆದ್ದರಿಂದಲೇ ರಾಮಕೃಷ್ಣ ಪರಮಹಂಸರು ವಿವೇಕಾನಂದರ ಪ್ರಶ್ನೆಗೆ ಹೀಗಂದಿದ್ದು) ತನ್ನ ಗುರುಗಳನ್ನು ಒಮ್ಮೆ ವಿವೇಕಾನಂದರು 'ದೇವರನ್ನು ಕಾಣುವುದು ಹೇಗೆ?' ಎಂದು ಪ್ರಶ್ನಿಸಿದರು. ಅದಕ್ಕೆ ಪರಮಹಂಸರು "ಕಣ್ಣು ಮುಚ್ಚಿ ದೇವರನ್ನು ನೋಡುವ ಬದಲು, ಕಣ್ಬಿಟ್ಟು ದೇವರನ್ನು ನೋಡು' ಎಂದರಂತೆ. ಅವರ ಹೇಳಿಕೆಯ ಸಾರಾಂಶ ಹೀಗಿದ್ದಿತು–'ನಾವು ಮಾಡುವ ಜಪ–ತಪಗಳಲ್ಲಿ ದೈವ ಸಾಕ್ಷಾತ್ಕಾರವಾಗುವುದಿಲ್ಲ, ಕಣ್ಣನ್ನರಳಿಸಿ ಭಗವಂತನಿಂದ ಸೃಷ್ಟಿಯಾದ ಈ ಜಗತ್ತಿನ ಕುಂದುಕೊರತೆಗಳನ್ನು ಗಮನಿಸು ಅಲ್ಲಿ ಪರಮಾತ್ಮನ ದರ್ಶನವಾಗುತ್ತದೆ'. ಈ ಆದರ್ಶವನ್ನೇ ಮುಂದೆ ವಿವೇಕರು 'ಆತ್ಮನೋ ಮೋಕ್ಷಾರ್ಥಮ್ ಜಗದ್ ಹಿತಾಯಚ' ಎಂಬುದಾಗಿ ರಾಮಕೃಷ್ಣಮಠದ ಧ್ಯೇಯ ವಾಕ್ಯವನ್ನಾಗಿಸಿದರು.

ಈಗಲೂ ಈ ಸಾಲನ್ನು ಎಲ್ಲಾ ರಾಮಕೃಷ್ಣ ಮಠಗಳಲ್ಲಿ ಕಾಣಬಹುದು. 'ಆತ್ಮಮೋಕ್ಷ ಹಾಗೂ ದೇಶದ ಅಭ್ಯುದಯ ಜತೆ ಜತೆಗೆ ಸಾಗಲಿ' ಎನ್ನುವುದು ಇದರ ಹಿಂದಿನ ಆದರ್ಶವಾದ.

ದೇಶ ನಾಡು–ನುಡಿ ಆದರ್ಶಗಳಿಗೆಲ್ಲಾ ಭದ್ರ ಬುನಾದಿಯನ್ನೀಯುವವನೇ ಗುರು. ಗುರು ತಾನು ಕಲಿಸಿದ್ದನ್ನು ಪಾಲಿಸಿ, ತನ್ನನ್ನೇ ಮೀರಿಸಿದ ಶಿಷ್ಯನ ಸಾಧನೆ ಕಂಡು ಅದೆಷ್ಟು ಕುಣಿಯುತ್ತಾನೆ, ಬಲ್ಲಿರಾ? ಜಾಗತೀಕರಣ ಉದಾರೀಕರಣ, ಖಾಸಗೀಕರಣಗಳ ನಡುವೆ ನಮ್ಮನ್ನೆಲ್ಲಾ ಸಲುಹಿದವ ಗುರು. ಈಗ ಇವುಗಳ ಪ್ರಮೇಯದಲ್ಲೇ ಮತ್ತಷ್ಟು ಕರಣಗಳು ನಮ್ಮ ಕರ್ಣಗಳನ್ನು ಬಾಧಿಸುತ್ತಿವೆ. 'ತಂದೆ–ತಾಯಿ' ಕೇವಲ ಮಾಂಸದ ಮುದ್ದೆಗೆ ಜನ್ಮ ಕೊಡುತ್ತಾರೆ. ಆದರೆ ನಮ್ಮ ಸಂಸ್ಕಾರವೆಂಬುದಕ್ಕೆ ಜೀವ ನೀಡುವವ 'ಗುರು' ಎಂದು ವಿವೇಕರು ಸುಮ್ಮನೇ ಹೇಳಲಿಲ್ಲ. 'ಗುರು'ವಿನ ಶ್ರೇಷ್ಠತೆಯನ್ನು ಮತ್ತಷ್ಟು ಉನ್ನತಿಗೊಳಿಸಿದವರೆಂದರೆ 'ಸರ್ವಪಲ್ಲಿ ರಾಧಾಕೃಷ್ಣನ್' ಹಾಗೂ 'ಎ.ಪಿ.ಜೆ ಅಬ್ದುಲ್‌ಕಲಾಂ'. ಒಬ್ಬ ಶಿಕ್ಷಕ ಎಂತಹ ಸ್ಥಾನಕ್ಕಾದರೂ ಏರಬಹುದು ಎಂಬ ಉದಾಹರಣೆಯನ್ನು ನಾವಿದರಲ್ಲಿ ಕಾಣಬಹುದು. ಕಲಾಂರವರು ತಮ್ಮ ರಾಷ್ಟ್ರಾಧ್ಯಕ್ಷ ಸ್ಥಾನವನ್ನು ಮುಗಿಸಿದ ನಂತರ ನೀವು ಏನಾಗಬಯಸುತ್ತೀರಿ? ಎಂದು ಪತ್ರಕರ್ತರೊಬ್ಬರು ಕೇಳಿದಾಗ ನಾನೊಬ್ಬ ಉತ್ತಮ ಶಿಕ್ಷಕನಾಗಬಯಸುತ್ತೇನೆ ಎಂದರಂತೆ. ಈ ಮಹಾನುಭಾವನು ತಾನು ವಿಜ್ಞಾನಿ, ಪಂಡಿತ, ಕ್ಷಿಪಣಿಜ್ಞ ಇನ್ನಾವುದನ್ನೋ ಉಲ್ಲೇಖಿಸಬಹುದಿತ್ತು. ಆದರೆ ಅವರು ತಮ್ಮ ಜೀವನವನ್ನು ಪ್ರೀತಿಸಿದ್ದು ಶಿಕ್ಷಕನಾಗಿ, ಹಾಗೆಯೇ ಅದೇ ವೃತ್ತಿಯಲ್ಲಿರುವಾಗಲೇ ಅಮರರಾದರು. ಇನ್ನೂ ಹಲವಾರು ಶಿಕ್ಷಕರು ತಮ್ಮ ವೃತ್ತಿಯಲ್ಲಿರುವಾಗಲೇ UPSC, KPSC ಯಲ್ಲಿ ಉತ್ತೀರ್ಣರಾಗಿ ಅತ್ಯುನ್ನತ ಹುದ್ದೆಗಳಲ್ಲಿ ಕಾರ್ಯವೆಸಗಿದ್ದಾರೆ. ಇನ್ನೂ ಹಲವರು ತಮ್ಮ ಜೀವನಾನುಭವದಿಂದ ಅತ್ಯುತ್ತಮ ಸಂಸ್ಥೆಗಳಿಂದ ಸಮಾಜವನ್ನು ಸಲಹುತ್ತಿದ್ದಾರೆ. 'ಡಿವೈನ್ ಲೈಫ್' ಸೊಸೈಟಿಯ 'ಶಿವಾನಂದ ಸರಸ್ವತಿ' ಇವರಲ್ಲಿ ಪ್ರಮುಖರು. ವೈದ್ಯನಾಗಿ ಸೇವೆ ಸಲ್ಲಿಸಿದ ಶಿವಾನಂದರು ತದನಂತರ ಮುಕ್ತಿಯ ಪಥದಲ್ಲಿ ಈ ಸಂಸ್ಥೆ ಕಟ್ಟಿದರೆಂಬುದು ಉಲ್ಲೇಖನೀಯ.

ಶಿಕ್ಷಕ ಏನು ಮಾಡಬಲ್ಲ? ಎಂಬುದಕ್ಕೆ ಎಷ್ಟು ಪುರಾವೆ ಕೊಟ್ಟರೂ ಕಡಿಮೆಯೇ. ಅಕ್ಷರ ಕಲಿಸಬಲ್ಲ, ಇದರ ಕೃಪೆಯಿಂದ ಸಾಕ್ಷಾತ್ಕಾರವನ್ನು ಮಾಡಿಸಬಲ್ಲ, ಯಾವತ್ತಾದರೂ ಒಮ್ಮೆ ಕೆಲ ತಪ್ಪುಗಳಿಂದ ಕಂಗೆಟ್ಟಾಗ ವ್ಯಕ್ತಿಯೋರ್ವ ತಾನು ಸಾಂತ್ವನ ಕೇಳ ಬಯಸುವ ಏಕೈಕ ತಾಣವೆಂದರೇ ಅದು ಶಿಕ್ಷಕನ ಮನೆ. ಜವಾಬ್ದಾರಿಯ ಮತ್ತೊಂದರ್ಥವೇ ಶಿಕ್ಷಕ. ವಿವೇಕರು ಹೇಳುತ್ತಾರೆ–'ಸಮಾಜದಲ್ಲಿನ ಪ್ರತಿ ದ್ವಂದ್ವಕ್ಕೂ ಶಿಕ್ಷಣವೇ ಪರಿಹಾರ. ಶಿಕ್ಷಕ ಬರೀ ನೌಕರನಲ್ಲ. ಅವನನ್ನು ಬೇರೆಯವರೊಂದಿಗೆ ಹೋಲಿಸದಿರಿ. ಅವನದು ನಿಸ್ವಾರ್ಥ ಸೇವೆ. ಸರ್ಕಾರ ಸಂಬಳ ನೀಡುತ್ತಿರಬಹುದು. ಇದರಾಚೆ ಅವನದೇ ಕರ್ತವ್ಯ ಬೇಕಾದಷ್ಟಿದೆ. ಶಿಕ್ಷಕನೆಂದರೆ ಸಾಮಾನ್ಯನಲ್ಲ. ಅವನೊಬ್ಬ ಶ್ರೇಷ್ಠ ಮಾನವ ಸಂಪನ್ಮೂಲ. ಆಯಸ್ಕಾಂತದಂತೆ ಅರಳಲಿರುವ ಶಿಲ್ಪಿಗಳನ್ನು ಸೆಳೆದು, ಅವುಗಳಿಗೆ ಪೂಜನೀಯ ಸ್ಥಾನ ಕಲ್ಪಿಸುವಾತ'.

'ಶಿಕ್ಷಣ' ಮತ್ತು 'ಶಿಕ್ಷಕ'ನನ್ನು ರಕ್ತದೊಳಗಿನ ಪದಾರ್ಥಗಳಿಗೆ ಹೋಲಿಸಲಾಗಿದೆ. ಈ ರಕ್ತದ ಸಾಮಾಗ್ರಿಗಳಿಗೆ ಧಕ್ಕೆಯಾದರೆ ಇಡೀ ದೇಹವೇ ಹದಗೆಡುವಂತೆ; ಶಿಕ್ಷಕನ ಶಿಕ್ಷಣದಲ್ಲೇನಾದರೂ ಕುಂದು ಉಂಟಾದರೆ ಇಡೀ ಸಮಾಜವೇ ಕಂಗೆಡುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರೇ ನಿಜವಾದ ಭಾರತರತ್ನರು. ಒಬ್ಬ ಧ್ಯೇಯನಿಷ್ಠ ಶಿಕ್ಷಕ ನೇರವಾಗಿ ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗುವ 'ಸಂಸ್ಕೃತಿಯುಳ್ಳ ಸೈನಿಕ'.

80ರ ದಶಕದಲ್ಲಿ ಹೆಗಡೆ ಮಂತ್ರಿಮಂಡಲದಲ್ಲಿ ಶಿಕ್ಷಣ ಸಚಿವರಾಗಿದ್ದವರೊಬ್ಬರ ಒಂದು ಮಾತು ನೆನಪಿಗೆ ಬರುತ್ತಿದೆ. 'Education department is non productive'. ಯಾವುದೇ ಇಲಾಖೆಯೊಂದಿಗೆ ಶಿಕ್ಷಣ ಇಲಾಖೆಯನ್ನು ಸಮೀಕರಿಸಿ ಮಾತನಾಡುವುದು ಎಂದೂ ಒಪ್ಪತಕ್ಕದ್ದಲ್ಲ. ಎಲ್ಲೋ ಒಂದು ಕಡೆ ಇಂದಿನ ಶಿಕ್ಷಕರು ರಾಷ್ಟ್ರ ನಿರ್ಮಾಣದಲ್ಲಿ ಎಷ್ಟು ಗಮನ ನೀಡುತ್ತಿದ್ದಾರೆ ಎಂಬ ಸಂಶಯ ಕಾಡುತ್ತದೆ. ಎ.ಪಿ.ಜೆ ಅಬ್ದುಲ್ ಕಲಾಂರವರ ಅವಧಿಯಲ್ಲಿ ತಮಿಳುನಾಡಿನ ಒಬ್ಬರು ಸ್ಟ್ಯಾನ್‌ಫೋರ್ಡ್ ವಿ.ವಿ ಯ ಸಂಶೋಧನೆಯನ್ನು ನಕಲು ಮಾಡಿ ಪಿ.ಹೆಚ್.ಡಿ ಪಡೆದು, ತದನಂತ ಸಿಕ್ಕಿ ಬಿದ್ದು ಅಮಾನತುಗೊಂಡಿದ್ದನ್ನು ನಾವಿಲ್ಲಿ ಸ್ಮರಿಸಬಹುದು. ಈ ವಿಚಾರವಾಗಿ ಅಸಭ್ಯ ತೋರುವವರೇ ಹೆಚ್ಚು. ನಾನೊಬ್ಬ ತಪ್ಪಿದರೇ ಸಮಾಜವೇನು ಹದಗೆಟ್ಟೀತೇ? ಎಂಬ ಕುಹುಕವಾಡುತ್ತಾರೆ. ಹಂಡೆಯಷ್ಟು ಹಾಲನ್ನು ಹಾಳು ಮಾಡುವುದಕ್ಕೆ ಹಂಡೆಯಷ್ಟೆ ಹುಳಿ ಬೇಕಿಲ್ಲ! ಅಲ್ಲವೇ!

"ಯಾವುದೇ ಕ್ಷೇತ್ರಕ್ಕೆ ಮಾನವ ಸಂಪನ್ಮೂಲ ಒದಗಿಸುವುದು ಶಿಕ್ಷಣಕ್ಷೇತ್ರ. ಆದ್ದರಿಂದ 'we must not compare any department with Education department" ಶಿಕ್ಷಣ ಇಲಾಖೆಯನ್ನು ಇತರ ಇಲಾಖೆಯೊಂದಿಗೆ ಹೋಲಿಸಲಾಗುವುದಿಲ್ಲ. ಹೇಗಿದ್ದರೂ ನಮ್ಮ ಇಲಾಖೆಯಲ್ಲಿನ ಕೆಲದೋಷಗಳನ್ನು ನಿವಾರಿಸಿಕೊಳ್ಳುವುದು ಅನಿವಾರ್ಯ ಮತ್ತು ಕರ್ತವ್ಯ. ನನ್ನ ದೇಶದ ಶಿಕ್ಷಕರು ಅದೆಷ್ಟು ಸಮರ್ಪಕ ವಿದ್ಯಾರ್ಜನೆಯಲ್ಲಿ ಭಾಗಿಯಾಗುತ್ತಿದ್ದಾರೆಂಬ ಪ್ರಶ್ನೆ ಕಾಡುತ್ತದೆ. ಒಮ್ಮೆ ನಮ್ಮನ್ನೇ ನಾವು ಕೇಳಿಕೊಳ್ಳೋಣ. 'ಓ ಶಿಕ್ಷಕರೇ, ನಿಜವಾಗಿಯೂ ನೀವು ಶಿಕ್ಷಕ ವೃತ್ತಿಯನ್ನು ಒಪ್ಪಿ ಬಂದಿದ್ದೀರೇ? ಪಾಠ ಪ್ರವಚನದಲ್ಲಿ ಪಠ್ಯದ ವಸ್ತು ನಿಷ್ಟ–ನಿಖರ ಜ್ಞಾನ ನಿಮ್ಮಲ್ಲಿದೆಯೇ? ಎಷ್ಟು ಮಂದಿ ನಿಮ್ಮಲ್ಲಿ ತಾವು ಪಾಠ ಕೇಳುವ ವಿದ್ಯಾರ್ಥಿಗಳನ್ನು ನಿಮ್ಮ ನಿಮ್ಮ ಮಕ್ಕಳಂತೆ ಕಾಣುತ್ತೀರ? ವಿಷಯ ಸಂಗ್ರಹದಲ್ಲಿ ಕೊರತೆ ಇರುವುದಾದರೇ ಪ್ರಾಮಾಣಿಕವಾಗಿ ಒಪ್ಪಿಕೊಂಡು ಅಧ್ಯಯನ ಶೀಲತೆಗೆ ನಿಮ್ಮನ್ನು ತೊಡಗಿಸಿಕೊಳ್ಳುತ್ತೀರೇ? ಸರ್ಕಾರ ನಮಗೆ ಭೌತಿಕ ಸಂಪನ್ಮೂಲಗಳಾದ ಮೇಜು, ಕುರ್ಚಿ, ಬೋರ್ಡ್ , ಶಾಲೆ ಕಟ್ಟಲು ಭೂಮಿ, ಗ್ರಂಥಾಲಯಗಳು ಇಷ್ಟೇ ಯಾಕೆ, ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ನೀಡಬಹುದು. ಆದರೆ ಇದರಿಂದ ಶಿಕ್ಷಣ ಪ್ರಚುರಗೊಳ್ಳುವುದಿಲ್ಲ. ಓ ಶಿಕ್ಷಕರೇ, ನೀವೇ ಮಕ್ಕಳ ಪಾಲಿನ ನಿಜವಾದ ಗ್ರಂಥಾಲಯ. ನೀವು ಗಮನಿಸಬಹುದು. ಮಕ್ಕಳಿಗೆ ಶಿಕ್ಷಕ ಪ್ರಿಯನಾದಲ್ಲಿ ತಾನು ಕಲಿಸುವ ಎಷ್ಟೇ ಕಠಿಣ ವಿಷಯವೂ ಸರಳವಾಗಿ ಅವರ ಮತಿಗಂಟುತ್ತದೆ. ನಿಜವಾಗಿಯೂ, ಶಿಕ್ಷಣವೆಂದರೇ ದತ್ತಾಂಶಗಳನ್ನು ನೀಡುವಿಕೆಯಲ್ಲ.

ಬ್ರಿಟಿಷರು ಸೂರ್ಯ ಮುಳುಗದ ಸಾಮ್ರಾಜ್ಯ ಕಟ್ಟಿದರು. ವಿಶ್ವದಲ್ಲೇ ಅತಿ ಹೆಚ್ಚು ಸಂಪನ್ಮೂಲವನ್ನು ಆಫ್ರಿಕಾ ದೇಶ ಹೊಂದಿದೆ. ಇಲ್ಲಿನ ಕಾಡುಗಳ ದಟ್ಟತೆ ಎಷ್ಟಿದೆಯೆಂದರೆ 24 ಗಂಟೆಗಳು ಕಾಡು ಕತ್ತಲೆಯನ್ನು ಸೂಸುತ್ತದೆ. ಇಂತಹ ಸಂಪನ್ಮೂಲ ರಾಷ್ಟ್ರ, ಮಾನವ ಸಂಪನ್ಮೂಲದಲ್ಲಿ ಪ್ರಭಾವಿಯಾಗಲಿಲ್ಲ.

ಪುಟ 13 ಕ್ಕೆ ➢

➢ ಪುಟ 12 ರಿಂದ.....

ಕಾರಣ ಏನು ಗೊತ್ತೇ? ಶಿಕ್ಷಣಕ್ಕೆ ಮಹತ್ವ ನೀಡದಿದ್ದುದು. 2 ನೇ ಮಹಾಯುದ್ಧದ ಕಲಹದಿಂದ ಜಪಾನ್ ಹಿರೋಷಿಮಾ ಹಾಗೂ ನಾಗಾಸಕಿ ನಗರಗಳು ತೀವ್ರ ಹಾನಿಗೆ ತುತ್ತಾದವು. ಆದರೂ ಜಪಾನ್ ತಂತ್ರಜ್ಞಾನ ಮಾನವ ಸಂಪನ್ಮೂಲದಲ್ಲಿ ಪ್ರಗತಿಯ ಪಥದಲ್ಲಿದೆ. ಕಾರಣವಿಷ್ಟೇ, ಜಪಾನಿಯರು ಶಿಕ್ಷಣಕ್ಕೆ ಕೊಟ್ಟ ಮಹತ್ವ ಮತ್ತಾವುದಕ್ಕೂ ನೀಡಲಿಲ್ಲ. ಈ ಸಂದರ್ಭದಲ್ಲಿ ಮಾರ್ಟಿನ್‌ಲೂಥರ್‌ನ ಮಾತು ನೆನಪಾಗುವುದುಂಟು. 'Fate of any country does not depend on it's revenue!' ಇವನ ಆಶಯದಂತೆ ದೇಶದ ಸಮಗ್ರ ಬೆಳವಣಿಗೆ ಮೂಲ ಶಿಕ್ಷಣವೆನ್ನುವುದು. ಸರ್ವರೂ ಒಪ್ಪುವ ಮಾತು.

ಶಿಕ್ಷಕರು ತಮ್ಮ ಘನತೆ, ಸ್ಥಾನಮಾನವನ್ನು ಮರೆತಿದ್ದಾರೆಯೇ? ಎಂದು ತಿಳಿಯುತ್ತಿಲ್ಲ. ತುಮಕೂರಿನಲ್ಲಿ 'ಸರ್ವೋದಯ ಸಂಸ್ಥೆ'ಯನ್ನು ಸೃಷ್ಟಿಸಿದ ಜಿ. ಸೀತಾರಾಂರವರ ದೃಷ್ಟಾಂತವೊಂದನ್ನು ಕೇಳಬೇಕು. ನೀವು! ಡೆಪ್ಯುಟಿ ಕಮಿಷನರೊಬ್ಬರು ಕಾರಣಾಂತರದಿಂದ ನಗರದಿಂದ ಹೊರಹೋಗಬೇಕಾದ ಪ್ರಸಂಗ ಬಂದಿತು. ನಾನಾ ರೀತಿಯಲ್ಲಿ ಆಲೋಚಿಸಿದ ಡೆಪ್ಯೂಟಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಅವರ ಆಫೀಸಿನ ಕೀಲಿಕೈಯನ್ನು ಮತ್ತಾರ ಬಳಿಯಲ್ಲೂ ನೀಡದೆ ಸೀದಾ ತಂದು ಶಿಕ್ಷಕರಾಗಿದ್ದ ಜಿ ಸೀತಾರಾಂರವರಿಗೆ ಹಸ್ತಾಂತರಿಸಿದರು. ಒಂದು ಜಿಲ್ಲೆಯ ಮುಖ್ಯಸ್ಥ ಬೇರಾರಲ್ಲೂ ನಂಬಿಕೆಯನ್ನಿಡದೆ ಒಬ್ಬ ಶಿಕ್ಷಕನಲ್ಲಿ ಆ ಸಾಮರ್ಥ್ಯ, ನಂಬಿಕೆಯನ್ನು ಕಟ್ಟುತ್ತಾನೆಂದರೆ, ಏನಾಗಿದೆ ಇಂದಿನ ಜಗತ್ತಿನಲ್ಲಿ? ಈಗ ಯೋಚಿಸಿ ಶಿಕ್ಷಕರೇ ನಿಮ್ಮ ಸ್ಥಾನ ಎಲ್ಲಿದೆ? ಯಾವ ಮಟ್ಟದೆಂದು. ಇಂದಿನ ಕಾಲಕ್ಕೆ ಶಿಕ್ಷಣ ವ್ಯವಸ್ಥೆ ನಾನಾ ರೀತಿಯಲ್ಲಿ ಬದಲಾಗಿರುವುದು ನಿಜ. ಆ ನಿಟ್ಟಿನಲ್ಲಿ ನಿಮ್ಮ ಮುಂದಿರುವ ಸವಾಲುಗಳು ಅದೇ ತೆರನಾಗಿವೆ. ಒಂದು ಮಾತಿದೆ– "It is good to teach history, but better to create history" ಈ ವಾಕ್ಯಕ್ಕೆ ನನ್ನ ಶಿಕ್ಷಕ ಸಹೃದಯರು ಅಣಿಯಾಗಬೇಕು.

ನೀವು ಮಕ್ಕಳಿಗೆ ನೀಡುವ ಚಾರಿತ್ರ್ಯಾಧಾರಿತ ದಾಖಲಾತಿಗೆ ಸಹಿ ಹಾಕುವಾಗ ನಿಮ್ಮ ಚಾರಿತ್ರ್ಯಶೀಲತೆಯನ್ನು ಪ್ರಶ್ನಿಸಿಕೊಳ್ಳಿ! ಪರೀಕ್ಷೆಯೆಂಬುದು ಬರಿ ಸಹಜತೆಯಿಂದಿಲ್ಲ. ಇಂದು ಆ ಪ್ರಕ್ರಿಯೆ ರಣರಂಗ ಸಿಸಿಟಿವಿ ಕಣ್ಗಾವಲಿನಲ್ಲಿ ಪರೀಕ್ಷೆ ನೀಡುತ್ತಿದ್ದೇವೆ. ಈ ಕೃತ್ಯ ನಮಗೆ ಬೇಕೆ? ನಮಗೆ ತಿಳಿಯದಂತೆ ಅಕ್ಷರ ರಾಕ್ಷಸರ ನಿರ್ಮಾಣದಲ್ಲಿಲ್ಲವೇ, ನಾವು. ಓ ಶಿಕ್ಷಕರೇ, ನೀವಿಂದು ಕಲಿಸುವ ಹಂತದಲ್ಲಿ ಎಡವುತ್ತಿದ್ದೀರೆಂದು ನಿಮಗನ್ನಿಸುತ್ತಿಲ್ಲವೇ? ತಪ್ಪು ಮಾಡುವ ಸ್ಥಾನ ಮಕ್ಕಳದ್ದು; ಹಾಗೆಯೇ ತಿದ್ದುವ ಕಾರ್ಯದಲ್ಲಿ ಹಿರಿಯರಾದ ನಾವಿದ್ದೇವಲ್ಲವೆ? ನಾವೇ ತಪ್ಪು ಮಾಡುವುದು ಎಷ್ಟು ಉಚಿತ? ಮಕ್ಕಳಲ್ಲಿ ರಾಷ್ಟ್ರ ಪ್ರೇಮವನ್ನು ಬಿತ್ತುತ್ತಿದ್ದೇವೆಯೇ?

ನನ್ನ ಹೈಸ್ಕೂಲಿನಲ್ಲಿ ಒಬ್ಬರು ದೈಹಿಕ ಶಿಕ್ಷಕರಿದ್ದರು. ಅವರ ಸಾಧನಾ ಪ್ರೇರಣೆ ಎಂತದ್ದೆಂದರೇ, ತಮ್ಮ 30–35 ವರ್ಷಗಳ ಸೇವೆಯಲ್ಲಿ ಸುಮಾರು 15 ಮಂದಿ ವಿದ್ಯಾರ್ಥಿಗಳನ್ನು ಸೈನ್ಯಕ್ಕೆ ಸೇರಲು ಪ್ರೇರೇಪಣೆಯಾದರು. ಇದಲ್ಲವೇ ನಿಜವಾದ ರಾಷ್ಟ್ರಪ್ರೇಮದ ಕೊಡುಗೆ. ಇಂದು ದೇಶಪ್ರೇಮದ ಕೂಗು ಎಲ್ಲಾದರೂ ಸೈನಿಕನ ದುರಾಂತ್ಯವಾದಾಗ ಮಾತ್ರ ಕೇಳಿ ಬರುತ್ತದೆ. ನ್ಯೂಸ್ ಮೀಡಿಯಾಗಳ ಪ್ಯಾನಲ್‌ಗಳಲ್ಲಿ ಕೂತು ತೋರ್ಪಡಿಕೆಯ ಮಾತುಗಳಾನ್ನಾಡುತ್ತಿರುತ್ತಾರೆ. ಅಲ್ಲಿ ಕೂರುವವನಿಗೆ ನಡೆಯುತ್ತಿರುವ ಜ್ವಲಂತತೆಯ ಚೂರೂ ಜ್ಞಾನವಿರುವುದಿಲ್ಲ. ಅಂದಿನ ರಾಜ–ಮಹಾರಾಜರುಗಳು ಯುದ್ಧಗಳಿಗೆ ಪ್ರಸಿದ್ಧಿಯಾಗಿದ್ದರೂ, ರಾಜಾಶ್ರಯದಲ್ಲಿನ ಅತಿ ನೀತಿವಂತ ಗುರುವಿನ ತಲೆಬಾಗುತ್ತಿದ್ದರು. ಗುರುವಿನ ಸಲಹೆ–ಸೂಚನೆಗಳನ್ನು ಆಜ್ಞೆಯಂತೆ ಪರಿಪಾಲಿಸುತ್ತಿದ್ದರು. ಯುದ್ಧಗಳಿಂದ ಪ್ರಸಿದ್ಧರಾದ ರಾಜರುಗಳಿಗಿಂತ ಶ್ರೇಷ್ಠ ಶಿಕ್ಷಣದಿಂದ ಪ್ರಸಿದ್ಧನಾದ ರಾಜನನ್ನೇ ಜಗತ್ತು ಗೌರವಿಸುತ್ತದೆ.

ಒಂದು ರಾಷ್ಟ್ರದ ಶಿಕ್ಷಕರ ಗುಣಮಟ್ಟ ಆ ದೇಶದ ಬೌದ್ಧಿಕ ಗುಣಮಟ್ಟಕ್ಕೆ ಸರಿಸಮಾನವಾಗಿರುತ್ತದೆ. ಈ ವಿಚಾರವನ್ನು ಸೂಕ್ಷ್ಮದೃಷ್ಟಿಯಿಂದ ಅರ್ಥೈಸಿ ನಡೆಯಬೇಕಾಗಿದೆ. ಆದ್ದರಿಂದ ಶಿಕ್ಷಕನೇ, ನಿನ್ನ ಮುಂದೆ ಹಲವಾರು ಸವಾಲುಗಳಿವೆ. ಈ ಕಠಿಣತೆಯಲ್ಲಿ ನೀನು ನೀನಾಗೇ ಉಳಿಯಬಲ್ಲೆಯಾ? ನಕಲಿ ಪ್ರಜೆಗಳು ಶತೃಗಳಿಗಿಂತ ಅಪಾಯ. ಈ ನಿಟ್ಟಿನಲ್ಲಿ ನಾವು ಇತಿಹಾಸವನ್ನು ಹೇಗೆ ಕಲಿಸುತ್ತಿದ್ದೇವೆ? ಈ ವಿಚಾರವಾಗಿ ದೇಶದಲ್ಲಿ ಉದ್ಭವಿಸಿದ ಸಿಎಎ ವಿರುದ್ಧದ ಕೂಗನ್ನು ಗಮನಿಸಿದ್ದೀರಲ್ಲವೇ? ಶಿಕ್ಷಕನೇ ಶುಚಿತ್ವದ ಕುರಿತಾದ ಪಾಲನೆಯಲ್ಲಿ ಗಮನವಿದೆಯೇ? ನೀ ಪಾಠದಲ್ಲಿ ಕಲಿಸುವುದನ್ನು ಪಾಲಿಸಿದಾಗಲೇ ನಿನ್ನ ವ್ಯಕ್ತಿತ್ವ ಪೂಜನೀಯವಾಗುವುದು. "ಅರ್ಚಕನಂತೆ ಗುಡಿ, ಗೃಹಿಣಿಯಂತೆ ಮನೆ ಹೇಗೋ, ಹಾಗೆಯೇ ಶಿಕ್ಷಕನಂತೆ ಸಮಾಜ" ಎನ್ನುವುದನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ.

ಸ್ಪೇನ್‌ನಲ್ಲೂ ನಡೆದ 4ನೇ ವಿಶ್ವಧರ್ಮ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗುವ ಅವಕಾಶ ನನಗೆ ಸಿಕ್ಕಿತು. ಅಲ್ಲಿನ ಜನಸಾಂದ್ರತೆಯ ಮುಂದೆ ಮಾತನಾಡುವ ಶಕ್ತಿಯು ಫಲದಾಯಕವಾದುದ್ದು, 5 ನೇ ತರಗತಿಯಲ್ಲಿ ನನಗೆ ಬಿತ್ತಿದ ಮಾತುಗಾರಿಕೆಯ ಶಿಕ್ಷಣದಿಂದ ಎಂದರೇ ಅತಿಶಯೋಕ್ತಿಯಲ್ಲ. "ಬಿತ್ತಿದ್ದು ಬೀಜ, ಬೆಳೆದದ್ದು ತೆನೆ" ಪುಟ್ಟ ಸಸಿಯೊಂದು ಮುಂದೆ ಹೆಮ್ಮರವಾಗಿ ಬೆಳೆದು ಸಾಕಷ್ಟು ಪ್ರಾಣಿ ಪಕ್ಷಿಗಳಿಗೆ ಆಶ್ರಯ ನೀಡುತ್ತದೆ. ಧನಾತ್ಮಕತೆ ಚಿಂತನೆ ನಮ್ಮೆಲ್ಲರದ್ದಾಗಬೇಕು. ಒಂದು ಸಣ್ಣ ಮೃದು ಬೀಜ ಮುಂದೊಮ್ಮೆ ಬಂಡೆಯನ್ನೇ ಸೀಳಿ ಬೆಳೆಯುವಷ್ಟು ಬಲಿಷ್ಠವಾಗಿರುತ್ತದೆ. ಯಾವುದೇ ವಿದ್ಯಾರ್ಥಿಗಳನ್ನು ಅಶ್ಲೀಲವಾಗಿ ಬೈದು ಸಂತೋಷಪಡಬೇಡಿ. ಪದವಿ ಮುಗಿಸುವ ಪ್ರತಿ ವಿದ್ಯಾರ್ಥಿಯ ಮುಂದಿನ 30–40 ವರ್ಷಗಳ ಜೀವನಕ್ಕೆ ನಿಮ್ಮ ಕಲಿಕೆಯೆಂಬ ಡಿಗ್ರಿ ಸರ್ಟಿಫಿಕೇಟ್ ಪ್ರವೇಶ ಪತ್ರವಾಗಬೇಕು. ನಿನ್ನ ಸಕಾರಾತ್ಮಕ ಬಿತ್ತನೆಯಿಂದ ಯಾವುದೇ ವಿದ್ಯಾರ್ಥಿಯಾಗಲೀ ವೈದ್ಯ, ಅಭಿಯಂತರ, ವಿಜ್ಞಾನಿ, ಶಿಕ್ಷಕ ಮುಂತಾದ ಕ್ಷೇತ್ರಗಳಲ್ಲಿ ಬದುಕು ಕಟ್ಟಿಕೊಳ್ಳಲಿ. ಶಿಕ್ಷಕರೇ ನೆನಪಿಟ್ಟುಕೊಳ್ಳಿ ನಿಮ್ಮ ಕಲಿಕಾ ಚಿಂತನೆಯಿಂದ ನೀವು ಮಕ್ಕಳ ಜೀವನದುದ್ದಕ್ಕೂ ಬದುಕಿರುತ್ತೀರಿ.

ಇತರ ಇಲಾಖೆಗಳೊಂದಿಗೆ ಮೌಲಿಕವಾಗಿ ಅಂತರ ಕಾಯ್ದುಕೊಳ್ಳಿರಿ. ನಮ್ಮ ಅನುಮತಿಯಿಲ್ಲದೆ, ನಮ್ಮ ಬದುಕು ನಮಗೆ ಸೋಲು ನೀಡುವುದಿಲ್ಲ. ರಾಷ್ಟ್ರ ನಿರ್ಮಾಣವೆಂಬುದು ಶಿಕ್ಷಣ ಕ್ರಾಂತಿಯಿಂದಲೇ ಸಾಧ್ಯ. ಶಿಕ್ಷಣ ಕೇವಲ ಜ್ಞಾನಮಾಹಿತಿ ನೀಡುವ ಖಜಾನೆಯಾಗಬಾರದು. ಭವಿಷ್ಯದಲ್ಲಿ ಸರಿ–ತಪ್ಪುಗಳನ್ನು ನಿರ್ಧರಿಸುವ ಶಕ್ತಿಯನ್ನು ನೀಡುವಂತಾಗಬೇಕು.

ಇಂದಿನ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೇಗಿದೆಯೆಂದರೆ 'ಹುಲಿ' ಎಂಬಲ್ಲಿ 'ಇಲಿ' ಎಂದು ಬರೆದು ತಾ ಉತ್ತರಿಸಿದ ಉತ್ತರದಲ್ಲಿ 'ಲಿ' ಎಂಬ ಅಕ್ಷರ ಭಾಗಶಃ ಸರಿಯಾಗಿದೆಯೆಂದು ಸಮರ್ಥಿಸಿಕೊಂಡು ಅರ್ಧ ಅಂಕ ನೀಡಿಯೆಂದು ಅಂಗಲಾಚುತ್ತಾರೆ. ಇಂತವರೇ ಮುಂದೊಮ್ಮೆ ಅಕ್ಷರ ರಾಕ್ಷಸರಾಗುತ್ತಾರೆ. ತಾಯಿ, ತಂದೆ, ಗುರು ಈ ತ್ರಿರತ್ನರುಗಳು ಮಗುವಿನಲ್ಲಿ ಯಾವುದೇ ಬದಲಾವಣೆ ತರಬಲ್ಲರು. ಇವರ ಹೊರತು 'ಬದಲಾವಣೆ' ಆ ದೇವರಿಂದಲೂ ಅಸಾಧ್ಯ. ಶಿಕ್ಷಕನ ಯುದ್ಧ ಎಂದಿಗೂ ಅಜ್ಞಾನದ ವಿರುದ್ಧ, ನಕಾರಾತ್ಮಕೆಯ ವಿರುದ್ಧ ಇರಬೇಕು. ಸದೃಢ ಸಮಾಜ ನಿರ್ಮಾಣ ನಿಮ್ಮ ಧ್ಯೇಯವಾಗಲಿ. ಈಗ ಪ್ರಶ್ನೋತ್ತರದ ಸಮಯ ಕಮೆಂಟ್ ಬಾಕ್ಸ್‌ನಲ್ಲಿ ಆಯ್ದ ಕೆಲ ಪ್ರಶ್ನೆಗಳಿಗೆ ನಾನು ಉತ್ತರಿಸುತ್ತೇನೆ.

**ಪ್ರಶ್ನೆ– (ನಾಗಲಕ್ಷ್ಮಿ) ಇಂದಿನ ಮಕ್ಕಳಿಗೆ ನೈತಿಕ ಶಿಕ್ಷಣ ತುಂಬುವುದು ಹೇಗೆ?**

ಹೌದು, ಹಿಂದೆಲ್ಲಾ ಮೌಲ್ಯ ಶಿಕ್ಷಣವನ್ನು ಒಂದು ವಿಷಯವನ್ನಾಗಿಸಿ ಅದಕ್ಕೆಂದೆ ಸಮಯ ನಿಗಧಿಯಿರುತ್ತಿತ್ತು. ಈಗ ಆ ಪಿರಿಯಡ್ ಬೇರಾವುದೋ ವಿಷಯಕ್ಕೆ ಬಳಸಲಾಗುತ್ತಿದೆ. ಮೌಲ್ಯಗಳನ್ನು ಬಿತ್ತಲು ಪ್ರತ್ಯೇಕ ಸಮಯದ ಅಗತ್ಯವಿಲ್ಲ. ಪಾಠದ ಜತೆ–ಜತೆಗೆ ಉತ್ತಮ ರೀತಿಯಲ್ಲಿ ಮೌಲ್ಯಗಳನ್ನು

ಪುಟ 17 ಕ್ಕೆ ➢

# ಶಿಕ್ಷಣಕ್ಕೆ ಕರೋನ ಗ್ರಹಣ

**ಡಾ॥ ಟಿ. ಎನ್. ಲೋಕೇಶ್**
**ಪ್ರಾಧ್ಯಾಪಕರು ಮತ್ತು ಚಿಂತಕರು**
**ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು**
**ಜಯನಗರ, ಬೆಂಗಳೂರು-11**



**"ಓದುವುದನ್ನು ಬರೆಯುವುದನ್ನು ಕಲಿಯುವುದು ವಿದ್ಯಾಭ್ಯಾಸವಲ್ಲ; ವಿನಯವನ್ನು ವಿವೇಕವನ್ನು ಕಲಿಸುವುದೇ ವಿದ್ಯಾಭ್ಯಾಸ".**

-ಮಹಾಭಾರತ

ಮಹಾಭಾರತದ ಉದ್ಘೋಷದಂತೆ 'ವಿನಯ' ಮತ್ತು 'ವಿವೇಕ' ವನ್ನು ಕಲಿಸುವ ನಿಜವಾದ ವಿದ್ಯಾಭ್ಯಾಸ ಕೊರೋನ ಕಂಟಕದಿಂದ ಮಾಯವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿನ ಶಿಕ್ಷಣ ವ್ಯವಸ್ಥೆ ಕರೋನಾದಿಂದ ಆದ ಲಾಕ್‌ಡೌನ್‌ನಿಂದಾಗಿ ತತ್ತರಿಸಿಹೋಗಿದೆ. ತತ್ಪರಿಣಾಮ ಎಲ್ಲಾ ಬೋರ್ಡ್ ಪರೀಕ್ಷೆಗಳು, ನರ್ಸರಿ ದಾಖಲಾತಿ, ಉನ್ನತ ವ್ಯಾಸಂಗಕ್ಕಿರುವ ಪ್ರವೇಶ ಪರೀಕ್ಷೆ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸದ ಕಾರಣ 285 ಮಿಲಿಯನ್ ಯುವ ವಿದ್ಯಾರ್ಥಿಗಳ ಶೈಕ್ಷಣಿಕ ಕಲಿಕೆಗೆ ಭಾರಿ ಹಿನ್ನಡೆಯಾಗಿದೆ. ಇದು ಕೇವಲ ಭಾರತದ ಪರಿಸ್ಥಿತಿ ಮಾತ್ರವಲ್ಲ ಇಡೀ ಜಗತ್ತಿನದ್ದು. ಜೂನ್ -07, 2020ರ ಅಂದಾಜಿನ ಪ್ರಕಾರ ಜಗತ್ತಿನ 1.725 ಬಿಲಿಯನ್ ವಿದ್ಯಾರ್ಥಿಗಳು ಶಾಲೆ ಮುಚ್ಚಿದ್ದರಿಂದ ತೊಂದರೆಗೆ ಒಳಗಾಗಿದ್ದಾರೆ. ಯುನಿಸೆಫ್ ಪ್ರಕಾರ ಜಗತ್ತಿನ 134 ರಾಷ್ಟ್ರಗಳಲ್ಲಿ ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಕರೋನಾ ಮಹಾಮಾರಿಯಿಂದ ನಲುಗಿ ಬಂದ್ ಆಗಿದ್ದವು. ಶಿಕ್ಷಣಕ್ಕೆ ಕರೋನ ಗ್ರಹಣದಿಂದ ಜಗತ್ತಿನಾದ್ಯಂತ ವಿದ್ಯಾರ್ಥಿ ಸಮೂಹ ಮತ್ತು ಯುವಶಕ್ತಿ ಆಘಾತಕ್ಕೆ ಒಳಗಾಗಿದ್ದಾರೆ. ಜಗತ್ತಿನ ಶೇಕಡಾ 72%ರಷ್ಟು ವಿದ್ಯಾರ್ಥಿ ಸಮೂಹದ ಮಾನಸಿಕತೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಯುನೆಸ್ಕೊ ವರದಿಯ ಪ್ರಕಾರ ಮಾನವ ಇತಿಹಾಸದಲ್ಲಿ ಘಟಿಸಿದ ಎರಡನೇ ಜಾಗತಿಕ ಮಹಾ ಸಮರದ ದುಷ್ಪರಿಣಾಮಕ್ಕಿಂತ ಕರೋನದ ಆಘಾತ ಹೆಚ್ಚಿನದು ಎಂದು ಅಭಿಪ್ರಾಯ ಪಟ್ಟಿದೆ. ಕೆಲವೊಂದು ಅಂಶಗಳನ್ನು ಈ ರೀತಿ ಗಮನಿಸಬಹುದಾಗಿದೆ.

**1. ಕಲಿಕೆಗೆ ಅಡಚಣೆ:-** ಶಾಲಾ ಕಾಲೇಜುಗಳು ಬಂದ್ ಆಗಿದ್ದರಿಂದ ವಿದ್ಯಾರ್ಥಿಗಳ ಬೆಳವಣಿಗೆ ಮತ್ತು ವಿಕಾಸಕ್ಕೆ ಪೂರಕ ವಾತಾವರಣದ ಕೊರತೆ ಉಂಟಾಗಿದೆ. ಇದರಿಂದ ವಿದ್ಯಾರ್ಥಿಗಳು ಹಲವಾರು ಅವಕಾಶಗಳಿಂದ ವಂಚಿತರಾಗಿದ್ದಾರೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪ್ರಗತಿಗೆ ನೇರ ಅಡ್ಡ ಪರಿಣಾಮ ಉಂಟಾಗಿದೆ.

**2. ದುರ್ಬಲ ಪೋಷಣೆ:-** ಶಾಲಾ ಕಾಲೇಜುಗಳಲ್ಲಿ ದೊರೆಯುತ್ತಿದ್ದ ಉಚಿತ ಪೌಷ್ಠಿಕಯುಕ್ತ ಆಹಾರದ ಲಾಭ ಪಡೆಯುತ್ತಿದ್ದ ವಿದ್ಯಾರ್ಥಿಗಳು ಅದರಿಂದ ವಂಚಿತರಾಗಿ ನ್ಯೂನಪೋಷಣೆಗೆ ಒಳಗಾಗಿದ್ದಾರೆ.

**3. ಶಿಕ್ಷಕರಲ್ಲಿ ದ್ವಂದ್ವ ಮತ್ತು ಒತ್ತಡ:-** ಒಮ್ಮೆಲೆ ಶಾಲಾ ಕಾಲೇಜುಗಳು ಬಂದ್ ಆದ ಪರಿಣಾಮ ಮಕ್ಕಳಿಗೆ ಹೇಗೆ ಬೋಧನೆ - ಕಲಿಕೆ ಒದಗಿಸಬೇಕು ಎಂಬ ವಿಚಾರದಲ್ಲಿ ಸಾಕಷ್ಟು ದ್ವಂದ್ವ ಮತ್ತು ಒತ್ತಡದ ತತ್ಪರಿಣಾಮ ಶಿಕ್ಷಕರ ಮಾನಸಿಕ ಸಮತೋಲನಕ್ಕೆ ಧಕ್ಕೆ ಉಂಟಾಗಿ ನಿರಶಾಭಾವವನ್ನು ತಂದೊಡ್ಡಿದೆ.

**4. ಪೋಷಕರ ತಯಾರಿ ಸಮಸ್ಯೆ:-** ಪೋಷಕರು ಮನೆಯಲ್ಲಿ ತಮ್ಮ ಮಕ್ಕಳಿಗೆ ಪಾಠ ಮಾಡಲು ಸಮರ್ಪಕವಾದ ತಯಾರಿಯ ಸಮಸ್ಯೆ ಇರುವುದು. ಕೆಲವೊಂದು ಸಾರಿ ನುರಿತ ಶಿಕ್ಷಕರಂತೆ ಹೇಳಿಕೊಡುವುದು ಸಾಧ್ಯವಿಲ್ಲದ ಪ್ರಯತ್ನ ಹಾಗೂ ಪೋಷಕರಿಗೆ ವಿದ್ಯಾರ್ಹತೆ ಮತ್ತು ಸಂಪನ್ಮೂಲಗಳ ಕೊರತೆ.

**5. ಸವಾಲುಗಳ ಸೃಷ್ಟಿ :-** ಮಕ್ಕಳ ಕಲಿಕೆ ಶಾಲೆಯಿಂದ ಮನೆಗೆ ವರ್ಗಾವಣೆಗೊಂಡ ಸಂದರ್ಭ ಪೋಷಕರಿಗೆ ಹಲವಾರು ಸವಾಲುಗಳನ್ನು ಸೃಜಿಸಿದೆ. ಕಲಿಕೆಯನ್ನು ನಿರ್ವಹಿಸುವುದು ಪೋಷಕರ ಮುಂದೆ ಇರುವ ಅತೀ ದೊಡ್ಡ ಸವಾಲಾಗಿ ಪರಿಣಮಿಸಿದೆ.

**6. ರಕ್ಷಣೆಯ ಹೊರೆ :-** ಮಕ್ಕಳು ಮನೆಯಲ್ಲಿ ಉಳಿದಿದ್ದರಿಂದ ಪೋಷಕರಿಗೆ ರಕ್ಷಣೆಯ ಕಂದಕಗಳು ಗೋಚರಿಸಿ, ಪರ್ಯಾಯ ಮಾರ್ಗಗಳ ಅನುಪಸ್ಥಿತಿಯಲ್ಲಿ ಗೊಂದಲಕ್ಕೆ ಒಳಗಾದ ಪೋಷಕರು, ಕೆಲಸಕ್ಕೆ ಹೋಗುವ ಪೋಷಕರಿಬ್ಬರ ಮಕ್ಕಳ ಸ್ಥಿತಿ ನಿಜಕ್ಕೂ ಕರುಣಾಜನಕ. ತತ್ಪರಿಣಾಮ ಮಕ್ಕಳು ಒಂಟಿಯಾಗಿ ಮನೆಯಲ್ಲಿರುವುದರಿಂದ ಅವರ ವರ್ತನೆಗಳಲ್ಲಿ ಅಡ್ಡಪರಿಣಾಮ ಉಂಟಾಗುತ್ತಿದೆ. ಸಮವಯಸ್ಕರ ಒತ್ತಡದಿಂದ ಮಾದಕವಸ್ತುಗಳ ವ್ಯಸನಿಯಾಗಿ ಬಹುಮೌಲ್ಯ ಮಾನವ ಸಂಪನ್ಮೂಲದ ವಿನಾಶವಾಗುತ್ತಿದೆ.

**7. ಆರ್ಥಿಕ ಹಿನ್ನಡೆ :-** ಕೆಲಸಕ್ಕೆ ಹೋಗುವ ಪೋಷಕರು ಮಕ್ಕಳ ಸಲುವಾಗಿ ಕೆಲಸಕ್ಕೆ ಗೈರು ಹಾಜರಾಗಿ ಮನೆಯಲ್ಲೇ ಉಳಿದರೆ ಆರ್ಥಿಕ ನಷ್ಟ ಅನುಭವಿಸಬೇಕಾಗುತ್ತದೆ. ಇದು ಕುಟುಂಬದ ಒಟ್ಟು ಉತ್ಪಾದಕತೆಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ.

**8. ತುರ್ತು ಸೇವೆಗೆ ಗೈರು:** - ತುರ್ತು ಸೇವೆಗಳಲ್ಲಿರುವ ಪೋಷಕರು ಮಕ್ಕಳ ರಕ್ಷಣೆಯ ಸಲುವಾಗಿ ಮನೆಯಲ್ಲಿ ಉಳಿದರೆ, ಸಮಾಜಕ್ಕೆ ಅಂತಹವರಿಂದ ಸಿಗಬಹುದಾದ ಅಮೂಲ್ಯ ಸೇವೆ ತಪ್ಪಿ, ಸೇವಾ ಬಡತನಕ್ಕೆ ದಾರಿಮಾಡಿಕೊಡುತ್ತದೆ.

**9. ಸಾಮಾಜಿಕ ಪ್ರತ್ಯೇಕತೆ:** - ಶಾಲೆಗಳು ಸಾಮಾಜಿಕ ಚಟುವಟಿಕೆಯ ಕೇಂದ್ರಗಳು. ಶಾಲೆಗಳು ಮುಚ್ಚಿದ್ದರಿಂದ ಸಾಮಾಜಿಕ ಸಂಬಂಧಗಳ ಅಭಿವೃದ್ಧಿಗೆ ತೊಡಕು. ತತ್ಪರಿಣಾಮ ಉತ್ತಮ ಕಲಿಕೆ ಗಳಿಸಲು ವಿಫಲರಾಗುವ ವಿದ್ಯಾರ್ಥಿ ಸಮೂಹ.

**10. ಮೌಲ್ಯಮಾಪನದ ಸವಾಲು:-** ಲಾಕ್‌ಡೌನ್ ಪರಿಣಾಮ ಪರೀಕ್ಷೆಗಳು ಮುಂದೂಡುವುದು ಒಂದು ರೀತಿಯ ಅನಿಶ್ಚಿತತೆಗೆ ಕಾರಣವಾಗಿ ಮಕ್ಕಳಿಗೆ ಮಾನಸಿಕ ಒತ್ತಡ ಉಂಟಾಗುತ್ತದೆ.

ಕೋವಿಡ್-19 ರಿಂದ ಉಂಟಾಗಿರುವ ಇಂತಹ ತಲ್ಲಣ ಪರಿಸ್ಥಿತಿಯಲ್ಲಿ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಜೀವನ ಕೌಶಲ್ಯಗಳನ್ನು ಬೆಳಸಬೇಕಾಗಿದೆ. ಕಲಿಕೆಯನ್ನು ಸಮಗ್ರ ಮತ್ತು ಅನುಭವತ್ಮಾಕಗೊಳಿಸಿ ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಸಂಲಗ್ನಗೊಳಿಸಿ 'ಡಿಜಿಟಲ್ ಭಾರತ'ವನ್ನು ಸಶಕ್ತಗೊಳಿಸಬೇಕಾಗಿದೆ. ಈಗಾಗಲೇ ಶತಮಾನಗಳಷ್ಟು ಹಳೆಯದಾದ ಸಾಂಪ್ರದಾಯಿಕ ಚಾಕ್-ಟಾಕ್ ಬೋಧನಾ ಮಾದರಿ ಮಾಯವಾಗಿ ಸಂಪೂರ್ಣ ಇ-ಲರ್ನಿಂಗ್ ಆಗಿ 'ಡಿಜಿಟಲ್-ಕಂದರ'ದ ಅಂತರವನ್ನು ಕಡಿಮೆಮಾಡಿದೆ.

ಭಾರತದಂತಹ ಶ್ರೇಷ್ಠ ರಾಷ್ಟ್ರದ ಪ್ರಜ್ಞಾವಂತ ವಾರಸುದಾರರಾದ ನಾವೆಲ್ಲ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ನಿಷ್ಕರ್ಷೆ ಮಾಡುವ ಕಾಲ ಬಂದೊದಗಿದೆ. ಈ ಸಂದರ್ಭದಲ್ಲಿ ಧನಾತ್ಮಕ ಲಾಭವನ್ನು ನಾವೆಲ್ಲ ಪಡೆದುಕೊಳ್ಳುವುದು ಅನಿವಾರ್ಯವಾಗಿದೆ. ಭಾರತದ ಶಿಕ್ಷಣ ಕ್ರಮವನ್ನು ಸಂಪೂರ್ಣ ಭಾರತೀಯ

**ಪುಟ 17 ಕ್ಕೆ ➤**

# ಶಿಕ್ಷಕ ಮತ್ತು ಮನಸ್ಥೈರ್ಯ – ಡಾ॥ ವಿ.ಬಿ.ಆರತಿ



**ಪ್ರಭು ಹಿಡಕಲ್**
**ಸಹಶಿಕ್ಷಕರು**
**ಸರ್ಕಾರಿ ಪ್ರೌಢಶಾಲೆ, ಮದಗಿರಿ,**
**ರಾಯಚೂರು ಜಿಲ್ಲೆ**

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ದಿನಾಂಕ 01.06.2020 ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ **"ಶಿಕ್ಷಕ ಮತ್ತು ಮನಸ್ಥೈರ್ಯ"** ಎಂಬ ವಿಷಯವಾಗಿ ಡಾ॥ ವಿ.ಬಿ.ಆರತಿ, ಪ್ರಸಿದ್ಧ ಅಂಕಣಕಾರರು ಮತ್ತು ವಿಭು ಅಕಾಡೆಮಿಯ ಸಂಸ್ಥಾಪಕ ಮುಖ್ಯಸ್ಥರಿಂದ ಉಪನ್ಯಾಸ ಕಾರ್ಯಕ್ರಮವನ್ನು ಫೇಸ್‌ಬುಕ್ ಲೈವ್‌ನಲ್ಲಿ ಏರ್ಪಡಿಸಿತ್ತು. ಅವರ ಉಪನ್ಯಾಸದ ಸಾರಾಂಶ ಇಲ್ಲಿದೆ.

ಶಿಕ್ಷಕ ಒಬ್ಬ ಉರಿಯುತ್ತಿರುವ ಮೇಣದ ಬತ್ತಿಯಂತೆ ತಾನು ಉರಿಯುತ್ತಾನೆ, ಉರಿಯುವ ಬೆಳಕಿನಲ್ಲಿ ಮಕ್ಕಳನ್ನು ಮುನ್ನಡೆಸುತ್ತಾನೆ. ಅಲ್ಲಿ ಮಕ್ಕಳ ಬೆಳಕಿನಾಟವನ್ನು ನೋಡಿ ತಾನೂ ಸಂತೋಷ ಪಡುತ್ತಾನೆ.

ಶಿಕ್ಷಕ ಒಬ್ಬ ಆದರ್ಶ ವ್ಯಕ್ತಿಯಾಗಿರುತ್ತಾನೆ. ಮನೋಸ್ಥೈರ್ಯ ಇದು ಆಂತರಿಕವಾದಂತಹ ವಿಷಯ ಪ್ರತಿ ಕ್ಷಣವು ನಾವು ಅದನ್ನು ಬೆಳೆಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಕಾಳಿದಾಸ ಹೇಳುತ್ತಾನೆ–ಮನಸ್ಸನ್ನು ವಿಕಾರಗೊಳಿಸುವ ವ್ಯಕ್ತಿ ಅಥವಾ ವಸ್ತು ನಮ್ಮ ಹತ್ತಿರವಿದ್ದರು ಕೂಡಾ ನಾವು ವಿಕಾರವಾಗದೇ ಇರುವುದು. ಕಣ್ಮುಂದೆ ಕೋಪ ಬರುವಂತ ವಿಷಯ ಇದ್ದರೂ ಅದನ್ನು ತಡೆದುಕೊಳ್ಳುವುದು. ಕಾಮ ಉಕ್ಕುವಂತ ಸಂಗತಿ ಇದ್ದರೂ ಅದನ್ನು ತಡೆದುಕೊಳ್ಳಬೇಕಾಗುತ್ತದೆ. ಹೊಟ್ಟೆಕಿಚ್ಚು ಬರುತ್ತಿದ್ದರೂ ಅದನ್ನು ತಡೆದುಕೊಳ್ಳಬೇಕು. ಈ ರೀತಿಯಾಗಿ ತಡೆದುಕೊಳ್ಳುವ ಸ್ಥಿತಿಯನ್ನು ಧೈರ್ಯ ಅಥವಾ ಮನಸ್ಥೈರ್ಯ ಎನ್ನುತ್ತೇವೆ. ಹೇಗೆ ಒಂದು ವಸ್ತುವು ಇನ್ನೊಂದು ವಸ್ತುವಿನೊಂದಿಗೆ ಘರ್ಷಣೆ ಆದಾಗ ಉಷ್ಣಾಂಶ ಬರುತ್ತದೆಯೋ ಹಾಗೆಯೇ ಶಿಕ್ಷಕರಾದ ನಾವು ಪಾಠ ಮಾಡುವ ಸಂದರ್ಭದಲ್ಲಿ ಅನೇಕ ಸವಾಲುಗಳ ಮಧ್ಯದಲ್ಲಿಯೂ ಸ್ಮೃತಿಗೆಡದೆ ಇರುವುದೇ ಮನಸ್ಥೈರ್ಯ. ನಾವು ಪಾಠ ಮಾಡುವ ತರಗತಿಯಲ್ಲಿ 40 ವಿದ್ಯಾರ್ಥಿಗಳಿದ್ದರೆ 40 ವಿಧದಲ್ಲಿ ಉತ್ತರಗಳನ್ನು ನೀಡುತ್ತಾರೆ. ಆಗ ನಮಗೆ ಸ್ವಲ್ಪ ಬೇಜಾರಾಗುತ್ತದೆ. ಇಷ್ಟೆಲ್ಲ ಪ್ರಯತ್ನ ಮಾಡಿದರು ವಿವಿಧ ರೀತಿಯಲ್ಲಿ ಉತ್ತರ ಬರೆದಿರುವರೆಂದು. ಆದರೆ ಈ ಸಮಯದಲ್ಲಿ ನಾವು ನಮ್ಮ ಮನಸ್ಸನ್ನು ಹಿಡಿತದಲ್ಲಿ ಹಿಡಿದುಕೊಳ್ಳುವುದು ತುಂಬಾ ಮುಖ್ಯವಾಗಿರುತ್ತದೆ. ಇದನ್ನೆ ಮನಸ್ಥೈರ್ಯ ಎನ್ನುತ್ತಾರೆ. ಶಿಕ್ಷಕರಾದವರು ಇಂತಹ ಮನಸ್ಥೈರ್ಯವನ್ನು ಬೆಳೆಸಿಕೊಳ್ಳುವುದು ತುಂಬಾ ಅವಶ್ಯಕವಾಗಿದೆ. ಮಕ್ಕಳ ವಿಷಯದಲ್ಲಿ ಶಿಕ್ಷಕರು ಎದುರಿಸುವ ಸವಾಲುಗಳು ಬೇರೆ ಬೇರೆಯಾಗಿರುತ್ತವೆ. ಚಿಕ್ಕಮಕ್ಕಳಿಗೆ ಪಾಠ ಮಾಡುವಾಗಿನ ಸವಾಲುಗಳು ಬೇರೆ. ಮಾಧ್ಯಮಿಕ ವಿಭಾಗದ ವಿದ್ಯಾರ್ಥಿಗಳಿಗೆ ಪಾಠ ಮಾಡುವಾಗಿನ ಸವಾಲುಗಳೇ ಬೇರೆ. ಹಾಗೆ ಪ್ರೌಢಾವಸ್ಥೆಯಲ್ಲಿರುವ ಮಕ್ಕಳಿಗೆ ಪಾಠ ಮಾಡುವಾಗಿನ ಸವಾಲುಗಳೇ ಬೇರೆಯಾಗಿರುತ್ತವೆ. ಪ್ರಾಥಮಿಕ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರಿಗೆ ತುಂಬಾ ತಾಳ್ಮೆಯಿರುತ್ತದೆ. ಪ್ರಾಥಮಿಕ ಹಾಗೂ ಪೂರ್ವಪ್ರಾಥಮಿಕ ಶಾಲಾ ಮಕ್ಕಳಲ್ಲಿ ಚಂಚಲತೆ ತುಂಬಾ ಇರುತ್ತದೆ. ಇಂತಹ ಮಕ್ಕಳಿಗೆ ಪಾಠ ಮಾಡುವುದೇ ಒಂದು ಸವಾಲಾಗಿರುತ್ತದೆ ಆದ್ದರಿಂದ ನಾವು ಅವರ ಮನಸ್ಥಿತಿಯನ್ನು ಅರಿತುಕೊಳ್ಳಬೇಕಾಗುತ್ತದೆ. ನಾವು ಆಗ ತಾಳ್ಮೆಯಿಂದ ವರ್ತಿಸಬೇಕಾಗುತ್ತದೆ. ಶಿಕ್ಷಕರು ಕೇವಲ ಶಿಕ್ಷಕರಾಗದೇ ಮನಃಶಾಸ್ತ್ರವನ್ನು ಅರಿತುಕೊಳ್ಳಬೇಕಾಗುತ್ತದೆ. ಮಕ್ಕಳ ಮನಸ್ಥಿತಿಯನ್ನು ಅರಿತುಕೊಂಡರೆ ನಮ್ಮಲ್ಲಿ ಸಮಾಧಾನ ತಾನಾಗೇ ಬರುತ್ತದೆ. ಮಕ್ಕಳಲ್ಲಿರುವ ಉತ್ಸಾಹವನ್ನು ನಾವು ಕ್ರೀಯಾಶಿಲಗೋಳಿಸಬೇಕು.

ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ಅವರು ವಿದೇಶದ ಒಂದು ವಿಶ್ವವಿದ್ಯಾಲಯಕ್ಕೆ ಹೋದಾಗ ಅಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತಾರೆ, ನೀವು ಭೇಟಿ ಮಾಡಿದ ಅತ್ಯುತ್ತಮ ವಿಜ್ಞಾನಿ ಯಾರು? ಎಂದು. ಆಗ ಅಬ್ದುಲ್ ಕಲಾಂರವರು ಉತ್ತರ ಕೊಡುತ್ತಾರೆ, ಅತ್ಯುತ್ತಮ ವಿಜ್ಞಾನಿ ಎಂದರೆ 'ಮಗು' ಅಂತ ಹೇಳುತ್ತಾರೆ. ಪ್ರತಿಯೊಂದು ಮಗುವು ಏನಾದರೂ ಒಂದು ಪ್ರಯೋಗ ಮಾಡುವ ವಿಜ್ಞಾನಿ ಎಂದು ಅವರು ಹೇಳುತ್ತಾರೆ. ಮಕ್ಕಳು ಯಾವಾಗಲೂ ಏನಾದರೊಂದು ಪ್ರಯೋಗವನ್ನು ಮಾಡುತ್ತಿರುತ್ತಾರೆ. ಆದರೆ ನಮಗೆ ಅವರು ಏನೋ ಕೀಟಲೆ ಮಾಡುತ್ತಿರುತ್ತಾರೆ ಎಂದು ಅನಿಸುತ್ತದೆ. ಮಕ್ಕಳು ನಿತ್ಯವೂ ಕುತೂಹಲಿಗಳಾಗಿರುತ್ತಾರೆ. ಈಗ ಶಿಕ್ಷಕರಾಗಿರುವ ನಾವು ಮಗುವಿನಲ್ಲಿ ಅರಳಿರುವ ಕುತೂಹಲವನ್ನು ಉದಾತ್ತೀಕರಿಸಬೇಕು. ಉಕ್ಕಿ ಹರಿಯುವ ನದಿಯನ್ನು ತಡೆಯಲು ಸಾಧ್ಯವಿಲ್ಲ, ತಡೆಯಲೂ ಬಾರದು, ಬದಲಾಗಿ ಅದಕ್ಕೊಂದು ಸರಿಯಾದ ಮಾರ್ಗ ತೋರಿಸಿದರೆ ಅದರಿಂದ ಅನೇಕ ಪ್ರಯೋಜನ ಪಡೆಯಬಹುದು. ಹಾಗೇ ಉಕ್ಕಿ ಬರುತ್ತಿರುವ ಮಕ್ಕಳ ಉತ್ಸಾಹವನ್ನು ತಡೆಯದೆ ಅವರಿಗೆ ಸರಿಯಾದ ಮಾರ್ಗವನ್ನು ತೋರಿಸಿದ್ದೇ ಆದರೆ ಅವರು ಉನ್ನತ ವ್ಯಕ್ತಿಗಳಾಗುತ್ತಾರೆ. ಇಲ್ಲಿ ಶಿಕ್ಷಕರ ಮನಸ್ಥೈರ್ಯ ತುಂಬಾ ಮುಖ್ಯವಾಗಿರುತ್ತದೆ. ಮಕ್ಕಳಿಗೆ ಅನುಕೂಲವಾಗುವಂತಹ ಮನಸ್ಥೈರ್ಯವನ್ನು ನಾವು ಶಿಕ್ಷಕರು ಬೆಳೆಸಿಕೊಳ್ಳಬೇಕಾಗಿರುತ್ತದೆ.

ಇನ್ನೂ ಬೆಳವಣಿಗೆ ಹೊಂದಿದ ಮಕ್ಕಳನ್ನು ಗಮನಿಸಿದಾಗ ಅವರಲ್ಲಿ ಯೌವನದ ಪ್ರಜ್ಞೆ ಬರುತ್ತದೆ. ತಾನು ಯುವಕ–ಯುವತಿ ಎನ್ನುವ ಮನೋಭಾವನೆ ಬರುತ್ತದೆ ಅದು ಸಹಜವೂ ಕೂಡಾ. ಅವರ ದೈಹಿಕ ಹಾಗೂ ಮನಸ್ಸಿನಲ್ಲಿ ಸಾಕಷ್ಟು ಬದಲಾವಣೆಗಳು ಉಂಟಾಗುತ್ತವೆ. ಜಗತ್ತನ್ನು ಅವರು ಅರ್ಥೈಸಿಕೊಳ್ಳಲು ಪ್ರಾರಂಭಿಸಿತ್ತಾರೆ. ಅವರ ಯೋಚನೆಗಳಲ್ಲಿ ಪ್ರೌಢಿಮೆ ಬರುತ್ತದೆ. ಹೀಗೆ ಸರ್ವತೋಮುಖವಾಗಿ ಬೆಳವಣಿಗೆಯ ಜೊತೆಗೆ ಅವರಲ್ಲಿ ಅಹಂ ಕೂಡಾ ಬೆಳೆಯುತ್ತದೆ. 10 ವರ್ಷಕ್ಕಿಂತ ಕೆಳಗಿರುವ ಮಕ್ಕಳಲ್ಲಿ ಅಷ್ಟೊಂದು ಅಹಂ ಇರುವುದಿಲ್ಲ. ನಾವು ಮಕ್ಕಳಿಗೆ ಏನಾದರೂ ಗದರಿಸಿದರೂ ಆ ಕ್ಷಣಕ್ಕೆ ಸ್ವಲ್ಪ ಅತ್ತು ಮತ್ತೆ ಅದನ್ನು ಮರೆತುಬಿಡುತ್ತಾರೆ. ಆದರೆ ಪ್ರೌಢಾವಸ್ಥೆ ಹಾಗೂ ಯೌವನಾವಸ್ಥೆಗೆ ಬಂದ ಮಕ್ಕಳಿಗೆ ನಾವೂ ಏನಾದರೂ ಸ್ವಲ್ಪ ಬುದ್ಧಿ ಹೇಳಿದರೂ ಅವರು ಅದನ್ನು ಸಹಿಸಿಕೊಳ್ಳುವ ಮನಸ್ಥಿತಿ ಇರುವುದಿಲ್ಲ. ಯೌವನಾವಸ್ಥೆಯಲ್ಲಿರುವ ಮಕ್ಕಳು ತಮ್ಮ ಸ್ನೇಹಿತರ ಮಾತನ್ನು ಕೇಳುತ್ತಾರೆ. ಆದರೆ ಅದೇ ಮಾತನ್ನು ಪಾಲಕರಾಗಲೀ ಅಥವಾ ಶಿಕ್ಷಕರಾಗಲೀ ಹೇಳಿದರೆ ಅದನ್ನು ಸಹಿಸಿಕೊಳ್ಳುವುದಿಲ್ಲ. ಇಂತಹ ಸಂದರ್ಭದಲ್ಲಿ ಶಿಕ್ಷಕರಿಗೆ ಉಪನ್ಯಾಸಕರಿಗೆ ಸ್ವಲ್ಪ ಯೋಚನೆಯುಂಟಾಗುತ್ತದೆ. ಮಕ್ಕಳು ಹೀಗೇಕೆ ವರ್ತಿಸುತ್ತಾರೆ ಮತ್ತು ಅದೇ ಅವರಿಗೆ ಸವಾಲಾಗಿರುತ್ತದೆ. 10 ವರ್ಷದ ಮಗು ಮುಂದೆ ದೊಡ್ಡವನಾದ ಮೇಲೆ ಒಂದೇ ರೀತಿ ವರ್ತಿಸುವುದಿಲ್ಲ ಅವನ ವಯಸ್ಸಿಗನುಗುಣವಾಗಿ ಅವನಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತಿರುತ್ತವೆ, ಜೊತೆಗೆ ಮಾನಸಿಕ ಬದಲಾವಣೆ ವರ್ತನೆಗಳು ಬದಲಾಗುತ್ತಿರುತ್ತವೆ. ಇದನ್ನು ನಾವು ಗಮನಿಸಿ ಅರ್ಥೈಸಿಕೊಳ್ಳಬೇಕಾಗುತ್ತದೆ. 16 ವರ್ಷ ದಾಟಿದ ಮಕ್ಕಳನ್ನು ಮಿತ್ರನಂತೆ ಕಾಣಬೇಕಾಗುತ್ತದೆ. ವಯಸ್ಸಿಗೆ ಬಂದ ಮಕ್ಕಳಿಗೆ ಹೆಚ್ಚಾಗಿ ಉಪದೇಶ ನೀಡುವ ಬದಲಾಗಿ ನಾವು ಅವರನ್ನು ಯಾವುದಾದರೂ ಕ್ರಿಯೆಯಲ್ಲಿ ತೊಡಗಿಸಬೇಕಾಗುತ್ತದೆ. ನಾವು ಅವರಿಗೆ

**ಪುಟ 16 ಕ್ಕೆ ➤**

➢ ಪುಟ 16 ರಿಂದ...

ಆದೇಶ ಮಾಡುವ ಬದಲಾಗಿ ಅವರನ್ನು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಬೇಕಾಗುತ್ತದೆ. ಶಿಕ್ಷಕರು ತಾನು ಮಾಡುವ ಪಾಠವನ್ನು ಮಕ್ಕಳು ಶಾಂತವಾಗಿ ಕೇಳಬೇಕು ಎಂದು ನಿರೀಕ್ಷಿಸುವುದು ತಪ್ಪಾಗುತ್ತದೆ. 8–9 ನೇ ವಯಸ್ಸಿನ ಮಕ್ಕಳು ಯಾವುದೇ ತುಂಟುತನ ಮಾಡದೇ ಸಮಾಧಾನದಿಂದ ಇರಬೇಕು ಎಂದು ಬಯಸುವುದು ತಪ್ಪಾಗುತ್ತದೆ. ಅದು ಆ ವಯಸ್ಸಿನ ಮಕ್ಕಳ ಸಹಜ ಗುಣವಾಗಿರುತ್ತದೆ. ಇದನ್ನು ನಾವು ತಿಳಿದುಕೊಳ್ಳುವುದಕ್ಕೆ ಮನಸ್ಥೈರ್ಯ ಬೇಕಾಗುತ್ತದೆ.

ಒಬ್ಬ ಪೋಲಿಸ್ ಅಧಿಕಾರಿಯ ಮಗನೇ ಅಪರಾಧಿಯಾಗಿ ಬಂದಾಗ ಅವನಿಗೆ ಶಿಕ್ಷೆ ನೀಡುವಾಗ ಆ ಪೋಲಿಸ್ ಅಧಿಕಾರಿಗೆ ಮನಸ್ಸಿನಲ್ಲಿ ತಳಮಳ ಉಂಟಾಗುತ್ತದೆ. ಆಗ ಆ ಅಧಿಕಾರಿಗೆ ಮನಸ್ಥೈರ್ಯದ ಪ್ರಶ್ನೆ ಬರುತ್ತದೆ. ಬೇರೆಯವರು ಅಪರಾಧ ಮಾಡಿದಾಗ ದಂಡಿಸುವಾಗಿನ ಮನಸ್ಥಿತಿಗೂ, ತನ್ನ ಮಗನೇ ಅಪರಾಧಿಯಾಗಿ ಬಂದಾಗ ದಂಡಿಸುವಾಗಿನ ಮನಸ್ಥಿತಿಗೂ ವ್ಯತ್ಯಾಸವಿರುತ್ತದೆ. ಅರ್ಜುನನಿಗೆ ಕರ್ತವ್ಯ ಮಾಡುವಾಗ ಭ್ರಾಂತಿ ತುಂಬಿತ್ತು, ಅದೇನೆಂದರೆ ಅಪ್ರಿಯವಾದ ಕರ್ತವ್ಯವನ್ನು ಹೇಗೆ ಮಾಡುವುದು? ಎಂದು. ಕುರುಕ್ಷೇತ್ರದಲ್ಲಿ ತನ್ನ ಸಂಬಂಧಿಗಳನ್ನು, ಗುರುಗಳನ್ನು, ಸಹೋದರರನ್ನು ಹೇಗೆ ಯುದ್ಧದಲ್ಲಿ ಕೊಲ್ಲಲಿ? ಎಂದು ಕೇಳಿದಾಗ ಶ್ರೀಕೃಷ್ಣ ಅವನ ಸಂದೇಹಗಳನ್ನು ದೂರಮಾಡಿ ಅರ್ಜುನನಲ್ಲಿ ಮನಸ್ಥೈರ್ಯವನ್ನು ತುಂಬುತ್ತಾನೆ. ಅದೇ ರೀತಿಯ ಮನಸ್ಥೈರ್ಯವನ್ನು ಶಿಕ್ಷಕರಾದವರು ಹಲವಾರು ಸವಾಲಿನ ಸಂದರ್ಭಗಳಲ್ಲಿ ಹೊಂದಬೇಕಾಗುತ್ತದೆ. ವಿವಿಧ ವಯಸ್ಸಿನ ಮಕ್ಕಳಲ್ಲಿ ಅವರವರ ವಯಸ್ಸಿಗನುಗುಣವಾಗಿ ಅನೇಕ ಮಾನಸಿಕ ಚಟುವಟಿಕೆಗಳು ಉಂಟಾಗುತ್ತವೆ. ಒಂದು ಮಗು ನಾವು ಹೇಳಿದ ಮಾತನ್ನು ಕೇಳುವುದಿಲ್ಲ, ಬೇರೆಯಾಗಿ ವರ್ತಿಸುತ್ತಾನೆ ಎಂದು ತಿಳಿದು ನಾವೂ ಅತಿಯಾಗಿ ವರ್ತಿಸುವುದನ್ನು ನಿಲ್ಲಿಸಬೇಕಾಗುತ್ತದೆ. ನಾವು ಸಮಾಧಾನದಿಂದ ವರ್ತಿಸುವುದು ಒಳ್ಳೆಯದು. ಹೀಗೆ ಶಿಕ್ಷಕರಿಗೆ ವೃತ್ತಿ ಬದುಕಿನಲ್ಲಿ ವಿವಿಧ ಮಜಲುಗಳನ್ನು ನೋಡುತ್ತೇವೆ.

ಶಿಕ್ಷಕ–ಶಿಕ್ಷಕರ ಮಧ್ಯೆಯೂ ಅನೇಕ ಗೊಂದಲಗಳಿರುತ್ತವೆ. ಮಕ್ಕಳು ಶಿಕ್ಷಕರ ಮಧ್ಯೆ ಇರುವ ವರ್ತನೆಗಳನ್ನು ಗಮನಿಸುತ್ತಿರುತ್ತಾರೆ. ಹಾಗಾಗಿ ಶಿಕ್ಷಕರಾದವರು ಸಹೋದ್ಯೋಗಿಗಳೊಂದಿಗೆ, ಪಾಲಕರೊಂದಿಗೆ, ಮಕ್ಕಳೊಂದಿಗೆ ಹೇಗೆ ವರ್ತಿಸುತ್ತಾರೆ ಎನ್ನುವುದನ್ನು ಮಕ್ಕಳು ಗಮನಿಸುತ್ತಿರುತ್ತಾರೆ. ಹಾಗಾಗಿ ನಮ್ಮ ಮಧ್ಯೆ ಏನೇ ಮನಸ್ತಾಪಗಳು ಇದ್ದರೂ ಅವುಗಳನ್ನು ಶಾಲಾ ಆವರಣದಿಂದ ಹೊರಗಡೆ ಇಟ್ಟುಕೊಳ್ಳುವುದು ಒಳ್ಳೆಯದು. ನಾವು ದೇವಸ್ಥಾನಕ್ಕೆ ಒಳಗೆ ಹೋಗುವಾಗ ಚಪ್ಪಲಿಗಳನ್ನು, ಭೋಗಾದಿ ವಿಚಾರಗಳನ್ನು, ಋಣಾತ್ಮಕ ವಿಚಾರಗಳನ್ನು ಹೇಗೆ ಹೊರಗೆ ಬಿಟ್ಟು ಹೋಗುತ್ತೇವೆಯೋ, ಒಳಗಡೆ ಹೋದಾಗ ಪವಿತ್ರವಾದ ಪರಿಸರದಲ್ಲಿ ಭಗವಂತನನ್ನು ಸ್ಮರಣೆ ಮಾಡುತ್ತಾ ನಮ್ಮ ಅಂತರಂಗದಲ್ಲಿ ಭಗವತ್ಭಾವವನ್ನು ತುಂಬಿಕೊಂಡಿರುತ್ತೇವೆಯೋ, ಹಾಗೇ ನಾವು ಪಾಠ ಮಾಡಲು ಕೊಠಡಿಗೆ ಪ್ರವೇಶ ಮಾಡುವ ಮುಂಚೆ ನಮ್ಮಲ್ಲಿರುವ ಎಲ್ಲ ಮಾನಸಿಕ ಗೊಂದಲಗಳನ್ನು ಮನಸ್ತಾಪಗಳನ್ನು ಹೊರಗಡೆ ಬಿಟ್ಟು, ಪ್ರಸನ್ನ ಮನಸ್ಸಿನಿಂದ ದೇವಾಲಯವನ್ನು ಪ್ರವೇಶಿಸುವಂತೆ ಹೋಗಬೇಕಾಗುತ್ತದೆ. ಆಗ ಅಲ್ಲಿರುವ ಮಕ್ಕಳೆಲ್ಲರೂ ದೇವರ ಸ್ವರೂಪರಾಗಿ ಕಾಣುತ್ತಾರೆ. ಈ ಸಂದರ್ಭದಲ್ಲಿ ಶಿಕ್ಷಕರ ಮನಸ್ಥೈರ್ಯ ತುಂಬಾ ಅವಶ್ಯಕವಾಗಿದೆ.

ವಸಿಷ್ಠರಿಗೆ ಪುತ್ರಶೋಕವಾಗಿರುತ್ತದೆ, ಆಗ ಮನಸ್ಸಿನ ಕ್ಲೇಶವೆಲ್ಲವನ್ನು ಹೋಗಲಾಡಿಸಿಕೊಳ್ಳಲು ಹಿಮಾಲಯಕ್ಕೆ ಹೋಗುತ್ತಾರೆ. ಬಹಳ ದಿನಗಳಾದ ನಂತರ ಶ್ರೀರಾಮನು ವಸಿಷ್ಠರನ್ನು ಕರೆತರಲು ಲಕ್ಷ್ಮಣನನ್ನು ಕಳುಹಿಸುತ್ತಾನೆ. ಆಗ ವಸಿಷ್ಠರು ಕಾಡಿನಲ್ಲಿ ಇದ್ದಿದ್ದರಿಂದ ಶರೀರಕ್ಕೆಲ್ಲ ಹುಲಿಚರ್ಮವನ್ನು ಧರಿಸಿಕೊಂಡು ಬರುತ್ತಾರೆ. ದಾರಿಯಲ್ಲಿ ಕರೆದುಕೊಂಡು ಬರುವಾಗ ವಸಿಷ್ಠರು ರಾಜಧಾನಿ ಸಮೀಪಿಸುತ್ತಿದ್ದಂತೆ ಸೀಮಾರೇಖೆ ಹೊರಗಡೆ ಕುಳಿತು ಲಕ್ಷ್ಮಣನಿಗೆ ಒಬ್ಬ ಕ್ಷೌರಿಕನನ್ನು ಹಾಗೂ ರಾಜಲಾಂಛನಗಳನ್ನು ತಂದು ನನ್ನನ್ನು ರಾಜಗುರುವಿನಂತೆ ಪಲ್ಲಕ್ಕಿಯಲ್ಲಿ ಕರೆದುಕೊಂಡು ಹೋಗು ಎಂದು ಹೇಳುತ್ತಾರೆ. ಆಗ ಲಕ್ಷ್ಮಣನಿಗೆ ಇಷ್ಟು ವರ್ಷಗಳ ಕಾಲ ತಪಸ್ವಿಗಳಾಗಿದ್ದವರು, ವೈರಾಗ್ಯ ತಾಳಿದ್ದವರು, ಈಗ ಮತ್ತೆ ರಾಜಗುರುವಿನಂತೆ ಬರಲು ಆಶಿಸುತ್ತಿರುವುದನ್ನು ಕೇಳಿ ಆಶ್ಚರ್ಯವಾಯಿತು. ಲಕ್ಷ್ಮಣನಲ್ಲುಂಟಾದ ಈ ಮಾನಸಿಕ ತಳಮಳವನ್ನು ತಿಳಿದು ವಸಿಷ್ಠರು ಲಕ್ಷ್ಮಣನನ್ನು ಕರೆದು ಹೇಳುತ್ತಾರೆ– "ನಾನು ತಪಸ್ಸಿಗೆ ಕುಳಿತಾಗ ನನ್ನಲ್ಲಾಗಿರುವ ವೈರಾಗ್ಯ ಅದು. ನನ್ನ ಅಂತರಂಗವೆಲ್ಲ ಭಗವಂತನಲ್ಲಿತ್ತು. ಅದು ವೈಯಕ್ತಿಕ ವಿಷಯ. ಆದರೆ ಈಗ ನಾನು ಅಯೋಧ್ಯೆಗೆ ಹೊರಟಿರುವುದು ಗುರುವಾಗಿ, ಹಾಗಾಗಿ ನಾನು ಒಬ್ಬ ರಾಜಗುರುವಿನಂತೆ ಹೋಗುವುದು ನನ್ನ ಧರ್ಮ ಎಂದು ಹೇಳುತ್ತಾರೆ. ಹಾಗೇಯೆ ನಾವು ಶಿಕ್ಷಕರಾದವರು ನಮ್ಮ ವೈಯಕ್ತಿಕ ಜೀವನ ಹೇಗೆ ಇದ್ದರೂ, ಏನೇ ಸಮಸ್ಯೆಗಳಿದ್ದರೂ, ಹೇಗೆ ವಸಿಷ್ಠರು ಅಯೋಧ್ಯೆಗೆ ಹೋಗುವಾಗ ತಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಂಡರೋ, ಹಾಗೇ ನಾವು ಕೂಡಾ ತರಗತಿಗೆ ಹೊರಡುವಾಗ ನಮ್ಮ ವೈಯಕ್ತಿಕ ಸಮಸ್ಯೆಗಳನ್ನು ಹೊರಗೆ ಹಾಕಿ ಶಾಂತ ಮನಸ್ಸಿನಿಂದ ಗುರುವಿನ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ನಮ್ಮ ತರಗತಿಯಲ್ಲಾಗಲೀ, ಕ್ಯಾಂಪಸ್ಸಿನಲ್ಲಾಗಲೀ ನಾವು ಬಹಳಷ್ಟು ಜಾಗರೂಕರಾಗಿ ವರ್ತಿಸಬೇಕಾಗುವುದು ತುಂಬಾ ಅವಶ್ಯಕವಾಗಿದೆ. ಇಲ್ಲಿ ನಮ್ಮ ಮನಸ್ಥೈರ್ಯ ತುಂಬಾ ಅಗತ್ಯವಾಗಿದೆ. ಜೊತೆಗೆ ಶಿಕ್ಷಕರ ನೈತಿಕ ಸಾಮರ್ಥ್ಯವೂ ಅಷ್ಟೇ ತುಂಬಾ ಮುಖ್ಯವಾಗಿರುತ್ತದೆ. ನಮ್ಮ ನಡೆ–ನುಡಿಗಳಲ್ಲಿ ಸತ್ಯ ಹಾಗೂ ಪ್ರಾಮಾಣಿಕತೆ ತುಂಬಾ ಅಗತ್ಯವಾಗಿದೆ. ನಮ್ಮ ಹಿರಿಯ ಶಿಕ್ಷಕರೊಂದಿಗಿನ ವರ್ತನೆಗಳೂ ಮಕ್ಕಳ ಮೇಲೆ ತುಂಬಾ ಪರಿಣಾಮಗಳನ್ನು ಬೀರುತ್ತವೆ. ಇದಕ್ಕಾಗಿ ಶಿಕ್ಷಕರಾದವರು ತುಂಬಾ ಜಾಗರೂಕರಾಗಿರಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸರ ಹತ್ತಿರ ಒಬ್ಬ ಶ್ರೇಷ್ಠ ಪ್ರಸಿದ್ಧ ನಾಟಕಕಾರ ಬಂದಾಗ ರಾಮಕೃಷ್ಣರು ಅವರಿಗೆ ನಮಸ್ಕಾರಗಳನ್ನು ಹೇಳುತ್ತಾರೆ. ಆಗ ನಾಟಕಕಾರ ಅದನ್ನು ಗಮನಿಸುವುದಿಲ್ಲ. ಮತ್ತೆ ರಾಮಕೃಷ್ಣರು ನಮಸ್ಕಾರಗಳನ್ನು ಹೇಳುತ್ತಾರೆ. ಆಗ ಆ ನಾಟಕಕಾರನಿಗೆ ಸ್ವಲ್ಪ ಮುಜುಗರ ಉಂಟಾಗುತ್ತದೆ. ಮತ್ತೆ ರಾಮಕೃಷ್ಣರು ತಲೆಬಾಗಿ ಮತ್ತೊಮ್ಮೆ ನಮಸ್ಕಾರಗಳನ್ನು ಹೇಳುತ್ತಾರೆ, ಆಗ ಕೊನೆಗೆ ಆ ನಾಟಕಕಾರನೂ ತಲೆಬಾಗಿ ಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸುತ್ತಾನೆ. ಇಲ್ಲಿ ರಾಮಕೃಷ್ಣರೂ ಆ ನಾಟಕಕಾರನಿಗೆ ಏನನ್ನು ಹೇಳದೇ ಅವನಲ್ಲಿ ಏನು ಬದಲಾವಣೆ ತರಬೇಕು ಅದನ್ನು ತಂದಿರುತ್ತಾರೆ.

ಒಮ್ಮೆ ರಾಮಕೃಷ್ಣಪರಮಹಂಸರ ಹತ್ತಿರ ಒಬ್ಬ ಮಹಿಳೆ ತನ್ನ ಮಗನನ್ನು ಕರೆದುಕೊಂಡು ಬಂದು, ತನ್ನ ಮಗನು ತುಂಬಾ ಸಿಹಿಯನ್ನು ತಿನ್ನುತ್ತಾನೆ, ಎಷ್ಟು ಹೇಳಿದರೂ ಸಿಹಿ ತಿನ್ನುವುದನ್ನು ಬಿಡುತ್ತಿಲ್ಲ. ನೀವು ಅವನಿಗೆ ಸಿಹಿ ತಿನ್ನಬೇಡ ಎಂದು ಬುದ್ದಿ ಹೇಳಿ ಎಂದು ಕೇಳಿಕೊಳ್ಳುತ್ತಾಳೆ. ಆಗ ರಾಮಕೃಷ್ಣರು 3 ದಿನ ಬಿಟ್ಟು ಬರಲು ಹೇಳುತ್ತಾರೆ. 3 ದಿನಗಳ ನಂತರ ಬಂದ ಆ ಮಗುವಿಗೆ ಸಿಹಿ ತಿನ್ನಬೇಡ ಎಂದು ಹೇಳುತ್ತಾರೆ. ಆಗ ಆ ಮಹಿಳೆ ರಾಮಕೃಷ್ಣರನ್ನು ಕೇಳುತ್ತಾಳೆ, ಈ ಮಾತನ್ನು 3 ದಿನಗಳ ಹಿಂದೆ ಹೇಳಬಹುದಿತ್ತಲ್ಲವೇ ಎಂದು. ಆಗ ರಾಮಕೃಷ್ಣರು ಹೇಳುತ್ತಾರೆ–"ನಾನು ಕೂಡಾ ತುಂಬಾ ಸಿಹಿಯನ್ನು ತಿನ್ನುತ್ತಿದ್ದೆ, ಆದರೇ ಈ 3 ದಿನಗಳಿಂದ ಸಿಹಿಯನ್ನು ತಿನ್ನುವುದನ್ನು ಬಿಟ್ಟಿದ್ದೇನೆ. ಅದ್ದರಿಂದ ಈಗ ಆ ಮಗುವಿಗೆ ಸಿಹಿ ತಿನ್ನಬೇಡ ಎಂದು ಹೇಳಲು ನನಗೆ ಸಾಧ್ಯವಾಗಿದೆ". ಈ ಕಥೆಯಲ್ಲಿ ಗುರುವಿನ ನೈತಿಕತೆ ಎದ್ದು ಕಾಣುತ್ತದೆ. ಸ್ವತಃ ರಾಮಕೃಷ್ಣರೇ ಸಿಹಿ ತಿನ್ನುವುದನ್ನು ಬಿಟ್ಟು ನಂತರ ಹೇಳುತ್ತಾರೆ. ನಾವು ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವವರು, ನಮ್ಮ ನೈತಿಕ ಮೌಲ್ಯಗಳನ್ನು ಜಾಗೃತಿಗೊಳಿಸುವುದು ತುಂಬಾ ಅವಶ್ಯಕವಾಗಿದೆ. ಬಹಳಷ್ಟು ಜನ ನಮ್ಮನ್ನು ಸುತರ್ಕದಿಂದಲೋ,

ಪುಟ 17 ಕ್ಕೆ ➢

➢ ಪುಟ 13 ರಿಂದ.....

ಕಲಿಸಬಹುದು. ಇದಕ್ಕೂ ಮುನ್ನ ಶಿಕ್ಷಕರು ಹೆಚ್ಚು ಹೆಚ್ಚು ಓದುವ ಅವಶ್ಯಕತೆ ಇದೆ.

**ಪ್ರಶ್ನೆ : (ಬೀರೇಶ್) ಪ್ರಾಥಮಿಕ ಶಾಲೆಗಳಲ್ಲಿ ಗುರುಕುಲ ವ್ಯವಸ್ಥೆ ನಿರ್ಮಿಸಬಹುದೇ?**

ನಾವು ಪೂರ್ಣವಾಗಿ ಆ ವ್ಯವಸ್ಥೆಗೆ ಜಾರದಿದ್ದರೂ, ಆಧುನಿಕ ವ್ಯವಸ್ಥೆಯಲ್ಲಿಯೇ ಅಂದಿನ ರೀತಿ ನೀತಿಗಳನ್ನು ಶಿಕ್ಷಣದಲ್ಲಿ ನೀಡಬಹುದು.

**ಪ್ರಶ್ನೆ : (ಸೌಮ್ಯ ಭಟ್) ನಾವು ವೇದೋಪನಿಷತ್ತುಗಳನ್ನು ಬೋಧನೆಯಲ್ಲಿ ಬಳಸಿದರೆ ನಮ್ಮನ್ನು ಬಲಪಂಥೀಯ/ ಸಮಾಜವಾದದ ವಿರೋಧಿಯೆನ್ನುತ್ತಾರೆ. ಈ ನಿಟ್ಟಿನಲ್ಲಿನ ಕಲಿಕೆ ಹೇಗೆ ಸಾಧ್ಯ?**

ಅದ್ಭುತ ಪ್ರಶ್ನೆ – ಉತ್ತರ :– ನಾವು ಕಲಿಸುವಾಗ / ಎಲ್ಲಾದರೂ ಬೋಧನೆ ನೀಡುವಾಗ ಶಿಕ್ಷಣದಲ್ಲಿ/ ಸಭೆಗಳಲ್ಲಿ ಆದಷ್ಟು ಹೆಚ್ಚು ಸಾಮಾನ್ಯ ದೃಷ್ಟಾಂತಗಳನ್ನು ಉದಾಹರಣೆಯಲ್ಲಿ ನೀಡಬೇಕು. ಐನ್‌ಸ್ಟೀನ್ ಹೇಳುತ್ತಾನೆ– "It is easier to denature plutonium than to denature the evil spirit of man" ಈ ವ್ಯಕ್ತಿ ಸಮಾಧಾನ ಚಿತ್ತಕ್ಕೆ ಸಂಗೀತ ಕೇಳುತ್ತಿದ್ದ. ಹಲವಾರು ಪ್ರಶ್ನೆಗಳಿಗೆ ಭಗವದ್ಗೀತೆಯನ್ನು ಪರಾಮರ್ಶಿಸುತ್ತಿದ್ದನು. ಇಂತವರನ್ನು ಉದಾಹರಿಸಿದರೆ ಟೀಕೆ ವಿರಳವಾಗಬಹುದು.

**ಪ್ರಶ್ನೆ (ರವಿಶಂಕರ್ ಗುಬ್ಬಿ) ಗುರುಗಳೇ ಕನ್ನಡ ಭಾಷಾ ಶಿಕ್ಷಕರ ಜವಾಬ್ದಾರಿಯ ಕುರಿತು ಬೆಳಕು ಚೆಲ್ಲಿ?**

40–50 ವರ್ಷಗಳ ಹಿಂದೆ ಭಾಷಾ ಶಿಕ್ಷಕರಾದವರು ಅಕ್ಷರ, ಭಾಷೆ, ಕಾಗುಣಿತ, ವ್ಯಾಕರಣ, ಛಂದಸ್ಸಿನ ಜತೆ ಜತೆಗೆ ಜೀವನವನ್ನು ಕಲಿಸಿದರು. ಕನ್ನಡ ಶಿಕ್ಷಕರು ಅದೆಷ್ಟು ಅದ್ಭುತ ಎಂದು ನಮ್ಮ ಹಿರಿಯರಲ್ಲಿ ಕಾಣಬಹುದು. ಟಿ.ಎಸ್ ವೆಂಕಣ್ಣಯ್ಯ, ಡಿ.ವಿ ಗುಂಡಪ್ಪ, ಪು.ತಿ.ನ, ಕುವೆಂಪು, ತೀನಂಶ್ರೀ ಮುಂತಾದವರು ಭಾಷಾ ಶಿಕ್ಷಕರಾಗಿದ್ದರಲ್ಲದೇ ನಾಡಿನ ಹೆಸರಾಂತ ಕವಿಗಳಾಗಿ ಅಪಾರ ಕೊಡುಗೆಯನ್ನಿತ್ತಿದ್ದಾರೆ. ಹೀಗೆ ಸಂವಿಧಾನ president of India ಎಂಬ ಪದಕ್ಕೆ ಸಮಾನವಾದ ರಾಷ್ಟ್ರೀಯ ಶಬ್ದಕ್ಕೆ ಕರೆ ಬಂದಿತು. ಈ ವಿಚಾರವಾಗಿ ಚಿಕ್ಕನಾಯಕನಹಳ್ಳಿಯ ತೀರ್ಥಪುರದ ತೀ. ನಂ. ಶ್ರೀಕಂಠಯ್ಯನವರು 'ರಾಷ್ಟ್ರಪತಿ' ಎಂಬ ಶಬ್ದವನ್ನು ಸೂಚಿಸುತ್ತಾರೆ. ಒಬ್ಬ ಸಾಹಿತಿ ಕೊಟ್ಟ ಶಬ್ದವನ್ನು ಇಡೀ ರಾಷ್ಟ್ರವೇ ಒಪ್ಪಿಕೊಳ್ಳುತ್ತದೆ ಕಥೆ. ಋಷಿ–ಸಂತರಲ್ಲಿ ಕನ್ನಡ ಹಾಸು ಹೊಕ್ಕಾಗಿದ್ದಿತ್ತು. ಭಾಷೆಯೆಂಬುದು ಭಾವ ಬೋಧಿನಿ. ಇಂದಿನ ಭಾಷಾ ಶಿಕ್ಷಕರಲ್ಲಿ ಅಧ್ಯಯನದ ಕೊರತೆ ಇದೆ. ಮಕ್ಕಳಿಗೆ ಬರೀ ಪಠ್ಯವನ್ನು ಕುರಿತು ಬೋಧಿಸಿ ಕೈ ತೊಳೆದುಕೊಳ್ಳುತ್ತಾರೆ. ಆ ವಿಷಯದ ಹಿಂದು– ಮುಂದಿನ ಅರಿವನ್ನು ಅವರು ಅರಸುವುದೇ ಇಲ್ಲ.

ಕಡೆಯದಾಗಿ ಒಂದೆರಡು ಮಾತುಗಳು ಇತ್ತೀಚಿಗೆ 'ರಾಷ್ಟ್ರೀಯತೆ' ಯ ಕಗ್ಗೊಲೆಯಾಗುತ್ತಿದೆ. ಧರ್ಮ, ಜಾತಿ, ಇನ್ನಿತರ ಸಂಕೋಲೆಯಲ್ಲಿ ನಮ್ಮನ್ನು ನಾವೇ ಬಂಧಿಸಿದ್ದೇವೆ. ವೈಯಕ್ತಿಕ ಆಚರಣೆ, ವಿಷಯಗಳು 'ರಾಷ್ಟ್ರೀಯತೆ' ಯನ್ನು ವಿರೋಧಿಸುವಂತಾಗಿರಬಾರದು. ಸಂಗೀತದಿಂದ ಭಯೋತ್ಪಾದನೆಯನ್ನು ನಾಶ ಪಡಿಸಬಹುದು ಎಂಬ ಕಲಾಂ ರವರ ಮಾತಿನಂತೆ ಮುನ್ನಡೆಯಬೇಕಾಗಿದೆ. ರಾಷ್ಟ್ರೀಯ ಚಿಂತನೆಗಳಿಗೆ ಮತೀಯ ಚಿಂತನೆಗಳನ್ನು ಬೆರೆಸಬಾರದು. ಶಿಕ್ಷಕನಾದವನಿಗೆ ಜಾತಿಯಿಲ್ಲ, ಆತ ವಿಶ್ವಮಾನವ ಅವನು ಜ್ಞಾನಸಾಗರ ಇದರೊಂದಿಗೆ ರಾಷ್ಟ್ರ ಕಟ್ಟುವಲ್ಲಿ ಆಧ್ಯಾತ್ಮಿಕ ವಿಚಾರಗಳು ಅಷ್ಟೇ ಮುಖ್ಯ

'Let noble thoughts come from all direction'

ಈ ವಿಷಯವಾಗಿ ಮಾತನಾಡಲು ಅವಕಾಶ ಮಾಡಿಕೊಟ್ಟ ಸಹೃದಯ ಸಂಘಟಕರೆಲ್ಲರಿಗೂ ಅಭಿನಂದಿಸುತ್ತಾ ನನ್ನ ಈ ವಾಕ್ಪುಷ್ಪಗಳನ್ನು ಭಗವಂತನ ಪಾದಕ್ಕರ್ಪಿಸುತ್ತಿದ್ದೇನೆ ನಮಸ್ಕಾರ. ●

➢ ಪುಟ 14 ರಿಂದ.....

ದರ್ಶನ, ಆಶಯಗಳ ಅನುಸಾರ 'ಭಾರತೀಯಕರಣ' ಗೊಳಿಸುವ ಸುಸಂದರ್ಭ ನಮ್ಮ ಪಾಲಿಗಿದೆ. ಭಾರತದ ಪುರಾತನ ಸಾಂಪ್ರಾದಾಯಿಕ ಜ್ಞಾನದ ಆಕರಗಳಾದ 'ಯೋಗ' ಆಯುರ್ವೇದ, ಭಾರತೀಯ ಔಷದಿ, ವಾಸ್ತುಶಿಲ್ಪ, ಹೈಡ್ರಾಲಿಕ್ಸ್, ಎಥ್ನೋಬೋಟನಿ, ಲೋಹಶಾಸ್ತ್ರ ಮತ್ತು ಕೃಷಿಯನ್ನು ಇಂದಿನ ವಿಶ್ವವಿದ್ಯಾಲಯಗಳ ಶಿಕ್ಷಣಗಳ ಪಠ್ಯಕ್ರಮದೊಂದಿಗೆ ಸಮ್ಮಿಲನಗೊಳಿಸಿ ರಾಷ್ಟ್ರವನ್ನು ಶೈಕ್ಷಣಿಕವಾಗಿ ಸದೃಢಗೊಳಿಸಲು ಕಾಲ ಈಗ ಪಕ್ವವಾಗಿದೆ.

ಶಿಕ್ಷಣದಲ್ಲಿ ಎಷ್ಟೇ ಪರಿಣಾಮಕಾರಿಯಾಗಿ ತಂತ್ರಜ್ಞಾನ ಬಳಕೆ ಮಾಡಿಕೊಂಡರೂ ಸಹಿತ ಅದು ಒಬ್ಬ ನಿಜವಾದ ಶಿಕ್ಷಕನ ಸ್ಥಾನವನ್ನು ಎಂದಿಗೂ ತುಂಬಲಾರದು. ಆನ್‌ಲೈನ್ ಮೂಲಕ ನೀಡುವ ಪಾಠಪ್ರವಚನಗಳು ಯಾಂತ್ರಿಕತೆಯ ಅನಾವರಣವೇ ಹೊರತು, ಶಿಕ್ಷಕನ ಸಂವೇದನೆಗಳಿಗೆ ಯಾವತ್ತು– ಸಮವಾಗಲು ಸಾಧ್ಯವಿಲ್ಲ? ಶಿಕ್ಷಕ – ವಿದ್ಯಾರ್ಥಿಯ ಮುಖಾಮುಖಿ– ನೇರ ಸಂಪರ್ಕದಿಂದ ಮಾತ್ರ ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ವ್ಯಕ್ತಿಗತ ಬದಲಾವಣೆಗಳನ್ನು ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನೋಚಾಲನ ವಲಯಗಳಲ್ಲಿ ಉಂಟುಮಾಡಬಹುದಾಗಿದೆ.

ಶಾಲೆ ಸ್ವರ್ಗವಲ್ಲ, ಆದರೆ ಶಾಲೆಯಲ್ಲಿ ಸ್ವರ್ಗವನ್ನು ಸೃಜಿಸಬಹುದು. ವಿದ್ಯಾರ್ಥಿಗಳ ಪಾಲಿಗೆ ಶಾಲಾ ತರಗತಿ ತನ್ನೆಲ್ಲ ಮಿತಿಗಳ ನಡುವೆಯು ಮಹಾನ್ ಸಾಧ್ಯತೆಯ ಸ್ಥಳವಾಗಿ ಪರಿಣಮಿಸುತ್ತದೆ. ಪ್ರಸಕ್ತ ಶಿಕ್ಷಣಕ್ಕೆ ಹಿಡಿದಿರುವ ಕರೋನ ಗ್ರಹಣದ ಸಂದರ್ಭದಲ್ಲಿ ನಾವು ಅರಿತುಕೊಳ್ಳಬೇಕಾದ ಅಂತಿಮ ಸತ್ಯವೆಂದರೆ "ಶಿಕ್ಷಣಕ್ಕೆ ತಂತ್ರಜ್ಞಾನ ಬೇಕು, ಆದರೆ ತಂತ್ರಜ್ಞಾನಕ್ಕಾಗಿ ಶಿಕ್ಷಣವಲ್ಲ". ●

➢ ಪುಟ 16 ರಿಂದ.....

ಕುತರ್ಕದಿಂದಲೋ ಅವಲೋಕಿಸುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ನಮ್ಮ ಮನಸ್ಥೈರ್ಯ ತುಂಬಾ ಅಗತ್ಯವಾಗಿರುತ್ತದೆ. ಯಾರು ತನ್ನನ್ನು ತಾನು ಗೆದ್ದಿರುವನೋ, ಯಾರೂ ತನ್ನ ಮನಸ್ಸನ್ನು ಗೆದ್ದಿರುವರೋ, ಅವನೇ ನಿಜವಾದ ಶ್ರೇಷ್ಠ ವ್ಯಕ್ತಿಯಾಗಿರುತ್ತಾನೆ. ಹಾಗಾಗಿ ನಾವು ತುಂಬಾ ಸಂಯಮದಿಂದ ನಮ್ಮ ನೈತಿಕ ಚೌಕಟ್ಟಿನಲ್ಲಿ ಇರಬೇಕಾಗುತ್ತದೆ. ತುಂಬಾ ಘನತೆಯಿಂದ ಬದುಕುವ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ನಾವು ಶಿಕ್ಷಕ ವೃತ್ತಿಯನ್ನು ಸರಿಯಾಗಿ ನಿರ್ವಹಿಸಿದರೆ, ಅದು ನಮ್ಮ ವ್ಯಕ್ತಿತ್ವವನ್ನು ಹೆಚ್ಚಿಸುತ್ತಾ ಹೋಗುತ್ತದೆ. ಯಾರು ನೈತಿಕತೆಯಿಂದ ಬದುಕುತ್ತಾರೋ, ಅವರಲ್ಲಿ ಆತ್ಮಸ್ಥೈರ್ಯ ಆಂತರಿಕವಾಗಿ ಬೆಳೆಯುತ್ತಾ ಹೋಗುತ್ತದೆ. ಅದೇ ಮನೋಬಲದಿಂದ ನಮ್ಮನ್ನು ನಾವು ಬೆಳೆಸಿಕೊಳ್ಳುವುದಕ್ಕೂ, ಸಮಾಜವನ್ನು ಬೆಳೆಸುವುದಕ್ಕೂ ತುಂಬಾ ಸಹಕಾರಿಯಾಗುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚುವಲ್ಲಿ ಪ್ರಮುಖ ಪಾತ್ರವಹಿಸಿದವರು ಬಹಳಷ್ಟು ಜನ ಶಿಕ್ಷಕರೇ ಆಗಿರುತ್ತಾರೆ. ಹೀಗಾಗಿ ಬ್ರಿಟೀಷರು ಶಿಕ್ಷಕರ ಮೇಲೆ ಗೂಢಚಾರಿಕೆಯನ್ನು ಮಾಡುತ್ತಿದ್ದರಂತೆ. ಹೀಗಾಗಿ ಒಬ್ಬ ಉತ್ತಮ ಶಿಕ್ಷಕನಾದವನು ಕೇವಲ ಪಠ್ಯಕ್ರಮವನ್ನು ಮುಗಿಸದೇ, ಅವರಲ್ಲಿ ದೇಶಭಕ್ತಿಯನ್ನು ಬೆಳೆಸಬಲ್ಲರು. ಸ್ವದೇಶಿ ವಸ್ತುಗಳನ್ನು ಬಳಸುವಂತೆ ಪ್ರೇರೇಪಿಸಬಹುದು. ಸಮಾಜದ ದಾಯಿತ್ವವನ್ನು ನಿರ್ವಹಿಸಬಹುದು. ವಿಷಯದ ಕುರಿತಾದ ಪ್ರೀತಿಯನ್ನು, ಅರಿವನ್ನು ಮೂಡಿಸಲು ಸಾಧ್ಯವಿದೆ. ಶಿಕ್ಷಕರು ಮನೋಸ್ಥೈರ್ಯದಿಂದ ಜಗತ್ತನ್ನೇ ಗೆಲ್ಲಬಹುದು ಎಂದು ಶಂಕರಾಚಾರ್ಯರು ಹೇಳುತ್ತಾರೆ. ನಾವು ಯಾವುದೇ ಯಂತ್ರಗಳೊಂದಿಗೆ ಇರದೇ, ಮುದ್ದಾದ ಮಕ್ಕಳ ಮನಸ್ಸಿನೊಂದಿಗೆ ಪಾಠ ಬೋಧನೆಯನ್ನು ಮಾಡುತ್ತೇವೆ. ಹೀಗಾಗಿ ಶಿಕ್ಷಕ ವೃತ್ತಿ ತುಂಬಾ ಜವಾಬ್ದಾರಿಯುತವಾಗಿದೆ. ತಂದೆ–ತಾಯಿಯ ನಂತರ ನಮ್ಮ ಜೀವನವನ್ನು ರೂಪಿಸುವವರು ಗುರುಗಳೇ ಆಗಿರುತ್ತಾರೆ. ಹೀಗಾಗಿ ನಮ್ಮೆಲ್ಲರ ಸಮಸ್ಯೆಗಳನ್ನು, ನ್ಯೂನ್ಯತೆಗಳನ್ನು ಬದಿಗಿಟ್ಟು ದೇವತೆಗಳಂತೆ ವರ್ತಿಸುತ್ತಾ ಮನೋಬಲದಿಂದ ಅದ್ಭುತ ರಾಷ್ಟ್ರವನ್ನು ನಿರ್ಮಾಣ ಮಾಡೋಣ.

# ರಾಮಾಯಣದ ವಿಶ್ವಭ್ರಮಣ (ಭಾಗ –2)




**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


ಇಲ್ಲಿಯವರೆಗೆ ನಾವು ಭಾರತದ ಉತ್ತರ, ಪಶ್ಚಿಮ ದೇಶಗಳನ್ನು ಸುತ್ತಿ ಬಂದೆವು. ಇಲ್ಲಿಂದ ಮುಂದೆ ನಾವು ಭಾರತದ ದಕ್ಷಿಣ ಹಾಗೂ ಪಶ್ಚಿಮ ಭಾಗದಲ್ಲಿ ಸಂಚರಿಸಿ ಆ ಪ್ರದೇಶಗಳಲ್ಲಿ ರಾಮಾಯಣ ದೃಶ್ಯಗಳನ್ನು ಕಂಡುಬರೋಣ.

## ಶ್ರೀಲಂಕಾದಲ್ಲಿ ರಾಮಾಯಣ

ನಮಗೆ ದಕ್ಷಿಣದಲ್ಲಿ ಬಹಳ ಹತ್ತಿರದಲ್ಲಿರುವ ದೇಶವೆಂದರೆ ಶ್ರೀಲಂಕಾ. ಈ ದೇಶವನ್ನಂತೂ ಎಲ್ಲ ರಾಮಾಯಣ ಗ್ರಂಥಗಳೂ ವರ್ಣಿಸಿವೆ. ಲಂಕೆಯು ರಾಮಾಯಣದ್ದೇ ಒಂದು ಭಾಗ. ರಾವಣನಿಲ್ಲದ ರಾಮಾಯಣ ಅಪೂರ್ಣ. ರಾಮ ಮತ್ತು ರಾವಣರು ಧರ್ಮ ಮತ್ತು ಅಧರ್ಮಗಳ ಪ್ರತಿರೂಪರು. ಅಧರ್ಮ ಸೋತು, ಧರ್ಮ ಗೆಲ್ಲುವುದು ಎಂಬ ಸತ್ಯವನ್ನು ಜಗತ್ತಿಗೆ ತಿಳಿಸಿದ್ದೇ ಲಂಕೆಯಲ್ಲಿ.

ಕ್ರಿ. ಶ. 617ರಲ್ಲಿ ಲಂಕೆಯನ್ನು ಆಳುತ್ತಿದ್ದ ನರೇಶಕುಮಾರ ಧಾತುಸೇನ ಉರುಫ್ ಕುಮಾರದಾಸನೆಂಬ ರಾಜ ಸಂಸ್ಕೃತ ಭಾಷೆಯಲ್ಲಿ 'ಜಾನಕಿಹರಣ' ಎಂಬ ಗ್ರಂಥವನ್ನು ರಚಿಸಿದ್ದ. ಶ್ರೀಲಂಕಾದಲ್ಲಿ ದೊರೆತಿರುವ ಪ್ರಾಚೀನ ಸಂಸ್ಕೃತ ಸಾಹಿತ್ಯವೆಂದರೆ ಇದೇ ಪುಸ್ತಕ.

ವಿದ್ವಾಂಸರಲ್ಲಿ ರಾಮಾಯಣದಲ್ಲಿ ಉಕ್ತವಾದ ಲಂಕೆ ಯಾವುದು ಎಂಬ ಬಗ್ಗೆಯೇ ಗೊಂದಲವಿದೆ. ಕೆಲವರು ಈಗಿನ ಶ್ರೀಲಂಕಾ ರಾಮಾಯಣದ ಲಂಕೆ ಅಲ್ಲವೆಂದು ವಾದಿಸುತ್ತಾರೆ. ಇದೇ ರಾವಣನ ಲಂಕೆ ಎಂದು ವಾದಿಸುವವರೂ ಉಂಟು. ನಾವಂತೂ ಈಗಿನ ಶ್ರೀಲಂಕೆಯೇ ರಾವಣನ ಲಂಕೆ ಎಂದು ತಿಳಿದು ಅಲ್ಲಿ ದೊರೆತ ಕುರುಹುಗಳು ಯಾವುವು ಎಂಬುದನ್ನು ತಿಳಿದು ಲಂಕೆಯ ಬಗ್ಗೆ ನಿಷ್ಕರ್ಷೆಗೆ ಬರೋಣ.



**ಸೀತೆ ಸ್ನಾನ ಮಾಡಿದ ಸ್ಥಳ ಎಂಬ ಪ್ರತೀತಿಯಿದೆ**

ಶ್ರೀಲಂಕೆಯಲ್ಲಿ 50ಕ್ಕೂ ಹೆಚ್ಚು ಸ್ಥಳಗಳು ರಾಮಾಯಣದಲ್ಲಿ ಉಲ್ಲೇಖಗೊಂಡಿದೆ ಎಂದು ಹೇಳುತ್ತಾರೆ. ಆದರೆ ಪ್ರಮುಖವಾಗಿ 20 ಸ್ಥಳಗಳನ್ನು ಈಗಾಗಲೇ ಕಂಡುಹಿಡಿಯಲಾಗಿದೆ. ಈ ಸ್ಥಳಗಳನ್ನು ಅಲ್ಲಿನ ಸರ್ಕಾರ ಪ್ರೇಕ್ಷಣೀಯ ಸ್ಥಳಗಳನ್ನಾಗಿ ಮಾರ್ಪಡಿಸಿ ಪ್ರವಾಸಿಗಳನ್ನು ಆಕರ್ಷಿಸುತ್ತಿದೆ. ರಾವಣನ ವಧೆಯ ಪಾಪವನ್ನು ನಿವಾರಿಸಿಕೊಳ್ಳಲು ಶ್ರೀರಾಮನು ನಾಲ್ಕು ಸ್ಥಳಗಳಲ್ಲಿ 4 ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ, ಶಿವನಿಗೆ ಪೂಜೆ ಸಲ್ಲಿಸಿದನೆಂದು ಪ್ರತೀತಿ. ಇವುಗಳಲ್ಲಿ ಮೂರು ಮಂದಿರಗಳು ಶ್ರೀಲಂಕೆಯಲ್ಲಿ ಹಾಗೂ ಒಂದು ಭಾರತದ ಸಾಗರತೀರ ರಾಮೇಶ್ವರದಲ್ಲಿ ಇವೆ. ಶ್ರೀಲಂಕೆಯಲ್ಲಿ 1) 'ಚಿಲಾ' ಎಂಬಲ್ಲಿಯ ಮನಾವರಿದೇವಸ್ಥಾನ 2) ಮನ್ನುರಿನಲ್ಲಿರುವ ಶ್ರೀಕೇತೀಶ್ವರನ ಮಂದಿರ 3) ಟ್ರಿಂಕಾಮಲೈಯಲ್ಲಿರುವ ಶ್ರೀ ಕೋನೇಶ್ವರನ ದೇವಾಲಯ. ಇವು ಮೂರೂ ಶ್ರೀರಾಮನಿಂದ ಸ್ಥಾಪಿಸಿ, ಪೂಜಿಸಲ್ಪಟ್ಟವು ಎಂದು ಭಕ್ತಾದಿಗಳು ಈಗಲೂ ಅವಕ್ಕೆ ನಡೆದುಕೊಳ್ಳುತ್ತಾರೆ.

ಲಂಕೆಗೆ ಕಪಿ ಸೈನ್ಯವು ಹೋಗಲು ಎಲ್ಲ ವಾನರರು ಸೇರಿ ಕಟ್ಟಿದ ರಾಮಸೇತು ಇಂದಿಗೂ ಪ್ರಖ್ಯಾತವಾಗಿದೆ. ಇಲ್ಲಿ ಸೇತುವೆ ಇತ್ತೆಂಬುದಕ್ಕೆ ಅಮೆರಿಕೆಯ ನಾಸಾ ಹಾಗೂ ಭಾರತದ ಇಸ್ರೋಗಳು ತೆಗೆದಿರುವ ಭೂಚಿತ್ರಗಳೇ ಸಾಕ್ಷಿ.

ಯುದ್ಧದಲ್ಲಿ ಲಕ್ಷ್ಮಣನು ಇಂದ್ರಜಿತ್‌ನ ಶಕ್ತಾಯುಧದಿಂದ ಮೂರ್ಛೆ ಹೋದಾಗ ಸುಷೇಣನೆಂಬ ವೈದ್ಯನ ಸಲಹೆಯಂತೆ ಹನುಮಂತನು ಹಿಮಾಲಯಕ್ಕೆ ತೆರಳಿ, ಮೂಲಿಕೆಯನ್ನು ಹುಡುಕಲಾರದೆ ಇಡೀ ಸಂಜೀವಿನಿ ಪರ್ವತವನ್ನು ಹೊತ್ತು ತಂದ ಕಥೆ ನಮಗೆಲ್ಲರಿಗೂ ತಿಳಿದೇ ಇದೆ. ಈ ಪರ್ವತದ ಕೆಲವು ಭಾಗಗಳು ಲಂಕೆಯ ವಿವಿಧ ಸ್ಥಳಗಳಲ್ಲಿ ಬಿದ್ದು ಈಗಲೂ ಮೂಲಿಕೆಗಳ ಸ್ವರ್ಗವೆಂದು ಪ್ರಸಿದ್ಧಿ ಪಡೆದಿವೆ. ಈ ರೀತಿ ಪರ್ವತದ ಭಾಗಗಳು ಬಿದ್ದ 1) ದೋಲುಕಂಡ 2) ರೂಮಸ್ಸಾಲ 3) ರಿತಿಗಾಲ 4) ತಲ್ಲಾಡಿ ಮತ್ತು 5) ಕಛ್ಛತೀವು ಎಂಬ 5 ಸ್ಥಳಗಳನ್ನು ಕಂಡುಹಿಡಿದು ಪ್ರವಾಸಿಗಳಿಗೆ ತೋರಿಸುತ್ತಾರೆ. ಡೋಲುಕಂಡದಲ್ಲಿ ಉತ್ಖನನ ಮಾಡಿದಾಗ ಸಿಕ್ಕ ಪಾಳು ಬಿದ್ದ ಕಟ್ಟಡವನ್ನು ಹಿಂದಿನ ಕಾಲದಲ್ಲಿ ಆಸ್ಪತ್ರೆಯಂತೆ ಬಳಸುತ್ತಿದ್ದರು ಎನ್ನಲಾಗಿದೆ.

ಸೀತಾದೇವಿಯನ್ನು ಹನುಮಂತನು ಅಶೋಕವನದಲ್ಲಿ ಭೇಟಿಯಾದ, ನಂತರ ಅಲ್ಲಿದ್ದ ಮರಗಿಡಗಳನ್ನು ನಾಶ ಮಾಡಿದ ಎಂಬ ರಾಮಾಯಣದ ಕಥೆ ನಮಗೆ ತಿಳಿದಿದೆ. ಈ ಅಶೋಕವನವನ್ನು 'ಸೀತಾಎಲಿಯ' ಎಂಬುದಾಗಿ ಕರೆದು, ಶ್ರೀಲಂಕಾದಲ್ಲಿ ಪ್ರವಾಸೀತಾಣವಾಗಿ ಮಾಡಲಾಗಿದೆ.

ಕೊಲಂಬೋ ನಗರದಲ್ಲಿ ಕ್ರಿಸ್ತಪೂರ್ವದಲ್ಲಿ ವಿಭೀಷಣನಿಗಾಗಿ ಕಟ್ಟಿದ ದೇಗುಲವಿದೆ. ಕೇಲಾನಿಯ ಎಂಬ ಪ್ರಾಚೀನ ನಗರದಲ್ಲಿ ಲಕ್ಷ್ಮಣನು, ವಿಭೀಷಣನಿಗೆ ರಾಜ್ಯಾಭಿಷೇಕವನ್ನು ಮಾಡಿದ್ದು. ಆ ಕೇಲಾನಿಯೇ ಈಗ ಕೊಲಂಬೋ ಆಗಿರಬೇಕು. ಅಲ್ಲಿನ ಪ್ರಾಚೀನ ಬೌದ್ಧ ಮಂದಿರಗಳಲ್ಲಿ ವಿಭೀಷಣನ ರಾಜ್ಯಾಭಿಷೇಕದ ಚಿತ್ರಗಳನ್ನು ಈಗಲೂ ಕಾಣಬಹುದು. ಅಲ್ಲಿನ ಬೌದ್ಧರಿಗೆ, ವಿಭೀಷಣನು ಆ ದ್ವೀಪವನ್ನು ಸಂರಕ್ಷಿಸುವ ಓರ್ವ ದೇವತೆ ಎಂಬ ಶ್ರದ್ಧೆ ಇದೆ. ಈ ರೀತಿ ಇಂದಿನ ಶ್ರೀಲಂಕೆಗೂ ಭಾರತಕ್ಕೂ ರಾಮಾಯಣ ಕಾಲದಿಂದಲೂ ಸಾಂಸ್ಕೃತಿಕ ಸಂಬಂಧವಿರುವುದನ್ನು ನಾವು ಕಾಣಬಹುದು.

ಶ್ರೀಲಂಕೆಯ ಪ್ರವಾಸ ಮುಗಿಸಿ ನಾವೀಗ ಬರ್ಮಾ ಅಥವಾ ಮ್ಯೆನಮಾರ್‌ಗೆ ತೆರಳೋಣ.

## ಬರ್ಮಾದಲ್ಲಿ ರಾಮಾಯಣ

ಕ್ರಿ.ಪೂ 2ನೇ ಶತಮಾನ ದಲ್ಲಿಯೇ ತೌಂಗ್ಡ್‌ವಿಂಗ್‌ಇ ಪ್ರದೇಶದಲ್ಲಿ ಬೆಯಿಕ್ ಥಾನೋ ಮ್ಯೋ ಅಥವಾ ವಿಷ್ಣುನಗರದಲ್ಲಿ 'ಪ್ಯು' ಜನಾಂಗ ವಾಸಿಸುತ್ತಿತ್ತು. ಇವರಲ್ಲಿ ಬೌದ್ಧ ಧರ್ಮೀಯರೂ, ಬ್ರಾಹ್ಮಣ ಪಂಥದವರೂ

ಪುಟ 19 ಕ್ಕೆ ➤

➢ ಪುಟ 18 ರಿಂದ.....

ಇದ್ದರು. ಮೈನಮಾರ್‌ನ ವಿದ್ವಾಂಸರು ಹೇಳುವಂತೆ ಈ 'ಪ್ಯು' ಹಾಗೂ 'ಮಾನ್' ಜನಾಂಗದವರು ಪೀಳಿಗೆಯಿಂದ ಪೀಳಿಗೆಗೆ ರಾಮಾಯಣವನ್ನು ಬಾಯಿ ಪಾಠ ಮಾಡಿಸುತ್ತಿದ್ದರು. ಆನಂತರ ರಾಮಾಯಣದ ಕಥೆಯನ್ನು ಆ ಪ್ರದೇಶಕ್ಕೆ 9ನೇ ಶತಮಾನದಲ್ಲಿ ವಲಸಿಗರಾಗಿ ಬಂದ 'ಬಾಮ' ಜನರಿಗೂ ಹಸ್ತಾಂತರಿಸಿದರು.



**ಚಿನ್ನದ ಜಿಂಕೆಯನ್ನು ಅಟ್ಟಿಸಿಕೊಂಡು ಹೋಗುತ್ತಿರುವ ಶ್ರೀರಾಮನ ಚಿತ್ರ (ಬರ್ಮಾ ಮ್ಯೂಸಿಯಂನಲ್ಲಿ)**

ಕ್ರಿ.ಶ 1084ರಿಂದ 1113ರವರೆಗೆ ಆಳಿದ ರಾಜ 'ಕಯಾನ್‌ಜ್‌ಹಿತ'ನ ಕಾಲದಲ್ಲಿ ಕಟ್ಟಿದ 'ಅಭೇಯದನ' ದೇವಸ್ಥಾನದಲ್ಲಿ ಹಿಂದೂ ಹಾಗೂ ಮಹಾಯಾನ ಪಂಥದ ದೇವತೆಗಳನ್ನು ಚಿತ್ರೀಕರಿಸಿದ್ದನ್ನು ಕಾಣಬಹುದು. ಇದರಲ್ಲಿ ಪ್ರಮುಖವಾಗಿ ವಿಷ್ಣು, ರಾಮ ಹಾಗೂ ಹನುಮಂತನ ಚಿತ್ರಗಳನ್ನು ನೋಡಬಹುದು. ರಾಜ 'ಕಯಾನ್‌ಜ್‌ಹಿತ' ತನ್ನನ್ನು ತಾನು ಶ್ರೀರಾಮನ ವಂಶಜನೆಂದು ಕರೆದು ಕೊಳ್ಳುತ್ತಿದ್ದ. 15ನೇ ಶತಮಾನದಲ್ಲಿ ಬರೆದ ರಾಮನ ಕಥೆಗಳ ಪುಸ್ತಕಗಳನ್ನು ಬರ್ಮಾದಲ್ಲಿ ಇಂದಿಗೂ ಕಾಣಬಹುದು. 'ಕಾವ್ಯಾದರ್ಶಿ', 'ಸುಭಾಷಿತ ರತನಿಧಿ' ಎಂಬ ಗ್ರಂಥಗಳು ರಾಮಾಯಣದ ಕಥೆಗಳ ಆಧಾರದ ಮೇಲೆ ಬರೆದ ಪುಸ್ತಕಗಳು. ತಾರಾನಾಥ್ ಎಂಬ ಭಾಷ್ಯಕಾರ, ರಾಮಾಯಣದ ಮೇಲೆ ಬರೆದ ಭಾಷ್ಯ ಝಾಂಗ್–ಜುಂಗ್‌ಪ ಎಂಬ ಗ್ರಂಥ ಈಗ ಲಭ್ಯವಿಲ್ಲ. ಮೈಯನ್‌ಮಾರ್‌ನ ರಾಷ್ಟ್ರೀಯ ಮಹಾಕಾವ್ಯ 'ಯಮಜ್ಞಾಟ್‌ಡ'. ಅಲ್ಲಿನ ರಾಮಾಯಣವೇ ಆಗಿದೆ. ವ್ಯತ್ಯಾಸವೆಂದರೆ 'ರಾಮ' ನನ್ನು 'ಯಮ'ನೆಂದು ಕರೆಯುತ್ತಾರೆ.

1776ರಿಂದ 1781ರವರೆಗೆ ಈ ದೇಶವನ್ನಾಳಿದ 'ಸಿಂಗುಮಿನ್'ನ ಪಟ್ಟದ ರಾಣಿ 'ಥಾಕಿನ್‌ಮಿನ್‌ಮಿ' ಸ್ವತಃ ಕವಿಯತ್ರಿ ಮತ್ತು ಬರಹಗಾರ್ತಿಯಾಗಿದ್ದು, ರಾಮಾಯಣಕಥೆ ಆಧಾರಿತ ನೃತ್ಯ, ನಾಟಕಗಳಿಗೆ ಪ್ರೋತ್ಸಾಹ ನೀಡಿದಳು. ರಾವಾಯಣ ನಾಟಕವನ್ನು ಅರಮನೆಯ ರಾಜಾಂಗಣದಲ್ಲಿ ವೈಭವೋಪೇತವಾಗಿ ಆಡುತ್ತಿದ್ದರು.

ಇಂದಿಗೂ ರಾಮಾಯಣದ ಪ್ರಭಾವ ಮೈಯನ್‌ಮಾರ್‌ನಲ್ಲಿ ಅಪಾರವಾಗಿದೆ.

## ನೇಪಾಳದಲ್ಲಿ ರಾಮಾಯಣ

ಇಂದಿನ ನೇಪಾಳ ಒಂದೊಮ್ಮೆ ವಿಶಾಲ ಭಾರತದ ಒಂದು ಭಾಗವೇ ಆಗಿತ್ತು. ಸೀತಾಮಾತೆಯ ಜನ್ಮ ಸ್ಥಳ ಇರುವುದೇ ನೇಪಾಳದಲ್ಲಿ. ಮಿಥಿಲೆಯ ರಾಜ ಜನಕನ ರಾಜಧಾನಿ ಜನಕಪುರ ಇಂದಿಗೂ ನೇಪಾಳದಲ್ಲಿ ಅದೇ ಹೆಸರಿನಿಂದ ಕರೆಯಲ್ಪಡುತ್ತದೆ.

ನೇಪಾಳದ ರಾಷ್ಟ್ರೀಯ ಸಂಗ್ರಹಾಲಯದಲ್ಲಿ ವಾಲ್ಮೀಕಿ ರಾಮಾಯಣದ ಎರಡು ಹಸ್ತ ಪ್ರತಿಗಳನ್ನು ಸಂಗ್ರಹಿಸಿ ಇಡಲಾಗಿದೆ. ಒಂದು ಹಸ್ತ ಪ್ರತಿಯಲ್ಲಿ ಕ್ರಿ.ಶ. 108ರಲ್ಲಿ ರಾಜನಾಗಿದ್ದ ಗಂಗದೇವನ ಕಾಲದ ಕವಿಯಾಗಿದ್ದ 'ಕಾಯಸ್ಥ ಪಂಡಿತ ಗೋಪತಿ'ಯ ಹೆಸರಿದೆ.



**ನೇಪಾಳದಲ್ಲಿ ಜಾನಕಿ ಮಂದಿರ**

ರಾಮಾಯಣಕ್ಕೆ ನೇಪಾಲಿ ಸಾಹಿತ್ಯದಲ್ಲಿ ಬಹು ಮುಖ್ಯವಾದ ಸ್ಥಾನವಿದೆ. ಅಲ್ಲಿನ ಜನ ರಾಮಾಯಣವನ್ನು 'ಆದಿ ರಾಮಾಯಣ' ಎಂದು ಭಾವಿಸುತ್ತಾರೆ.ರಾಮಾಯಣದ ಕೃತಿಕಾರರಲ್ಲಿ ಭಾನುಭಕ್ತ, ಗುಮಾನಿಪಂತ್ ಮತ್ತು ರಘುನಾಥಭಾ ಪ್ರಮುಖರು. ರಾಮಭಕ್ತ ವಿರಚಿತ ರಾಮಾಯಣ ನೇಪಾಳದ ಗ್ರಾಮ–ಗ್ರಾಮಗಳಲ್ಲೂ ಚಿರಪರಿಚಿತ. ಅದನ್ನು ತುಳಸೀದಾಸರ ರಾಮಚರಿತಮಾನಸದಂತೆ ಭಾವಿಸಲಾಗುತ್ತದೆ. ನೇಪಾಳ ಮತ್ತು ಭಾರತವನ್ನು ಅನಾದಿಕಾಲದಿಂದ ಸಾಂಸ್ಕೃತಿಕವಾಗಿ ಬೆಸೆದಿರುವುದು ರಾಮಾಯಣವೇ !

ನಮ್ಮ ರಾಮಾಯಣ ಯಾತ್ರೆಯನ್ನು ಸುದೂರಪೂರ್ವ ದೇಶಗಳಲ್ಲಿ ಮುಂದುವರೆಸೋಣ.

ಪ್ರಾಚೀನ ಕಾಲದಿಂದಲೂ ಭಾರತದ ಪೂರ್ವಕ್ಕಿರುವ ಅನೇಕ ದ್ವೀಪರಾಷ್ಟ್ರಗಳೊಂದಿಗೆ ನಮ್ಮ ಸಂಪರ್ಕವಿದ್ದಿತು. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಗೊಂಡಿರುವ ಸುವರ್ಣದ್ವೀಪ ಎಂಬ ದೇಶ ಇಂದಿನ ಮಲೇಷ್ಯಾ ಮತ್ತು ಇಂಡೋನೇಷ್ಯಾಗಳು ಕೂಡಿಕೊಂಡು ಒಂದೇ ದೇಶವಾಗಿತ್ತು. ಪ್ರಾಚೀನ ಶಾಸನಗಳಲ್ಲಿ ಭಾರತಕ್ಕೆ ಸಂಬಂಧಿಸಿದಂತೆ ಆ ದೇಶಗಳ ಉಲ್ಲೇಖ ಬರುತ್ತದೆ. ಅವು ಯಾವುವೆಂದರೆ, ಇಂದಿನ ಥಾಯ್‌ಲ್ಯಾಂಡ್, ವಿಯೆಟ್ನಾಂ, ಇಂಡೋನೇಷ್ಯಾ, ಮಲೇಷ್ಯಾ, ಕಾಂಬೋಡಿಯಾ ಮತ್ತು ಲಾವೋಸ್. ಈ ಎಲ್ಲ ದೇಶಗಳೊಂದಿಗೆ ಭಾರತೀಯರ ವ್ಯವಹಾರ ಎಂದು, ಹೇಗೆ ಪ್ರಾರಂಭವಾಯಿತೆಂದು ನಿರ್ಧರಿಸುವುದು ಕಷ್ಟ. ಆದರೆ ಕ್ರಿ.ಶ 200ರಲ್ಲಿ ಜೀವಿಸಿದ್ದ ಗ್ರೀಕ್ ಪ್ರವಾಸಿ ಟಾಲೆಮಿ ಬರೆದಿರುವ ಪ್ರವಾಸಗ್ರಂಥಗಳಲ್ಲಿ ಇಂಡೋಚೀನದಲ್ಲಿರುವ (South East Asian Countries) ಅನೇಕ ಊರುಗಳ ಸಂಸ್ಕೃತ ಹೆಸರನ್ನು ದಾಖಲಿಸಿದ್ದಾನೆ. ಅನ್ನಾಂ ದೇಶ(ಇಂದಿನ ವಿಯೆಟ್ನಾಂ) ದ ದಕ್ಷಿಣಭಾಗದಲ್ಲಿ ದೊರೆತ ಬುದ್ಧನ ವಿಗ್ರಹ 2ನೇ ಶತಮಾನಕ್ಕೆ

ಪುಟ 20 ಕ್ಕೆ ➢

➢ ಪುಟ 19 ರಿಂದ.....

ಸೇರಿದ್ದು. ವೋ–ಛನ್ಸ್ ಎಂಬಲ್ಲಿ ದೊರೆತಿರುವ ಕ್ರಿ.ಶ. 200 ರ ಶಾಸನವು ಶುದ್ಧ ಸಂಸ್ಕೃತದಲ್ಲಿದೆ. ಕ್ರಿ.ಶ 400 ರ ನಂತರದ ಅನೇಕ ವಾಸ್ತು ಶಿಲ್ಪಗಳ ಅವಶೇಷಗಳು ಈ ಪ್ರದೇಶಗಳಲ್ಲಿ ಹೇರಳವಾಗಿ ದೊರೆತಿವೆ. ಪಾಳಿಜಾತಕಗಳಲ್ಲೂ, ಪ್ರಾಚೀನ ಸಂಸ್ಕೃತಕಾವ್ಯಗಳಲ್ಲೂ ಬಹು ಹಿಂದಿನಿಂದ ನಮ್ಮವರು ಭಾರತದ ಗಡಿ ದಾಟಿ ಹೊರದೇಶಗಳಿಗೆ ವ್ಯಾಪಾರ ಅಥವಾ ಸುವರ್ಣ ಲಾಭದ ನಿಮಿತ್ತ ಹೋಗುತ್ತಿದ್ದರೆಂಬುದಕ್ಕೆ ಉಲ್ಲೇಖವಿದೆ.

ಈ ದೇಶಗಳನ್ನು ಹೇಗೆ ತಲುಪಿತ್ತಿದ್ದರು ಎಂಬ ಪ್ರಶ್ನೆ ಮೂಡುವುದು ತೀರ ಸಹಜ.

ಭಾರತೀಯರು ನೌಕಾಶಾಸ್ತ್ರನಿಪುಣರಾಗಿದ್ದರು. ಕ್ರಿಪೂರ್ವದ ಅನೇಕ ಶತಮಾನಗಳಿಗೆ ಹಿಂದೆಯೇ ಬೃಹತ್ ನೌಕೆಗಳನ್ನು ನಿರ್ಮಿಸಿ ದೂರ ದೂರದ ಭೂಭಾಗಗಳಿಗೆ ವ್ಯಾಪಾರಕ್ಕಾಗಿ ತೆರಳುತ್ತಿದ್ದರು. ಕೊಲಂಬಸ್, ವಾಸ್ಕೋಡಗಾಮ ಮುಂತಾದ ವಿದೇಶಿಯರು ಉಪಯೋಗಿಸಿದ ನೌಕೆಗಳ ಮೂರು ಪಟ್ಟು ಗಾತ್ರದ ನೌಕೆಗಳು ಭಾರತದ ಪೂರ್ವ, ಪಶ್ಚಿಮ ಸಮುದ್ರಗಳ ಮೇಲೆ ಸಂಚರಿಸುತ್ತಿದ್ದುವು ಎಂಬುದಕ್ಕೆ ಅನೇಕ ಪುರಾವೆಗಳಿವೆ. ಗುಜರಾತ್‌ನಲ್ಲಿ ನೌಕಾನಿರ್ಮಾಣವಾಗುತ್ತಿದ್ದ ಲೋಥಲ್ ಎಂಬ ಬಂದರು ಸ್ಥಳವನ್ನು ಇಂದಿಗೂ ಕಾಣಬಹುದು. ಅದೇ ರೀತಿ ಕಳಿಂಗದ ಗೋಪಾಲಪುರ, ಬಂಗಾಳದ ತಾಮ್ರಲಿಪಿ, ಆಂಧ್ರದ ಮಚಲೀಪಟ್ಟಣ ಹಾಗೂ ತಮಿಳುನಾಡಿನ ಮಹಾಬಲಿಪುರಂಗಳು ಪ್ರಸಿದ್ಧ ರೇವು ಪಟ್ಟಣಗಳಾಗಿದ್ದುವು. ಹೀಗಾಗಿ ಸಮುದ್ರ ಮಾರ್ಗವಾಗಿ ಈ ದೇಶಗಳನ್ನು ತಲುಪಿ ತಮ್ಮ ಸಂಸ್ಕೃತಿಯನ್ನು ಅಲ್ಲಿನವರಿಗೆ ಪರಿಚಯಿಸಿದರು ಎಂಬುದು ಸತ್ಯಸ್ಯಸತ್ಯ.

## ಥಾಯ್‌ಲ್ಯಾಂಡ್‌ನ ರಾಮಕೀನ್

ಶ್ಯಾಮದೇಶ ಎಂಬುದು ಥಾಯ್‌ಲ್ಯಾಂಡ್‌ನ ಪ್ರಾಚೀನ ಹೆಸರು. ರಾಮಾಯಣದ 'ರಾಮ' ಶ್ಯಾಮವರ್ಣದವನಾಗಿದ್ದುದೇ ಇದಕ್ಕೆ ಕಾರಣವಿರಬಹುದು. 1939ರವರೆಗೆ ಅದನ್ನು ಸಯಾಂ ಎಂದು ಕರೆಯುತ್ತಿದ್ದರು. ಕಾಂಬೋಡಿಯಾದ ಅಧಿಪತ್ಯದಿಂದ ಸ್ವಾತಂತ್ರ್ಯ ಪಡೆದ ಕುರುಹಾಗಿ ಥಾಯ್ (ಸ್ವತಂತ್ರ) ಎಂದು 1939ರಲ್ಲಿ ನಾಮಕರಣ ಮಾಡಿದರು. ಸಯಾಂನ ಪೂರ್ವೇತಿಹಾಸದಂತೆ ಕ್ರಿ.ಶ ಮೂರನೇ ಶತಮಾನಕ್ಕೆ ಮುಂಚೆಯೇ ಭಾರತೀಯರು ಅಲ್ಲಿಗೆ ಬಂದರು. ಸಯಾಂನ ಮೊಟ್ಟ ಮೊದಲ ಸ್ವತಂತ್ರ ರಾಜನ ಇಂದ್ರಾದಿತ್ಯ. ಇವನು 1361 ರಲ್ಲಿ ಗದ್ದುಗೆಗೇರಿದ. ಈ ಸೂರ್ಯವಂಶದ ರಾಜನಿಗೆ ಸಂಸ್ಕೃತ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿ. ಶ್ರೀರಾಮನಕಥೆ ಥಾಯ್‌ಲ್ಯಾಂಡ್‌ನಲ್ಲಿ ಅತ್ಯಂತ ಲೋಕಪ್ರಿಯವಾದ ಸಾಹಿತ್ಯ.



ಥೈಲ್ಯಾಂಡ್ ರಾಮಾಯಣ 'ರಾಮಕೀನ್ ಥಾಯ್ ಖೋನ್'
ರಾಯಲ್ ಮಾಸ್ಕ್ ನೃತ್ಯ



ಪಚ್ಚೆಬುದ್ಧನ ದೇವಸ್ಥಾನದ ಸುತ್ತಲಿರುವ ಗೋಡೆಗಳ ಮೇಲೆ ರಾಮಾಯಣದ ಚಿತ್ರ

ಕ್ರಿ.ಶಕೆಯ ಪ್ರಾರಂಭದ ಶತಕಗಳಲ್ಲಿ ಥಾಯ್‌ನ ಅನೇಕ ರಾಜರು ಅವರ ಹೆಸರಿನ ಹಿಂದೆ ಅಥವಾ ಮುಂದೆ ರಾಮನ ಹೆಸರನ್ನು ಸೇರಿಸಿಕೊಳ್ಳುತ್ತಿದ್ದರು. ಥಾಯ್‌ಲ್ಯಾಂಡ್‌ನಲ್ಲಿ ವಾಲ್ಮೀಕಿ ರಾಮಾಯಣವನ್ನು ರಾಮಕೀನ್ (Ramakien) ರಾಮಕಥೆ ಎಂದು ಕರೆಯುವರು. ರಾಮಕೀನ್ ಥಾಯ್‌ಲ್ಯಾಂಡನ ರಾಷ್ಟ್ರೀಯಗ್ರಂಥ. ಇಲ್ಲಿಯ ಹಿಂದಿನ ರಾಜಧಾನಿಯನ್ನು ಶ್ರೀರಾಮನ ರಾಜಧಾನಿಯಾದ ಅಯೋಧ್ಯೆಯ ಹೆಸರಿನಲ್ಲಿ 'ಅಯುಕ್ತಯ' ಎಂದು ಕರೆಯುತ್ತಿದ್ದರು. ಬದಲಾದ ರಾಜಧಾನಿಯು ಬ್ಯಾಕಾಂಕ್‌ನಲ್ಲಿರುವ ಪಚ್ಚೆಬುದ್ಧನ ದೇವಸ್ಥಾನದ ಸುತ್ತಲಿರುವ ಗೋಡೆಗಳ ಮೇಲೆ ರಾಮಾಯಣದ ಚಿತ್ರಗಳನ್ನು ಬಿಡಿಸಲಾಗಿದೆ. ರಾಮಾಯಣದ ಬ್ಯಾಲೆ ಇಲ್ಲಿ ತುಂಬಾ ಪ್ರಚಲಿತ ರಾಜರ ಅರಮನೆಯ ಗೋಡೆಗಳಲ್ಲೂ ರಾಮಾಯಣದ ಚಿತ್ರಗಳನ್ನು ಚಿತ್ರಿಸಿದ್ದಾರೆ. ರಾಮಾಯಣ ಥಾಯ್‌ಜನರ ಜೀವನದಲ್ಲಿ ಹಾಸುಹೊಕ್ಕಿದೆ.

## ವಿಯಟ್ನಾಂನಲ್ಲಿ ರಾಮಾಯಣ

ಇಂದು ವಿಯಟ್ನಾಂ ಎಂದು ಕರೆಯಲ್ಪಡುವ ದೇಶವನ್ನು ಪ್ರಾಚೀನ ಕಾಲದಲ್ಲಿ ಚಂಪಾ ಎಂದು ಕರೆಯುತ್ತಿದ್ದರು. ಕ್ರಿ.ಶ 200 ಕ್ಕೂ ಮುನ್ನ ಭಾರತದಿಂದ ತೆರಳಿದ ಹಿಂದೂಗಳು ಅಲ್ಲಿ ನೆಲೆಸಿದ್ದರು.




ವಿಯೆಟ್ನಾಂನಲ್ಲಿ ಕೇಟೆ ಹಬ್ಬದ ಸಮಯದಲ್ಲಿ ಪ್ರಾಚೀನ ದೇಗುಲಗಳಲ್ಲಿ
ಪ್ರತಿ ವರ್ಷ ಆಚರಿಸುವ ರಾಮಾಯಣ ನೃತ್ಯನಾಟಕ

ಈ ದೇಶದ 'ವೋಚನ್' ಎಂಬ ಪ್ರದೇಶದಲ್ಲಿ ಸುದೂರ ಪೂರ್ವದೇಶಗಳಲ್ಲೇ ಅತಿ ಪುರಾತನವಾದ ಶಾಸನ ದೊರೆತಿದೆ. ಅದೂ ಸಂಸ್ಕೃತ ಭಾಷೆಯಲ್ಲಿ! ಕ್ರಿ.ಶ.150 ರಿಂದ200 ರೊಳಗೆ ಮೊದಲ ರಾಜವಂಶ ಪ್ರಾರಂಭವಾಯಿತೆಂಬುದು ವಿದ್ವಾಂಸರ ಅನಿಸಿಕೆ. 380 ರಿಂದ 413ರವರೆಗೆ ರಾಜ್ಯವಾಳಿದ 'ಭದ್ರವರ್ಮ' ನಿಗೆ ಧರ್ಮಮಹಾರಾಜ ಎಂಬ ಪ್ರಶಸ್ತಿ ಇತ್ತು.

ಪುಟ 21 ಕ್ಕೆ ➢

➢ ಪುಟ 20 ರಿಂದ.....

ಕ್ರಿ.ಶ 150ರಿಂದ ಸಾವಿರ ವರ್ಷಗಳ ಕಾಲ ಅಲ್ಲಿ ಹಿಂದೂರಾಜ್ಯವೇ ಇತ್ತು.

ಮಹಾಕಾವ್ಯ ಡಾಂಸಾನ್ (Domson) ಎಂಬುದು ವಿಯಟ್ನಾಂನ ರಾಮಾಯಣ ಮಹಾಕಾವ್ಯದ ಹೆಸರು. ವಾಲ್ಮೀಕಿರಾಮಾಯಣ ಹಾಗೂ ಡಾಂಸಾನ್ ಕಾವ್ಯಕ್ಕೂ ಅನೇಕ ಸಮಾನ ಹೋಲಿಕೆಗಳಿವೆ. ಇಂದಿಗೂ ಡಾಂಸಾನ್ ಕಾವ್ಯವನ್ನು ವಿಯಟ್ನಾಮೀ ಜನ ಹಾಡುಗಳ ರೂಪದಲ್ಲಿ ಹಾಡುತ್ತಾರೆ. ಪ್ರಕಾಶಧರ್ಮನ್ ಎಂಬ ರಾಜನ ಕಾಲದ ಶಾಸನದಲ್ಲಂತೂ ಮಹರ್ಷಿ ವಾಲ್ಮೀಕಿಯನ್ನು ಹಾಡಿಹೊಗಳಿದ್ದಾರೆ. ವಾಲ್ಮೀಕಿಯನ್ನು ಅತ್ಯಂತ ಪೂಜ್ಯ ಭಾವದಿಂದ ನೋಡಿದ್ದಾರೆ. ವಿಯಟ್‌ನಾಮೀಗಳು ರಾಮಾಯಣವನ್ನು ಇಂದಿಗೂ ನೃತ್ಯ ನಾಟಕ ರೂಪದಲ್ಲಿ ಅಭಿನಯಿಸುತ್ತಾರೆ.

## ಲಾವೋಸ್‌ನಲ್ಲಿ ರಾಮಾಯಣ

ಎರಡನೇ ಶತಮಾನದಲ್ಲೇ ಚೈನಾದ ಇಂದಿನ ಯೂನಾನ್ ಅನ್ನು 'ಗಾಂಧಾರ' ಎಂದು ಕರೆಯುತ್ತಿದ್ದರು. ಹಿಂದು ಸಂಸ್ಕೃತಿ, ಭಾಷೆ ಹಾಗೂ ಧರ್ಮವು ಈ ಭಾಗಕ್ಕೆ ಶಾತವಾಹನರ ಕಾಲದಲ್ಲೇ (230BC-AD220)ಹಬ್ಬಿತು. 'ಟೈ' ಬುಡಕಟ್ಟಿನ ಜನ ಸಂಪೂರ್ಣ ಭಾರತೀಕರಣವಾಗಿದ್ದ (Indianized) ಮಾನ್ ಸಾಮ್ರಾಜ್ಯಗಳ ಭೂಭಾಗದಲ್ಲಿ ಮತ್ತು ಭಾರತೀಯ ಜ್ಞಾನ ಹಾಗೂ ಕಲಿಕೆ ಇದ್ದ ಖೇಮರ್ ಸಂಸ್ಕೃತಿಯ ರಾಜ್ಯಗಳಿಗೆ ವಲಸೆ ಬಂದರು. ಆ ಕಾಲದಲ್ಲಿದ್ದ ಅನೇಕ ಹಿಂದು ದೇವಸ್ಥಾನಗಳಲ್ಲಿ ರಾಮಾಯಣ–ಮಹಾಭಾರತದ ಕೆತ್ತನೆಯ ಶಿಲಾ ಆಕೃತಿಗಳಿದ್ದವು. ಆ ಜನರಿಗೆ ರಾಮಾಯಣ–ಮಹಾಭಾರತದ ಪರಿಚಯವಿದ್ದಿತು. ಈ ಸಾಮ್ರಾಜ್ಯಗಳು ಪತನಗೊಂಡ ನಂತರವೂ ಲಾವೋ ಜನರು ಈ ದೇಗುಲಗಳನ್ನು ಶ್ರದ್ಧೆ, ಗೌರವದಿಂದ ಪೂಜಿಸುತ್ತಿದ್ದರು. ರಾಮಾಯಣದ ಲಾವೋ ಆವೃತ್ತಿಯನ್ನು ಫರಾಲಾಕ್ ಫರಾರಾಮ್ ಅಥವಾ ಫಲಾಕ್ ಫಲಾಂ ಎಂದು ಕರೆಯುತ್ತಾರೆ.



ಅಯೋಧ್ಯೆಯ ರಾಮಾಯಣದ ಉತ್ಸವದಲ್ಲಿ ಲಾವೋಸ್‌ನ ನಟರು ಪ್ರದರ್ಶಿಸಿದ ನೃತ್ಯ ನಾಟಕ

ಕಾಲಾನಂತರ ರಾಮಾಯಣದ ಹಿಂದು ಸ್ವಭಾವವು ನಶಿಸಿದರೂ, ಲಾವೋಸ್‌ನಲ್ಲಿ ಅದನ್ನು ಪೂರ್ತಿ ಅಳಿಸಿ ಹಾಕಲಿಲ್ಲ. ಶ್ರೀರಾಮ 'ಫಾರರಾಂ' (Phra Ram) ಆದ, ಲಕ್ಷ್ಮಣ 'ಫಾರಲಾಕ್' (Phra Lak) ಎಂದಾದ. ಇವೆರೆಡೂ ಹೆಸರುಗಳು ಅಲ್ಲಿನ ವಿಶಿಷ್ಟ ಪಾತ್ರಗಳು. ಫಾರ ಲಾಕ್ ಫಾರರಾಮ್‌ನ ಅನೇಕ ಘಟನೆಗಳು ಮೆಕಾನ್ ನದೀತೀರದಲ್ಲಿ ಘಟಿಸುತ್ತವೆ. ಯಾವ ರೀತಿ ಭಾರತದ ಹಿಂದುಗಳಿಗೆ ಗಂಗೆಯು ಜೀವಜಲ ಸಮೃದ್ಧಿ ಮತ್ತು ಚೈತನ್ಯದ ಪ್ರತೀಕವೋ, ಅದೇ ರೀತಿ ಮೆಕಾಂಗ್ ಲಾವೋಯನ್ನರಿಗೆ ಅಭಿಮಾನಿದೇವತೆ, ಪಿತೃದೇವತಾ ಸ್ವರೂಪ ಮತ್ತು ಅತ್ಯಂತ ಪವಿತ್ರವಾದುದಲ್ಲದೆ, ಜೀವಜಲ, ಸಮೃದ್ಧಿ ಮತ್ತು ಚೈತನ್ಯದ ಸಂಕೇತ.

ಲಾವೋ ಸಂಸ್ಕೃತಿಗೆ ಫರಾಲಾಕ್ ಫರಾರಾಂ ಎಷ್ಟು ಮುಖ್ಯವಾದುದೆಂದರೆ, ಅವರ ನೃತ್ಯ, ನಾಟಕ, ಹಾಡು, ಚಿತ್ರಕಲೆ ಹಾಗೂ ಶಿಲ್ಪಕಲೆಗೆ ಅದೇ ಸ್ಫೂರ್ತಿ ಮತ್ತು ಪ್ರಮುಖ ವಸ್ತು. ಜಾನಪದ ನೃತ್ಯಗಳು, ಗ್ರಾಮ ನೃತ್ಯಗಳಿಗೂ ಇದೇ ಮೂಲಾಧಾರ, ಲಾವನ್ನರ ಹೊಸ ವರ್ಷಾಚರಣೆಯಲ್ಲಿ ರಾಮಾಯಣಕ್ಕೆ ಸಂಬಂಧಿತ ನೃತ್ಯಗಳಿಗೆ ಪ್ರಾಧಾನ್ಯತೆ. ಬೌದ್ಧ ಸಂಪ್ರದಾಯದ ಹಬ್ಬಗಳ ಆಚರಣೆಯಲ್ಲೂ, ಶುಭ ಸಮಾರಂಭಗಳಲ್ಲೂ ಈ ನೃತ್ಯಗಳು ಇದ್ದೇ ಇರುತ್ತವೆ. ರಾಮಾಯಣದ ಅನೇಕ ಘಟನೆಗಳಿಗೆ ನೃತ್ಯ ನಾಟಕ ರೂಪ ಕೊಟ್ಟು ಸಂಗೀತ, ವಾದ್ಯಗಳ ಮೂಲಕ ಪ್ರದರ್ಶಿಸುವುದೂ ಉಂಟು.

ಒಟ್ಟಾರೆ ಯಾವುದೋ ರೂಪದಲ್ಲಿ ನಮ್ಮ ರಾಮಾಯಣ ಅವರ ಜೀವನವನ್ನು ಆವರಿಸಿದೆ.

## ಫಿಲಿಫೀನ್ಸ್‌ನಲ್ಲಿ ರಾಮಾಯಣ

ಫಿಲಿಪ್ಪೀನ್ಸ್‌ಗೆ ರಾಮಾಯಣ ಕಾಲಿಟ್ಟಿದ್ದು 17ನೇ ಶತಮಾನದಲ್ಲಿ ಜಾವಪ್ರದೇಶದವರು ಹಾಗೂ ಮಲಯೇಷ್ಯನ್‌ರೊಂದಿಗೆ ಸಂಪರ್ಕ ಬಂದ ಫಿಲಿಫೀನರು ಅಲ್ಲಿನ ಸಂಸ್ಕೃತಿಯನ್ನು ತಮ್ಮ ದೇಶಕ್ಕೂ ಕೊಂಡೊಯ್ದರು. 'ಮಹಾರಾಡಿಯ ಲಾವಣ' ಅಥವಾ ಮಹಾರಾಜ ರಾವಣ ಎಂಬುದು 'ಮರನಾವನ್' ಮಹಾಕಾವ್ಯ. ಇದರ ಮೂಲ ಭಾರತದ ಮಹಾಕಾವ್ಯ ರಾಮಾಯಣ. ಇದರ ಆಂಗ್ಲ ಭಾಷಾಂತರ ಮಾಡಿದವನು "ಜುವಾನ್ ಆರ್. ಫ್ರಾನ್ಸಿಸ್‌ಕೋ" ಮತ್ತು ಆತನ ಸಹಾಯಕ ಮರನಾವ್‌ನ ವಿದ್ವಾಂಸ ನಾಗಸುರಮದಾಲೆ. ಲ್ಯಾನೋವ್ (LANAO) ಸರೋವರದ ಪ್ರದೇಶದಲ್ಲಿನ ಸಂಶೋಧನೆಯೇ ಅವನಿಗೆ ಈ ಕಾವ್ಯವನ್ನು ಪರಿಚಯಿಸಿದ್ದು. ಫ್ರಾನ್‌ಸಿಸ್‌ಕೋ ಪ್ರಥಮ ಬಾರಿಗೆ ಈ ಕಾವ್ಯವನ್ನು ಲಾನೋವ್ ಸರೋವರದ ಬಳಿಯ ಜನಪದಗಾಯಕರು ಹಾಡಿದುದನ್ನು ಆಲಿಸಿ ತಿಳಿದ. ಫಿಲಿಫೀನ್ಸ್‌ನ ರಾಮಾಯಣ 'ಮಹಾರಾಡಿಯಾ ರಾವಣ' ಮೂಲ ರಾಮಾಯಣಕ್ಕಿಂತ ಭಿನ್ನವಾಗಿದ್ದು ಸ್ಥಾನೀಯ ಭಾಷೆ, ಸಂಸ್ಕೃತಿಗೆ ಅಳವಡಿಸಿಕೊಳ್ಳಲಾಗಿದೆ.



ಫಿಲಿಫೀನ್ಸ್‌ನಲ್ಲಿ ರಾಮಾಯಣ ನೃತ್ಯರೂಪಕ

## ಕಾಂಬೋಡಿಯಾದಲ್ಲಿ 'ರಾಮನವೈಭವ'

ಭಾರತ ಮತ್ತು ಕಾಂಬೋಡಿಯಾದ ಸಂಬಂಧ 1600 ವರ್ಷಗಳಿಗೂ ಹಿಂದಿನದು. ತಮಿಳುನಾಡಿನ ಮಹಾಬಲಿಪುರದಿಂದ ಹೊರಟ ಕಾಂಡಿನ್ಯನೆಂಬ ಬ್ರಾಹ್ಮಣ ಕ್ರಿ.ಶ 350ರ ದಶಕದಲ್ಲಿ ಕಂಬುಜಕ್ಕೆ ಬಂದು ಭಾರತೀಯ ಆಚಾರ–ವಿಚಾರಗಳನ್ನು ಪ್ರಸರಿಸಿದನೆಂದು ಚೀನಿ ಇತಿಹಾಸ ಹೇಳುತ್ತದೆ. ರಾಮಾಯಣವು ಕಾಂಬೋಡಿಯಾಕ್ಕೆ ಹಿಂದೂ ಧರ್ಮದೊಡಗೂಡಿ ದಕ್ಷಿಣ ಭಾರತದಿಂದಲೇ ಬಂದಿದೆ ಎಂಬುದು ನಿರ್ವಿವಾದ. 'ವಿಯಲ್ ಕನ್‌ಟೆಲ್' ಎಂಬ ಸ್ಥಳದಲ್ಲಿ

ಪುಟ 22 ಕ್ಕೆ ➢

➤ ಪುಟ 21 ರಿಂದ.....



**ಆಂಕೋರ್‌ವಾಟ್‌ನ ವಿಶಾಲ ದೇಗುಲ ಸಮುಚ್ಚಯದಲ್ಲಿ ಗೋಡೆಯ ಮೇಲಿರುವ ರಾಮ, ಲಕ್ಷ್ಮಣ ಮತ್ತು ಹನುಮಂತನ ಶಿಲ್ಪ ಚಿತ್ರ**

ದೊರೆತ ಕ್ರಿ.ಶ.700 ರ ಕಲ್ಲಿನ ಶಾಸನದಲ್ಲಿ ಪ್ರಥಮಬಾರಿಗೆ ರಾಮಾಯಣದ ಉಲ್ಲೇಖವಾಗಿದೆ. ಆ ಶಾಸನದಲ್ಲಿ ರಾಮಾಯಣದ ಹಸ್ತ ಪ್ರತಿಯೊಂದನ್ನು ದೇವಾಲಯವೊಂದಕ್ಕೆ ಕೊಟ್ಟ ಹಾಗೂ ದೇವಸ್ಥಾನಗಳಲ್ಲಿ ಪ್ರತಿನಿತ್ಯ ರಾಮಾಯಣದ ಪಾರಾಯಣ ಆಗುತ್ತಿತ್ತು ಎಂಬ ಮಾಹಿತಿ ಇದೆ. ಚೀನಿ ದಾಖಲೆಗಳಲ್ಲಿ ಕ್ರಿ.ಶ 1 ನೇ ಶತಮಾನದಿಂದ 6 ನೇ ಶತಮಾನದವರೆಗೆ ಭಾರತೀಯ ರಾಜರು ಇದ್ದ ಮಾಹಿತಿ ಸಿಕ್ಕಿದೆ. ಅಂದ ಮೇಲೆ ಕ್ರಿ.ಶ 700 ಕ್ಕೂ ಮುನ್ನವೇ ರಾಮಾಯಣ, ಕಾಂಬೋಜವನ್ನು ತಲುಪಿದೆ ಎಂದಾಯ್ತು. ಚೀನೀ ರಾಜತಾಂತ್ರಿಕರಾದ (Diplomats) ದ ಕಾಂಗ್‌ತಾಯ್ ಮತ್ತು ಝೂ ಇಂಗ್ ಮೂರನೇ ಶತಮಾನದಲ್ಲಿ ಫೂನಾನ್‌ಗೆ ಭೇಟಿ ನೀಡಿದ್ದ ದಾಖಲೆ ಇದೆ. (ಫೂನಾನ್ ಎನ್ನುವುದು ಪ್ರಾಚೀನ ಹಿಂದೂ ರಾಜರ ಆಡಳಿತ ಪ್ರದೇಶ ಫೂನಾನ್ ಸ್ಥಾಪಿತವಾದದ್ದು ಕ್ರಿ.ಶ. 1ನೇ ಶತಮಾನದಲ್ಲಿ. ಅದರ ರಾಜಧಾನಿ ವ್ಯಾಧಪುರ.) ಎರಡನೇ ಜಯವರ್ಮನೆಂಬ ರಾಜ ಕ್ರಿ.ಶ 802 ರಲ್ಲಿ ಈ ದೇಶದ ಒಂದು ಭಾಗದಲ್ಲಿ ತನ್ನ ಸಾಮ್ರಾಜ್ಯ ಸ್ಥಾಪಿಸಿದ. ಆ ನಂತರ ಇವನ ಸಂತತಿಯವರೇ ಬಹುಕಾಲ ಆಳಿದರು. ಜಗತ್ತಿನಲ್ಲೇ ಅತ್ಯಂತ ವಿಶಾಲವಾದ ದೇಗುಲ ಸಮುಚ್ಚಯ ಖ್ಯಾತ ಅಂಗ್‌ಕಾರ್‌ವಾಟ್ ಅಥವಾ ಆನಂದವಟಿ ದೇಗುಲವನ್ನು ಎರಡನೇ ಸೂರ್ಯವರ್ಮನು ಕಟ್ಟಲು ಪ್ರಾರಂಭಿಸಿದನು. 12 ನೇ ಶತಮಾನದಲ್ಲಿ ಈ ವಂಶದ ವಾರಸುದಾರ ಏಳನೇ ಜಯವರ್ಮನಿಂದ ಇದು ಪೂರ್ಣಗೊಳಿಸಲ್ಪಟ್ಟಿತು. ಈ ದೇವಸ್ಥಾನದ ಗೋಡೆಗಳಲ್ಲಿ ರಾಮಾಯಣ ಪ್ರಸಂಗಗಳನ್ನು ಕೆತ್ತಿರುವುದನ್ನು ಇಂದಿಗೂ ಕಾಣಬಹುದು.

ನಮ್ಮ ರಾಮಾಯಣ ಕಂಬುಜಕ್ಕೆ ಹೋಗಿ 'ರಾಮಯ' ಅಥವಾ ರಿಯಾಂಕರ್ (Reamker) ಆಯಿತು. ರಿಯಾಂಕರ್ ಅಂದರೆ ಅಂದಿನ ಭಾಷೆಯಲ್ಲಿ 'ರಾಮನವೈಭವ' ಎಂದರ್ಥ. ಈ ಮಹಾಕಾವ್ಯ ಕ್ರಿ.ಶ. ಒಂದೆರೆಡು ಶತಮಾನದಲ್ಲೇ ರಚಿತವಾಗಿರಬೇಕು.

ರಾಮಾಯಣವು ಕಾಂಬೋಡಿಯನ್ ಸಂಸ್ಕೃತಿಯ ಅಭಿನ್ನ ಭಾಗವಾಗಿದೆ. ಅಲ್ಲಿನ ನೃತ್ಯ ನಾಟಕಗಳು ರಾಮಾಯಣಾಧಾರಿತವಾಗಿದೆ.ಅಲ್ಲಿನ ಅರಮನೆಗಳ ಗೋಡೆಗಳಲ್ಲಿ ರಾಮಾಯಣದ ಚಿತ್ರಗಳನ್ನು ಬಿಡಿಸಲಾಗಿದೆ. ಪುರಾತನ ದೇಗುಲಗಳ ಭಿತ್ತಿಯಲ್ಲಿ ರಾಮಾಯಣ ಪ್ರಸಂಗಗಳನ್ನು ಕೆತ್ತಲಾಗಿದೆ.

ರಿಯಂಕರ್ (Reamker) ನ ಅನೇಕ ಅವತರಣಿಕೆಗಳು ಕಾಂಬೋಡಿಯಾದಲ್ಲಿ ಲಭ್ಯವಿದೆ. ಈಗಂತೂ ಇದನ್ನು ರಾಷ್ಟ್ರೀಯ ಮಹಾಕಾವ್ಯ ಎಂಬುದಾಗಿ ಪರಿಗಣಿಸಲ್ಪಟ್ಟಿದೆ.

## ಇಂಡೋನೇಷ್ಯಾದಲ್ಲಿ ರಾಮಾಯಣ ಪ್ರಭಾವ

'ಇಂಡೋನೇಷ್ಯಾ' ಎಂಬುದು ಭಾರತದ ಪೂರ್ವಭಾಗದಲ್ಲಿರುವ ದ್ವೀಪಸಮುಚ್ಚಯಗಳ ದೇಶ. ಮೂರುಸಾವಿರಕ್ಕೂ ಹೆಚ್ಚು ವಿಶಾಲವಾದ ಹಾಗೂ ಸಣ್ಣಪುಟ್ಟ ದ್ವೀಪಗಳಿರುವ ಈ ದೇಶದಲ್ಲಿ ಬಾಲಿ, ಸುಮಾತ್ರ ಮತ್ತು ಜಾವ ಎಂಬುದು ಪ್ರಮುಖವಾದ ದ್ವೀಪಗಳು. ಇಂದಿಗೂ 'ಬಾಲಿ' ಹಿಂದೂ ಬಾಹುಳ್ಯವಿರುವ ದ್ವೀಪ.

ಸುಮಾರು ಕ್ರಿಸ್ತ ಪೂರ್ವ 1000 ವರ್ಷಗಳಿಗೂ ಮುಂಚಿನಿಂದ ಇಂದಿನ ಇಂಡೋನೇಷ್ಯಾದೊಂದಿಗೆ ಭಾರತದ ಸಂಪರ್ಕವಿದ್ದಿತು.

ಜಾತಕ ಕಥೆಗಳಲ್ಲಿ 'ಸ್ವರ್ಣಭೂಮಿ' ಎಂದು ಕರೆದಿರುವ ಪ್ರದೇಶ ಇಂದಿನ 'ಸುಮಾತ್ರ' ಆಗಿದ್ದರೆ, ರಾಮಾಯಣದಲ್ಲಿ 'ಯವದ್ವೀಪ' ಎಂದು ಕರೆದಿರುವುದು ಇಂದಿನ 'ಜಾವ' ದ್ವೀಪವನ್ನು. ರಾಮಾಯಣದ ಕಾಲ ಕ್ರಿ.ಪೂ ಹಲವು ಶತಮಾನಗಳಾದರೆ, ಜಾತಕ ಕಥೆಗಳ ಕಾಲ ಕ್ರಿ.ಪೂ 300ರಿಂದ ಈಚೆಗೆ ಎಂದು ವಿದ್ವಾಂಸರ ನಿರ್ಣಯ.



**ಇಂಡೋನೇಶಿಯಾದ ಜಾವಾದಲ್ಲಿ ರಾಮಾಯಣದ 1814 ರ ಹಸ್ತಪ್ರತಿ – 'ಸೇರಾಟ್ ರಾಮಾ ಕೇಲಿಂಗ್'**

ರಾಮಾಯಣ ಕಾಲದ ಋಷಿ 'ಅಗಸ್ತ್ಯ'ರ ಪ್ರತಿಮೆ ಜಾವದ 'ಪಾಂಬನನ್' ದೇವಸ್ಥಾನದಲ್ಲಿದೆ.

ಕ್ರಿ.ಶ ಎರಡನೇ ಶತಮಾನದಲ್ಲಿ ಮಲಯ ಪರ್ಯಾಯ ದ್ವೀಪದಲ್ಲಿ ಹಿಂದೂ ಸಾಮ್ರಾಜ್ಯವಿದ್ದಿತು. ಏಳನೇ ಶತಮಾನದಿಂದ 13 ನೇ ಶತಮಾನದವರೆಗೆ ಇಲ್ಲಿ ಶ್ರೀ ವಿಜಯ ಸಾಮ್ರಾಜ್ಯವಿದ್ದಿತೆಂದು ಇತಿಹಾಸ ತಿಳಿಸುತ್ತದೆ.

ದಕ್ಷಿಣ ಭಾರತದಲ್ಲಿನ ಚೋಳ ಸಾಮ್ರಾಜ್ಯದ ಮಹಾಪ್ರತಾಪಿ ರಾಜನಾದ ರಾಜೇಂದ್ರಚೋಳ ನೌಕಾಧಾಳಿಯನ್ನು ನಡೆಸಿ ಮಲಯ ಪರ್ಯಾಯ ದ್ವೀಪ ಹಾಗೂ ಸುಮಾತ್ರಗಳವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ.

ರಾಜರಾಜ ಚೋಳನಮಗ, ರಾಜೇಂದ್ರಚೋಳನಾದರೋ ಪ್ರಬಲ ನೌಕಾಸೇನೆಯೊಂದಿಗೆ ಸುದೂರ ಪೂರ್ವ ದೇಶಗಳ ಅನೇಕ ದ್ವೀಪರಾಜ್ಯಗಳಲ್ಲಿ ತನ್ನ ಅಧಿಪತ್ಯವನ್ನು ಸ್ಥಾಪಿಸಿದ್ದ. ಅದರಲ್ಲಿ ಇಂದಿನ ಮಲೇಷ್ಯಾ, ದಕ್ಷಿಣ ಥಾಯಲ್ಯಾಂಡ್ ಹಾಗೂ ಸಿಂಗಪುರ್ ಪ್ರಮುಖವಾದುವು.

ಕ್ರಿ.ಶ. 9ನೇ ಶತಮಾನದಲ್ಲಿ ಜಾವ ಪ್ರದೇಶವನ್ನು ಆಳುತ್ತಿದ್ದ ಶೈಲೇಂದ್ರ ವಂಶಸ್ಥರು ಸೆಂಟ್ರಲ್ ಜಾವದಲ್ಲಿ ಪ್ರಾಂಬನನ್ ಎಂಬ ಬಹುದೊಡ್ಡ ದೇವಸ್ಥಾನವನ್ನು ನಿರ್ಮಿಸಿದರು. ಈ ದೇವಸ್ಥಾನದ ಕಲ್ಲಿನ ಗೋಡೆಯಲ್ಲಿ

ಪುಟ 23 ಕ್ಕೆ ➤

➢ ಪುಟ 22 ರಿಂದ.....



ರಾವಣನಿಂದ ಸೀತಾಪಹರಣದ ಶಿಲ್ಪ



ಇಂಡೋನೇಷಿಯಾದ ಬಾಲಿಯಲ್ಲಿ ಹನುಮನ ಚಿತ್ರ

ರಾವಣನು ಸೀತಾಮಾತೆಯನ್ನು ಅಪಹರಿಸಿಕೊಂಡು ಹೋಗುವ ಕೆತ್ತನೆಗಳಿವೆ. ಹೀಗಾಗಿ ರಾಮಾಯಣದ ಕಥೆಯು 9ನೇ ಶತಮಾನಕ್ಕಿಂತ ಮುಂಚಿನಿಂದಲೂ ಈ ದೇಶದಲ್ಲಿ ಪ್ರಚಲಿತವಿದ್ದೇ ಇರಬೇಕು ಎಂದು ತೀರ್ಮಾನಿಸಬಹುದು.

ಇಂಡೋನೇಷ್ಯಾದ 'ಜಾವಾ' ದ್ವೀಪದಲ್ಲಿ ರಚಿತವಾಗಿರುವ ರಾಮಾಯಣದ ಹೆಸರು "ರಾಮಾಯಣ ಕಾಕವಿನ್" ಇದರ ಮೊದಲ 5 ಖಂಡಗಳು ಸಂಸ್ಕೃತ ಕಾವ್ಯದ ನೇರ ಭಾಷಾಂತರವಾದರೆ ಉಳಿದವು ಸ್ವತಂತ್ರ ಕಾವ್ಯ.

ಬಾಲಿ ದ್ವೀಪವಂತೂ ಇಂದಿಗೂ ಭಾರತೀಯ ಸಂಸ್ಕೃತಿಯ ಕೇಂದ್ರಸ್ಥಾನ. ಇಲ್ಲಿ ನಾಲ್ಕೂ ದಾರಿ ಕೂಡುವ ಅನೇಕ ಚೌಕಗಳಲ್ಲಿ ಆಂಜನೇಯ ಮೂರ್ತಿ ಇದೆ. ಅರಮನೆಯ ನಾಟ್ಯಶಾಲೆಯಲ್ಲಿ ಪ್ರತಿನಿತ್ಯ ಸಂಜೆ ರಾಮಾಯಣದ ನೃತ್ಯ ನಾಟಕ ಹಾಗೂ ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ಹನುಮಂತನಿಂದ ಸೀತಾನ್ವೇಷಣೆಯ ನೃತ್ಯನಾಟಕವನ್ನು ಪ್ರತಿನಿತ್ಯ ಆಡುತ್ತಾರೆ. ಇದನ್ನು ನೋಡಲು ನೂರಾರು ಪ್ರವಾಸಿಗರು ಕಾದುನಿಂತಿರುತ್ತಾರೆ. 2019ರ ಜುಲೈ ಮೊದಲ ವಾರದಲ್ಲಿ ಪರಿವಾರ ಸಮೇತ ಒಂದು ವಾರ ಬಾಲಿ ದ್ವೀಪದ ಪ್ರವಾಸ ಮಾಡಿದಾಗ ನಾವು ಕಂಡ ಅತ್ಯಾಶ್ಚರ್ಯಕರವಾದ ಸಂಗತಿ ಎಂದರೆ ಮೇಲಿನ ಎಲ್ಲ ವಿವರಣೆಗಳು.

ಬಾಲಿಯ ಉಬುಡ್ ಪ್ರದೇಶದಲ್ಲಿರುವ ಕೆಲವು ಹೋಟೆಲುಗಳ ಹೆಸರುಗಳನ್ನು ನೋಡಿರಿ. 'ರಾಯಲ್ ಪಿತಾಮಹ' 'ಆಲಯ ರಿಸಾರ್ಟ್', 'ದೇಶ ವಿಶೇಷ', 'ಹೋಟೆಲ್ ಸಂಸಾರ', ಇದೆಲ್ಲಾ ಹಿಂದೂ ಸಂಸ್ಕೃತಿಯ ಛಾಯೆ ಅಲ್ಲವೇ? ಇದಕ್ಕೆ ಕಾರಣ 5ನೇ ಶತವಾನದವರೆಗೆ ಇಂಡೋನೇಷ್ಯಾದಲ್ಲಿ ದೊರೆತಿರುವ ಶಾಸನಗಳೆಲ್ಲಾ ಸಂಸ್ಕೃತದಲ್ಲಿದ್ದು ಪಲ್ಲವರ ಕಾಲದ ಲಿಪಿಯನ್ನು ಹೊಂದಿದ್ದುದು.

ಕ್ರಿ.ಶ. 15ನೇ ಶತಮಾನದ ನಂತರ ಜಾವದಲ್ಲಿ ಇಸ್ಲಾಂನ ಆಕ್ರಮಣದಿಂದಾಗಿ ಭಾರತೀಯಸಂಸ್ಕೃತಿ ಮತ್ತು ಸಂಪ್ರದಾಯದಿಂದ ಪ್ರಭಾವಿತವಾಗಿದ್ದ ಜಾವನೀಸ್ ಸಂಸ್ಕೃತಿ ಪೂರ್ವಭಾಗದ ಬಾಲಿ ದ್ವೀಪದಲ್ಲಿ ನೆಲೆಗೊಂಡಿತು. ಹಳೆಯ ಜಾವನ್ನರ ಕಾಕವಿನ್ (ರಾಮಾಯಣ) ಬಾಲಿಯಲ್ಲಿ ಪ್ರಸಿದ್ಧಿ ಪಡೆಯಿತು. ಆದರೆ ಅದರ ಕಥೆಗಳು ಮುಸ್ಲಿಂ ಆಕ್ರಮಿತ ಜಾವದಲ್ಲಿ ನೆರಳು–ಬೊಂಬೆಯಾಟದ ಮೂಲಕ ಮತ್ತೆ ಜೀವ ತಳೆಯಿತು.

ಆದರೆ ಬಾಲಿಯಲ್ಲಾದರೋ ಇಂದಿಗೂ ಶ್ರೀ ರಾಮನ ಕಥೆಯು ಅಲ್ಲಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಈ 20ನೇ ಶತಮಾನದಲ್ಲಂತೂ ತಾಳೆಗರಿಯ ಹಸ್ತಪ್ರತಿಯ ಮೂಲಕ ಪ್ರಸಿದ್ಧಿ ಪಡೆಯುತ್ತಿದೆ.

ಇಂದು ಇಂಡೋನೇಷ್ಯಾ ಜಗತ್ತಿನ ಅತ್ಯಂತ ವಿಶಾಲವಾದ ಮುಸ್ಲಿಂ ರಾಷ್ಟ್ರ. ಆದರೂ ಇಲ್ಲಿನ ಅನೇಕ ವಿಶ್ವವಿದ್ಯಾಲಯಗಳಲ್ಲಿ ರಾಮಾಯಣ, ಮಹಾಭಾರತದ ಕಲಿಕೆ ಕಡ್ಡಾಯ. ರಾಜಧಾನಿ ಜಕಾರ್ತದಲ್ಲಿ ಸುಲ್ತಾನ ತನ್ನ ಅರಮನೆಯ ಪಕ್ಕದ ಪ್ರಾಂಗಣದಲ್ಲಿ ಪ್ರತಿದಿನ ನಡೆಯುವ ರಾಮಾಯಣದ ಚರ್ಮದ ಬೊಂಬೆಯಾಟವನ್ನು ಬೆಂಬಲಿಸುತ್ತಾನೆ. ಅಂತೆಯೇ ದಿನನಿತ್ಯ ನಡೆಯುವ ರಾಮಾಯಣಾಧಾರಿತ ನೃತ್ಯ ಬ್ಯಾಲೆಗೆ ಧನಸಹಾಯವನ್ನೂ ನೀಡುತ್ತಾನೆ. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ಈ ಅದ್ಭುತವಾದ ಪ್ರದರ್ಶನವನ್ನು ನೀಡುವ ಎಲ್ಲಾ ಇನ್ನೂರು ಕಲಾವಿದರೂ ಮುಸಲ್ಮಾನರೇ ಆಗಿರುವುದು. ಪತ್ರಕಾರನೊಬ್ಬ, ಒಮ್ಮೆ ಈ ಪ್ರಮುಖ ಪಾತ್ರಧಾರಿಗಳನ್ನು "ನೀವು ಇಷ್ಟು ತಾದಾತ್ಮ್ಯದಿಂದ ರಾಮಾಯಣ ಬ್ಯಾಲೆಯನ್ನು ಹೇಗೆ ಆಡುವಿರಿ?" ಎಂದು ಕೇಳಿದಾಗ ಅವರು ಕೊಟ್ಟದ್ದು "ಇಸ್ಲಾಂ ನಮ್ಮ ಧರ್ಮ, ರಾಮಾಯಣ ನಮ್ಮ ಸಂಸ್ಕೃತಿ" ಎಂಬ ಉತ್ತರವು ಭಾರತದ ಎಲ್ಲ ಮತ ಪಂಥದವರಿಗೂ ಮಾರ್ಗದರ್ಶಕ.

## ಮಲೇಷಿಯಾದಲ್ಲಿ ರಾಮಾಯಣದ ಹೆಜ್ಜೆ ಗುರುತು

ದ್ವೀಪ ರಾಷ್ಟ್ರಗಳಾದ ಇಂದಿನ ಸಿಂಗಪುರಕ್ಕೆ ಉತ್ತರ ಭಾಗದಲ್ಲಿ ಮತ್ತು ಥಾಯ್ಲಂಡಿನ ದಕ್ಷಿಣಕ್ಕೆ ಇರುವ ದ್ವೀಪ ಸಮೂಹ ರಾಷ್ಟ್ರವೇ ಮಲೇಷಿಯಾ.

ಕ್ರಿ.ಶ ಒಂದನೇ ಶತಮಾನದಲ್ಲಿ ಈಜಿಪ್ಟಿನ ಅಲೆಗ್ಸಾಂಡ್ರಿಯಾದಿಂದ ಬಂದಿದ್ದ ಪ್ರವಾಸಿ ಟಾಲೆಮಿ ಮಲಯ ದ್ವೀಪವನ್ನು ಸುವರ್ಣಭೂಮಿ ಎಂದು ಕರೆದಿರುವುದು ಮತ್ತು ಭಾರತದ ಪ್ರಾಚೀನ ಕಾವ್ಯಗಳಾದ ರಾಮಾಯಣ ಹಾಗೂ ವಾಯುಪುರಾಣದಲ್ಲಿ ಇದನ್ನು ಸುವರ್ಣದ್ವೀಪ ಎಂದು




ಮಲೇಷಿಯಾದಲ್ಲಿ ರಾಮ ಗುಹೆ

ಪುಟ 26 ಕ್ಕೆ ➢

➢ ಪುಟ 23 ರಿಂದ.....

ಉಲ್ಲೇಖಿಸಿರುವುದು ಕಾಕತಾಳೀಯ. ಕ್ರಿ.ಪೂ ಒಂದನೇ ಶತಮಾನದಲ್ಲೇ ಮಲೆಯಾದೊಂದಿಗೆ ಭಾರತದ ವ್ಯಾಪಾರ ಸಂಬಂಧವಿದ್ದಿತು. ಆಗ್ನೇಯ ಏಷ್ಯಾದ ಮೊದಲನೇ ಪ್ರಮುಖ ಹಿಂದೂರಾಜ್ಯ 'ಫೌನಾನ್'ನಲ್ಲಿ ಮಲಯಾ ಸಹ ಸೇರಿತ್ತು. ಭಾರತ ಮಲಯಕ್ಕೆ ವರ್ಣಮಾಲೆ, ಜ್ಯೋತಿಷ್ಯ, ವೈದ್ಯಶಾಸ್ತ್ರ, ಕಾನೂನು ರಾಜಕೀಯ ವ್ಯವಸ್ಥೆ, ಸಾಹಿತ್ಯ, ರೇಷ್ಮೆಯ ನೇಯ್ಗೆ ಆಭರಣಗಳ ನಿರ್ಮಾಣ ಹೀಗೆ ಅನೇಕ ಸಂಗತಿಗಳನ್ನು ನೀಡಿತ್ತು.

ಸುಮಾತ್ರಾದಲ್ಲಿ ಆಡಳಿತ ನಡೆಸುತ್ತಿದ್ದ "ಶ್ರೀವಿಜಯ" ಸಾಮ್ರಾಜ್ಯ ಮಲಯಾವನ್ನೂ ಒಳಗೊಂಡಿತ್ತು. ಕ್ರಿ.ಶ 4 ಮತ್ತು 5ನೇ ಶತಮಾನದಲ್ಲಿ ತಮಿಳುನಾಡಿನ ಪಲ್ಲವರ ಪ್ರಭಾವ ಇಲ್ಲಿತ್ತು. 4ನೇ ಶತಮಾನದಲ್ಲೇ ಸಂಸ್ಕೃತ ಭಾಷಾಲಿಪಿ ಪ್ರಚಲಿತವಾಗಿತ್ತು. ಮಲಯಾದಲ್ಲಿ ಕ್ರಿ.ಶ 800ವರ್ಷಗಳಿಗೂ ಮೀರಿ ಹಿಂದೂ ಸಾಂಸ್ಕೃತಿಕ ಪ್ರಭಾವವಿದ್ದಿತು. ಅಂದಮೇಲೆ ಈ ದೇಶದಲ್ಲಿ ರಾಮಾಯಣ ಮಹಾಭಾರತಗಳ ಹೆಜ್ಜೆ ಗುರುತು ಬಿದ್ದಿರಲೇಬೇಕು. ರಾಮಾಯಣದ ಮಲಯಾ ಅವತರಣಿಕೆಗೆ "ಹಿಕಾಯತ್ ಸೆರಿರಾಮ" ಎಂದು ಹೆಸರು. ಇದನ್ನು ಮಲಯಾದ ಸಂಸ್ಕೃತಿ ಮತ್ತು ಕಲೆಗಳ ರತ್ನವೆಂದು ಕರೆಯುತ್ತಾರೆ. 13ನೇ ಶತಮಾನದಿಂದೀಚೆಗೆ ಮಲಯಾ ಇಸ್ಲಾಂನ ಆಡಳಿತಕ್ಕೆ ಒಳಪಟ್ಟಿತು. ಇಂದು ಮಲಯಾ ಮುಸಲ್ಮಾನ ಬಾಹುಳ್ಯವುಳ್ಳ ದೇಶವಾದರೂ ಅಲ್ಲಿನ ಸಂಸ್ಕೃತಿಯಲ್ಲಿ ರಾಮಾಯಣದ ಪ್ರಭಾವ ಅಚ್ಚಳಿಯದೇ ಉಳಿದಿದೆ.

ಇಂದಿಗೂ ಅಲ್ಲಿನ ಹೋಟೆಲ್‌ಗಳಲ್ಲಿ ಪ್ರವಾಸಿಗಳನ್ನು ಆಕರ್ಷಿಸಲು ಪ್ರತಿದಿನ ರಾಮಾಯಣದ ನೃತ್ಯನಾಟಕ (Ballet) ಗಳನ್ನು ಏರ್ಪಡಿಸುತ್ತಾರೆ. ಕೌಲಾಲಂಪುರ– ಮಲೇಷ್ಯಾದ ರಾಜಧಾನಿಯಲ್ಲಿರುವ ಬಹುತೇಕ ಸ್ಟಾರ್ ಹೋಟೆಲ್ಲುಗಳಲ್ಲಿ ಈ ರೀತಿಯ ವ್ಯವಸ್ಥೆ ಇದೆ. ಅದನ್ನು ಜಾಹಿರಾತಿನ ಮೂಲಕವೂ ಪ್ರಚುರಪಡಿಸುತ್ತಾರೆ.



ಕೌಲಾಲಂಪುರದ ಹೋಟೆಲ್ ಒಂದರಲ್ಲಿ ರಾಮಾಯಣದ ಬ್ಯಾಲೆ

## ವಿವಿಧ ನಾಗರೀಕತೆಗಳು ಹಾಗೂ ಸಂಸ್ಕೃತಿಯ ಮೇಲೆ ರಾಮಾಯಣದ ಪ್ರಭಾವ

ಕೇವಲ ಭಾರತವರ್ಷ್ಟೇ ಅಲ್ಲ, ಜಗತ್ತಿನ ಅನೇಕ ದೇಶಗಳ ಸಾಹಿತ್ಯ, ಸಂಸ್ಕೃತಿ ಮತ್ತು ಮತಾಚರಣೆಯ ಮೇಲೆ ರಾಮಾಯಣ ತನ್ನ ಪ್ರಭಾವವನ್ನು ಬೀರಿದೆ. ರಾಮಾಯಣವು ಭಾರತದಲ್ಲಿ ಹುಟ್ಟಿದ್ದರೂ, ಈಗದು ಇಡೀ ಪ್ರಪಂಚಕ್ಕೆ ಸೇರಿದೆ. ಅದೀಗ ಜಗತ್ತಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಅಧ್ಯಾತ್ಮಿಕ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಚಿನ್ನದ ಗಣಿಯಾಗಿದೆ. ವಿಶೇಷವಾಗಿ



Il Valmiki Ramayana in Arabo - Museo di Arte Islamica - Doha




ಹಿಕಾಯತ್ ಸೆರಿರಾಮ

ಭಾರತಕ್ಕೆ ಹತ್ತಿರವಿದ್ದು ದ್ವೀಪರಾಷ್ಟ್ರಗಳಾಗಿರುವ ಕಾಂಬೋಡಿಯಾ, ಜಾವ, ಮಲೇಷ್ಯಾ, ಇಂಡೋನೇಷ್ಯಾ, ಫಿಲಿಫೀನ್ಸ್, ವಿಯಟ್ನಾಂ, ಥಾಯ್‌ಲ್ಯಾಂಡ್ ಮುಂತಾದ ದೇಶಗಳಲ್ಲಿ ಅ) ಭಾಷೆ ಮತ್ತು ಸಾಹಿತ್ಯ ಆ) ಕಲೆ ಮತ್ತು ವಾಸ್ತುಶಿಲ್ಪಗಳ ಮೇಲೆ ಬಾರೀ ಪ್ರಭಾವ ಬೀರಿರುವುದನ್ನು ನಾವು ಈಗಾಗಲೇ ಕಂಡಿದ್ದೇವೆ.

ರಾಮಾಯಣವು ಅರೇಬಿಕ್, ಉಜ್ಬೆಕ್, ಇಂಗ್ಲೀಷ್, ಫ್ರೆಂಚ್, ಚೈನೀ, ರಷ್ಯಾ, ಜಪಾನೀ ಹೀಗೆ ಜಗತ್ತಿನ ಅನೇಕ ಭಾಷೆಗಳಿಗೆ ಭಾಷಾಂತರವಾಗಿರುವುದನ್ನು ಕಾಣಬಹುದು. ವಿವಿಧ ಕಾಲಖಂಡದಲ್ಲಿ ಭಾರತದಿಂದ ಹೊರಟ ವರ್ತಕರು, ಪ್ರವಾಸಿಗಳು, ರಾಜತಾಂತ್ರಿಕರ ಕಾರಣದಿಂದ ಇಂದು ರಾಮಾಯಣ ವಿಶ್ವಮಾನ್ಯವಾಗಿದೆ. ಇದೂ ಅಲ್ಲದೆ ಭಾರತದ ವಿವಿಧ ರಾಜಮನೆತನಗಳಲ್ಲಿ ಜೇಷ್ಠಪುತ್ರನಿಗೆ ರಾಜನಾಗುವ ಹಕ್ಕಿದ್ದದರಿಂದ ಉಳಿದ ರಾಜಕುಮಾರರು ತಮ್ಮ ಸ್ವಸಾಮರ್ಥ್ಯದಿಂದ ಅನೇಕ ದ್ವೀಪರಾಷ್ಟ್ರಗಳಲ್ಲಿ ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಂಡದ್ದನ್ನೂ ನಾವು ಕಾಣುತ್ತೇವೆ. ಉದಾಹರಣೆಗೆ ರಾಜಕುಮಾರ ಕಾಂಡಿನ್ಯನು, ಕಾಂಬೋಡಿಯಕ್ಕೆ ತೆರಳಿ 'ಕೌಂಡಿನ್ಯ ಸಾಮ್ರಾಜ್ಯ'ವನ್ನು ಸ್ಥಾಪಿಸಿದ್ದು, ವಿಯಟ್ನಾಂನಲ್ಲಿ 'ಶ್ರೀಮಾರ ಸಾಮ್ರಾಜ್ಯ', ಸುಮಾತ್ರದಲ್ಲಿ 'ಶ್ರೀವಿಜಯ ಸಾಮ್ರಾಜ್ಯ', ಜಾವ ಹಾಗೂ ಬಾಲಿ ದ್ವೀಪಗಳಲ್ಲಿ 'ಶೈಲೇಂದ್ರ ಸಾಮ್ರಾಜ್ಯ' ಸ್ಥಾಪಿಸಿದ್ದು ಇತಿಹಾಸ. ಈ ಸಾಮ್ರಾಜ್ಯಗಳು ಕ್ರಿಶ 5ನೇ ಶತಮಾನದಿಂದ 15ನೇ ಶತಮಾನದವರೆಗೆ ರಾಮಾಯಣದ ಸಂಸ್ಕೃತಿಯನ್ನು ಅಲ್ಲಿ ಹರಡಿದ್ದನ್ನು ನಾವು ಅರಿತಿದ್ದೇವೆ.

ಹೆಚ್ಚು ಕಡಿಮೆ ಜಗತ್ತಿನ ಎಲ್ಲ ಭಾಷೆಗಳಲ್ಲೂ ಸಂಸ್ಕೃತದ ಛಾಯೆಯನ್ನು ಭಾಷಾತಜ್ಞರು ಗುರುತಿಸಿದ್ದಾರೆ. ಅಂತೆಯೇ ಆಯಾ ದೇಶಗಳ ಮೂಲನಿವಾಸಿಗಳು ವಿವಿಧ ಕಾರಣಗಳಿಂದ ತಮ್ಮ ಮತಾಚರಣೆಯನ್ನು ಬದಲಿಸಿದರೂ ತಮ್ಮ ಮೂಲ ನಂಬಿಕೆಯನ್ನು ಉಳಿಸಿಕೊಂಡಿದ್ದನ್ನು ಕಾಣಬಹುದು. ಉದಾಹರಣೆಗೆ ಮಲೇಷ್ಯಾ 15ನೇ ಶತಮಾನದ ನಂತರ ಮುಸ್ಲಿಂ ರಾಷ್ಟ್ರವಾದರೂ ಅಲ್ಲಿನ "ಹಿಕಾಯತ್ ಸೆರಿರಾಮ" (ನಮ್ಮ ರಾಮಾಯಣ) ದಲ್ಲಿ ದಶರಥನನ್ನು ಪ್ರಾಫೆಟ್‌ಆಡಂನ ಮರಿಮೊಮ್ಮಗ ಎಂದೂ, ರಾವಣನಿಗೆ ವಿಶೇಷ ವರಗಳನ್ನು ನೀಡಿದವನು ಬ್ರಹ್ಮನ ಬದಲಿಗೆ "ಅಲ್ಲಾ" ಎಂದೂ ಕರೆಯುತ್ತಾರೆ. ಹೀಗೆ ಅಲ್ಲಿ ಮತಾಚರಣೆ ಬದಲಾದರೂ ಸಂಸ್ಕೃತಿ ಬದಲಾಗಲಿಲ್ಲ.

ಇಂದಾದರೂ ಭಾರತವನ್ನು ಜಗತ್ತಿಗೆ ಜೋಡಿಸಿರುವುದು ಅದರ ಶ್ರೀಮಂತ ಪರಂಪರೆಯೇ. ಜಗತ್ತಿನಾದ್ಯಂತ ಭಾರತದ ಮೂಲ ನಂಬಿಕೆಗಳಿಗೆ, ಮೆಚ್ಚುಗೆ ದೊರೆತು ಅದನ್ನು ತಮ್ಮದಾಗಿ ಮಾಡಿಕೊಳ್ಳುವ ತವಕ ಎದ್ದು ಕಾಣುತ್ತಿದ್ದರೂ, ದುರ್ದೈವದ ಸಂಗತಿ ಎಂದರೆ ನಮ್ಮವರೇ ಅದನ್ನು ಕಡೆಗಣಿಸುತ್ತಿರುವುದು. ಇಂಥ ದುರ್ದೈವಿಗಳಿಗೆ ಆ ಶ್ರೀರಾಮ ಸನ್ಮತಿಯನ್ನು ಕೊಟ್ಟು ಅವರ ಮೌಢ್ಯತೆಯನ್ನು ತೊಲಗಿಸಲಿ ಎಂಬುದೇ ನಮ್ಮ ಪ್ರಾರ್ಥನೆ. ●

# ಶಿಕ್ಷಕರ ದೀಪಸ್ಥಂಭ – ಡಾ. ಎಚ್ಚೆನ್

**ವಿ. ರಾಜು**
**ಕನ್ನಡ ಅಧ್ಯಾಪಕರು**
**ನ್ಯಾಷನಲ್ ಹೈಸ್ಕೂಲ್**
**ಬಸವನಗುಡಿ, ಬೆಂಗಳೂರು–4**



ಹೊಸೂರು ಎಂಬ ಒಂದು ಸಣ್ಣ ಹಳ್ಳಿಯಲ್ಲಿ, ಕಡು ಬಡತನದ ಕುಟುಂಬದಲ್ಲಿ ಹುಟ್ಟಿ ಪ್ರತಿಭೆಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ನಾಡಿನಾದ್ಯಂತ ಜನಪ್ರಿಯರಾಗಿ, ಶಿಕ್ಷಣ ತಜ್ಞರಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ನ್ಯಾಷನಲ್ ಎಜುಕೇಶನ್ ಸೊಸೈಟಿ ಎಂಬ ಪ್ರತಿಷ್ಠಿತ ಸಂಸ್ಥೆಯ ಅಧ್ಯಕ್ಷರಾಗಿ, ಪದ್ಮಭೂಷಣ, ನಾಡೋಜ ಮುಂತಾದ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾದ ಡಾಕ್ಟರ್ ಎಚ್ಚೆನ್ ಅವರ ಜೀವನ ಅತ್ಯಂತ ರೋಚಕ. ತಮ್ಮ ನಿರ್ಭೀತ ವಿಚಾರಧಾರೆಯಿಂದ ನಾಡಿನ ಜನರ ಕಣ್ಮಣಿಯಾದರು. ಕನ್ನಡನಾಡಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಧ್ರುವತಾರೆಯಂತೆ ಕಂಗೊಳಿಸಿದರು. ಸಾಂಸ್ಕೃತಿಕ ವಲಯದಲ್ಲಿ ಅಚ್ಚಳಿಯದ ಹೆಜ್ಜೆಗುರುತುಗಳನ್ನು ಮೂಡಿಸಿದರು. ವೈಜ್ಞಾನಿಕ ಕ್ಷೇತ್ರದಲ್ಲಿ, ವೈಚಾರಿಕ ಕ್ಷೇತ್ರದಲ್ಲಿ ಅಭೂತಪೂರ್ವವಾದ ಜಾಗೃತಿಯನ್ನು ಉಂಟುಮಾಡಿದರು. ಅಂತಹ ಅನರ್ಘ್ಯ ರತ್ನ ಜನಿಸಿ 2020ಕ್ಕೆ ನೂರು ವರ್ಷಗಳು ತುಂಬುತ್ತಿವೆ. ಅವರ ಜೀವನವೇ ಒಂದು ಅದ್ಭುತ ಸಂದೇಶ. ಸಾಮಾನ್ಯರಾಗಿದ್ದವರು ಅಸಾಮಾನ್ಯರಾಗಿ ಬೆಳೆಯಬಹುದು ಎಂಬುದಕ್ಕೆ ಡಾಕ್ಟರ್ ಎಚ್ಚೆನ್ ಒಂದು ಅದ್ಭುತ ಉದಾಹರಣೆ.



ಡಾ. ಎಚ್ಚೆನ್ ಎಂದೇ ಪ್ರಸಿದ್ಧರಾಗಿರುವ ಡಾಕ್ಟರ್ ಹೆಚ್ ನರಸಿಂಹಯ್ಯ ಅವರು ಗೌರಿಬಿದನೂರು ತಾಲ್ಲೂಕಿನ ಹೊಸೂರು ಎಂಬ ಪುಟ್ಟ ಗ್ರಾಮದಲ್ಲಿ 1920 ಜೂನ್ 6, ಭಾನುವಾರದಂದು ಜನಿಸಿದರು. ಅವರ ತಾಯಿ ಶ್ರೀಮತಿ ವೆಂಕಟಮ್ಮ. ಅವರಿಗೆ ಓದು ಬರಹ ಬಾರದು. ಕೂಲಿ ಮಾಡುತ್ತಾ ಜೀವನ ಸಾಗಿಸುತ್ತಿದ್ದ ಮುಗ್ದ ಹೆಂಗಸು ಅವರು. ಅವರ ತಂದೆ ಶ್ರೀ ಹನುಮಂತಪ್ಪ ಅವರು ಕೂಲಿ ಮಠದ ಹಳ್ಳಿಮೇಷ್ಟ್ರು . ಕನ್ನಡದ ಮೇಲೆ ಹಿಡಿತ ಇದ್ದವರು. ನರಸಿಂಹಯ್ಯನವರು ಹೊಸೂರಿನ ಪ್ರಾಥಮಿಕ ಶಾಲೆಯಲ್ಲಿ ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಹೊಸೂರಿನ ಕನ್ನಡ ಮೇಷ್ಟ್ರು ಶ್ರೀ ವೆಂಕಟಾಚಲಯ್ಯ ಹಾಗೂ ಇಂಗ್ಲಿಷ್ ಮೇಷ್ಟ್ರು ಶ್ರೀ ಎಮ್.ಎಸ್ ನಾರಾಯಣ ರಾವ್ ಅವರು ನರಸಿಂಹಯ್ಯ ಅವರ ಮೇಲೆ ಪ್ರಭಾವ ಬೀರಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ನರಸಿಂಹಯ್ಯನವರು ಹೊಸೂರಿನಿಂದ ಬೆಂಗಳೂರಿನವರೆಗೂ ನಡೆದುಬಂದರು. ನ್ಯಾಷನಲ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿ ಸೇರಿದರು. 1935ರಿಂದ 2005ರವರೆಗೂ ಸುಮಾರು 70 ವರ್ಷಗಳ ಕಾಲ ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿನಿಲಯದಲ್ಲೇ ಇದ್ದರು.

1936 ಜೂನ್ 11ರಂದು ನರಸಿಂಹಯ್ಯನವರ ಬದುಕಿನಲ್ಲಿ ಒಂದು ಅಪೂರ್ವ ಘಟನೆ ನಡೆಯಿತು. ಬೆಂಗಳೂರಿನ ಕುಮಾರ ಕೃಪ ಅತಿಥಿಗೃಹದಲ್ಲಿ ಮಹಾತ್ಮಗಾಂಧಿ ಅವರನ್ನು ಭೇಟಿಮಾಡುವ ಒಂದು ಸುಸಂದರ್ಭ ಒದಗಿಬಂದಿತ್ತು. ವಿದ್ಯಾರ್ಥಿಯಾಗಿದ್ದ ನರಸಿಂಹಯ್ಯನವರ ಭುಜದ ಮೇಲೆ ಕೈಹಾಕಿ ನಿನ್ನ ಹೆಸರೇನು ಎಂದು ಮಹಾತ್ಮ ಗಾಂಧೀಜಿಯವರು ಮಾತನಾಡಿಸಿದ ಕ್ಷಣ ಅಪೂರ್ವ, ಆಕಸ್ಮಿಕ ಹಾಗೂ ಅತ್ಯಾಶ್ಚರ್ಯಕರ. ಮರುದಿನ ಹಿಂದೂ ಪತ್ರಿಕೆಯಲ್ಲಿ ಆ ಭಾವಚಿತ್ರ ಮುದ್ರಿತವಾಗಿತ್ತು. ಅದನ್ನು ಜೋಪಾನವಾಗಿ ನರಸಿಂಹಯ್ಯ ಅವರು ತಮ್ಮ ಪುಸ್ತಕದಲ್ಲಿ ಇಟ್ಟುಕೊಂಡರು. ಆದರೆ ಕೆಲವು ವರ್ಷಗಳ ನಂತರ ಅದು ಕಳೆದುಹೋಯಿತು. ಮತ್ತೆ 1943 ರಲ್ಲಿ ಮದ್ರಾಸಿನ ಹಿಂದೂ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆದು ಆ ಭಾವಚಿತ್ರವನ್ನು ತರಿಸಿಕೊಂಡು ಜೋಪಾನವಾಗಿ ತಮ್ಮ ಬಳಿ ಇಟ್ಟುಕೊಂಡರು.

ನರಸಿಂಹಯ್ಯನವರು ನ್ಯಾಷನಲ್ ಹೈಸ್ಕೂಲಿನಲ್ಲಿ ಓದಿದ ಮೂರು ವರ್ಷಗಳ ಕಾಲದಲ್ಲಿ ಶಾಲೆಯ ಬಡ ಹುಡುಗರ ವಿದ್ಯಾರ್ಥಿನಿಲಯದಲ್ಲಿಯೇ ವಾಸ್ತವ್ಯ ಹೂಡಿದ್ದರು. ವಿದ್ಯಾಭ್ಯಾಸ ನಡೆಯುತ್ತಿತ್ತು, ಮಲಗಲು ಹಾಸಿಗೆ ಕೂಡ ಇರಲಿಲ್ಲ. ಚಾಪೆ ಅಥವಾ ಗೋಣಿ ಚೀಲಗಳೇ ಅವರಿಗೆ ಹಾಸಿಗೆ. ನಮ್ಮಂತಹ ಬಡವರಿಗೆ ಕೇವಲ ವಿದ್ಯಾಭ್ಯಾಸ ಒಂದೇ ನಮ್ಮನ್ನು ಎತ್ತರಕ್ಕೆ ಏರಿಸಬಲ್ಲದು ಎಂದು ನಂಬಿದ್ದರು. ನರಸಿಂಹಯ್ಯನವರು ಸದಾ ಓದಿನಲ್ಲಿ ಮುಂದು.

ನರಸಿಂಹಯ್ಯನವರು ಅಪ್ಪಟ ದೇಶಭಕ್ತರಾಗಿದ್ದರು ಅನೇಕ ಪ್ರಸಂಗಗಳಲ್ಲಿ ಅವರು ದೇಶಕ್ಕಾಗಿ ದುಡಿದರು. ಕ್ವಿಟ್ ಇಂಡಿಯಾ ಚಳುವಳಿ ಮತ್ತು ಮೈಸೂರು ಚಲೋ ಚಳುವಳಿಯ ಸಂದರ್ಭದಲ್ಲಿ ವಿದ್ಯಾಭ್ಯಾಸವನ್ನು ತೊರೆದು ದೇಶಕ್ಕಾಗಿ ದುಡಿದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಇಂಕಿಲಾಬ್ ಎಂಬ ದಿನಪತ್ರಿಕೆಯನ್ನು ಸ್ಥಾಪಿಸಿದರು. 1947 ರ ಸೆಪ್ಟೆಂಬರ್ 5ರಂದು ಪತ್ರಿಕೆಯ ಮೊದಲ ಸಂಚಿಕೆ ಹೊರಬಂತು. ಮೊದಲದಿನ ಸಾವಿರ ಪ್ರತಿಗಳನ್ನು ಮುದ್ರಿಸಿ ಉಚಿತವಾಗಿ ಹಂಚಿದರು.

ನರಸಿಂಹಯ್ಯನವರು 1946 ರಲ್ಲಿ ನ್ಯಾಷನಲ್ ಕಾಲೇಜಿನ ಅಧ್ಯಾಪಕರಾಗಿ ನೇಮಕಗೊಂಡರು. ಅಂದಿನಿಂದ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡುತ್ತಲೇ ಬಂದರು.

1957 ರಲ್ಲಿ ನರಸಿಂಹಯ್ಯನವರು ಅಮೇರಿಕಾದ ಒಹೈಓ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆಯಲು ಹೋದರು. ಅವರ ವಿದ್ಯಾಭ್ಯಾಸದ ಖರ್ಚಿಗೆ ಫುಲ್ ಬ್ರೈಟ್ ಟ್ರಾವೆಲ್ಸ್ ಗ್ರಾಂಟ್ ಸಂಸ್ಥೆ ಸಹಾಯ ಮಾಡಿತು. ಆ ಸಮಯದಲ್ಲಿ ನರಸಿಂಹಯ್ಯನವರ ಊಟ ಬರೀ ಉಪ್ಪಿಟ್ಟು. ಅಮೆರಿಕದಿಂದ ಹಿಂದಿರುಗಿದ ನಂತರ ಡಾಕ್ಟರ್ ಎಚ್ ನರಸಿಂಹಯ್ಯನವರು ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾದರು. ಆ ಸಂದರ್ಭದಲ್ಲಿ ನರಸಿಂಹಯ್ಯನವರು ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾಕ್ಷೇತ್ರದಲ್ಲಿ ನಡೆಸಿದ ಪ್ರಯೋಗ ಅಭೂತಪೂರ್ವವಾದದ್ದು. ಹಿಡಿದಿದ್ದನ್ನು ಸಾಧಿಸಬೇಕು ಎನ್ನುವ

**ಪುಟ 26 ಕ್ಕೆ ➢**

➢ ಪುಟ 25 ರಿಂದ.....

ಒಳ್ಳೆಯ ಹಠ ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು. ನ್ಯಾಷನಲ್ ಕಾಲೇಜ್ ಅಧ್ಯಾಪಕರಾದ ಮೇಲೆ ಕಾಲೇಜನ್ನು ಬೆಳೆಸುವ ಬಗ್ಗೆ ಅನೇಕ ಕನಸುಗಳನ್ನು ಕಂಡಿದ್ದರು. ಅಮೆರಿಕದಲ್ಲಿ ಮೂರು ವರ್ಷ ವಿದ್ಯಾರ್ಥಿಯಾಗಿದ್ದಾಗ ಆ ಕನಸುಗಳು ಇನ್ನೂ ಹೆಚ್ಚಾದವು. ಕೆಲವು ಬದಲಾವಣೆಗಳನ್ನು ಪಡೆದವು. ಕನಸುಗಳು ಪರಿಣಾಮಕಾರಿಯಾಗಿ ನನಸಾಗಬೇಕಾದರೆ ಒಂದು ಸ್ಥಾನ ಮುಖ್ಯ. ಅವರಿಗೆ ಎಲ್ಲ ಕೆಲಸಗಳನ್ನು, ಕನಸುಗಳನ್ನು ಕಾರ್ಯಗತ ಮಾಡಲು ಪ್ರಿನ್ಸಿಪಾಲ್ ಹುದ್ದೆ ಅವಕಾಶ ನೀಡಿತು. ಅಮೆರಿಕದಲ್ಲಿದ್ದಾಗ ಅಲ್ಲಿಯ ಶಿಕ್ಷಣ ಪದ್ಧತಿ, ವಿದ್ಯಾರ್ಥಿಗಳ, ಅಧ್ಯಾಪಕರ ಮತ್ತು ಜನರ ಸ್ವಾಭಿಮಾನ, ಪ್ರಾಮಾಣಿಕತೆ ಮತ್ತು ಅವರು ಕಷ್ಟಪಟ್ಟು ಕೆಲಸ ಮಾಡುವ ಸ್ವಭಾವ ನರಸಿಂಹಯ್ಯನವರ ಮೇಲೆ ಹೆಚ್ಚಿನ ಪ್ರಭಾವ ಬೀರಿದವು. ಅವುಗಳಲ್ಲಿ ಕೆಲವು ಪ್ರಮುಖವಾದ ಅಂಶಗಳನ್ನು ನ್ಯಾಷನಲ್ ಕಾಲೇಜಿನಲ್ಲಿ ಅಳವಡಿಸಿದರು.

ಸಾಮಾನ್ಯವಾಗಿ ಎಲ್ಲ ಶಾಲಾ ಕಾಲೇಜುಗಳಲ್ಲಿ ಆಫೀಸುಗಳಲ್ಲಿ ಅಧ್ಯಾಪಕರಿಗೆ ಕೆಲಸಗಾರರಿಗೆ ಪ್ರತಿನಿತ್ಯ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವ ಪದ್ಧತಿಯಿದೆ. ವಿದ್ಯಾರ್ಥಿಗಳಿಗೆ ಹಾಜರಾತಿ ಬೇಕಾಗುತ್ತದೆ. ಆದರೆ ಅಧ್ಯಾಪಕರು ಶಾಲಾ–ಕಾಲೇಜುಗಳಲ್ಲಿ ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಮಾಡುವುದು ಅಧ್ಯಾಪಕರ ಸ್ವಾಭಿಮಾನಕ್ಕೆ ಕುಂದು ಉಂಟುಮಾಡುತ್ತದೆ, ಇದು ಅಪನಂಬಿಕೆಯ ಚಿಹ್ನೆಯು ಆಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಈ ವಿಷಯವನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ, ಅಧ್ಯಾಪಕರು ಪ್ರತಿನಿತ್ಯವೂ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕುವುದನ್ನು ತೆಗೆದುಹಾಕಬೇಕೆಂದು ನಿಶ್ಚಯಿಸಿದರು. ಇದನ್ನು ಎಲ್ಲರೂ ಮುಕ್ತಮನಸ್ಸಿನಿಂದ ಮೆಚ್ಚಿದರು.

ಶೈಕ್ಷಣಿಕ ಮತ್ತು ಪಠ್ಯೇತರ ಕಾರ್ಯಕ್ರಮಗಳಿಗೆ ವಿಶೇಷವಾದ ಆದ್ಯತೆಯನ್ನು ನೀಡಿದರು. ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು, ಸಂಜೆ ತರಗತಿಗಳನ್ನು ಆಯೋಜಿಸಿದರು. ಇದಕ್ಕೆಲ್ಲ ಅಧ್ಯಾಪಕರ ಸಹಕಾರವೂ ದೊರೆಯಿತು. ಡಾ. ಎಚ್. ನರಸಿಂಹಯ್ಯನವರು ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾಗಿದ್ದಾಗ ರ್‍ಯಾಂಕ್ ಗಳ ಸುರಿಮಳೆ ಆಗುತ್ತಿತ್ತು. 10ರಲ್ಲಿ 7–8 ರಾಂಕ್ ಗಳು ನ್ಯಾಷನಲ್ ಕಾಲೇಜಿಗೆ ಬರುವುದು ಮಾಮೂಲಿಯಾಗಿತ್ತು. ಹಾಗಾಗಿ ನ್ಯಾಷನಲ್ ಕಾಲೇಜಿಗೆ ರಾಂಕ್ ಕಾಲೇಜು ಎಂದು ಕರೆಯಲಾಗಿತ್ತು. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳನ್ನು ಗಮನಿಸಲು ಶಿಕ್ಷಕರು ಕೊಠಡಿ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುವುದು ಸರ್ವೇಸಾಮಾನ್ಯ. ನರಸಿಂಹಯ್ಯನವರು ಉಸ್ತುವಾರಿ ಇಲ್ಲದ ಪರೀಕ್ಷೆಗಳನ್ನು ನಡೆಸಲು ಸಿದ್ಧತೆ ನಡೆಸಿದರು. ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರು ಮೇಲುಸ್ತುವಾರಿ ಮಾಡುವ ಪದ್ಧತಿಯನ್ನು ತೆಗೆದುಹಾಕಿದರು. ಇದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಪತ್ರಿಕಾ ವರದಿಗಾರರು ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಖುದ್ದಾಗಿ ಆಗಮಿಸಿ ವಿದ್ಯಾರ್ಥಿಗಳ ಶಿಸ್ತನ್ನು ಗಮನಿಸಿ ಪತ್ರಿಕೆಗಳಲ್ಲಿ ಸುದ್ದಿ ಮಾಡಿದರು.

ನ್ಯಾಷನಲ್ ಕಾಲೇಜನ್ನು ನಾಟಕದ ಕಾಲೇಜು ಎಂದು ಕರೆಯುತ್ತಾರೆ. ಅಂತರ ವರ್ಗೀಯ ನಾಟಕ ಸ್ಪರ್ಧೆಗಳನ್ನು ಪ್ರಾರಂಭಿಸಿದರು. ಕ್ರೀಡೆಗಳಿಗೂ ಅಷ್ಟೇ ಮಹತ್ವವನ್ನು ನೀಡಿದರು. ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರಾದ ಪ್ರಸನ್ನ ಇ ಎ. ಎಸ್ ಎಪ್ ಪ್ರಸನ್ನ, ಬಿ. ಎಸ್. ಚಂದ್ರಶೇಖರ್, ಅನಿಲ್ ಕುಂಬ್ಳೆ ಮುಂತಾದವರು ಈ ಕಾಲೇಜಿನ ವಿದ್ಯಾರ್ಥಿಗಳು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. ನರಸಿಂಹಯ್ಯನವರು ಬೆಂಗಳೂರು ಸೈನ್ಸ್ ಫೋರಂ ಅನ್ನು ಪ್ರಾರಂಭಿಸಿದರು. ಅದರ ಮೂಲಕ ವಿಜ್ಞಾನ–ತಂತ್ರಜ್ಞಾನ ವಿಚಾರಗಳಿಗೆ ಸಂಬಂಧಿಸಿದ ಉಪನ್ಯಾಸಗಳನ್ನು ಏರ್ಪಡಿಸಿ ವಿಜ್ಞಾನವನ್ನು ಜನಪ್ರಿಯಗೊಳಿಸಿದರು. ಹಾಗೆಯೇ ಬೆಂಗಳೂರು ಸೋಶಿಯಲ್ ಸೈನ್ಸ್ ಫೋರಂ ಅನ್ನು ಸ್ಥಾಪಿಸಿದರು.

ಆರು ವರ್ಷಗಳ ನಂತರ ಮತ್ತೆ ಅಮೇರಿಕಾಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಎರಡನೇ ಭೇಟಿ ನೀಡಿದರು.

1972 ರಲ್ಲಿ ನರಸಿಂಹಯ್ಯನವರು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕಗೊಂಡರು ಅವರ ಮಟ್ಟಿಗೆ ಅನಿರೀಕ್ಷಿತವಾಗಿತ್ತು, ಆದರೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅವರ ಸೇವೆಯ ನಿಷ್ಠೆಯ ಲಾಭ ದೊರೆಯಿತು. ಆ ಸಂದರ್ಭದಲ್ಲಿ ನರಸಿಂಹಯ್ಯನವರು ಬೆಂಗಳೂರು ವಿಶ್ವವಿದ್ಯಾನಿಲಯದ ಕೀರ್ತಿಯನ್ನು ಉತ್ತುಂಗಕ್ಕೆ ಏರಿಸಿದರು.

ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ ಸಂಸ್ಥೆಯ ಕೀರ್ತಿಯು ನರಸಿಂಹಯ್ಯ ಅವರ ಮಾರ್ಗದರ್ಶನದಲ್ಲಿ ನಾಡಿನಾದ್ಯಂತ ಪಸರಿಸಿತು. ಗ್ರಾಮೀಣ ಪ್ರದೇಶದಲ್ಲಿಯೂ ಉತ್ತಮವಾದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬೇಕು ಎಂಬುದು ಅವರ ಇಚ್ಛೆಯಾಗಿತ್ತು. ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ಮಾತೃಸಂಸ್ಥೆ. ಅದಾದ ಬಳಿಕ ತಮ್ಮ ಹುಟ್ಟೂರಾದ ಹೊಸೂರಿನಲ್ಲಿ ಪ್ರೌಢ ಶಾಲೆಯನ್ನು ಸ್ಥಾಪಿಸಿದರು. ಯಲ್ದೂರು, ಮುಡಿಯನೂರುಗಳಲ್ಲೂ ಸಹ ಪ್ರೌಢ ಶಾಲೆಯನ್ನು ಸ್ಥಾಪಿಸಿದರು. ಹೀಗೆ ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ ಸಂಸ್ಥೆಯ ಆಶ್ರಯದಲ್ಲಿ 11 ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಬಂದರು. ಅವುಗಳಲ್ಲಿ ನಾಲ್ಕು ನ್ಯಾಷನಲ್ ಕಾಲೇಜುಗಳು, ಐದು ನ್ಯಾಷನಲ್ ಹೈಸ್ಕೂಲ್ ಗಳು ಮತ್ತು ಎರಡು ನ್ಯಾಷನಲ್ ಹೈಯರ್ ಪ್ರೈಮರಿ ಶಾಲೆಗಳು ಸೇರಿವೆ. ಈ ವಿದ್ಯಾಸಂಸ್ಥೆಗಳಲ್ಲಿ ಪ್ರತಿ ವರ್ಷ ಸಹಸ್ರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ನ್ಯಾಷನಲ್ ಎಜುಕೇಶನ್ ಸೊಸೈಟಿಯ ಯಾವ ವಿದ್ಯಾಸಂಸ್ಥೆಯು ಡೊನೇಶನ್ ತೆಗೆದುಕೊಳ್ಳುವುದಿಲ್ಲ. ಇಲ್ಲಿ ವಿದ್ಯಾಭ್ಯಾಸ ಜೊತೆಜೊತೆಗೆ ನಾಟಕ, ಕಲೆ, ಆಟಗಳಲ್ಲೂ ಕೂಡ ವಿದ್ಯಾರ್ಥಿಗಳನ್ನು ತೊಡಗಿಸಿ ರಾಷ್ಟ್ರದ ಅತ್ಯುತ್ತಮ ಪೌರರನ್ನಾಗಿಸುವ ಧ್ಯೇಯವನ್ನು ಈ ಸಂಸ್ಥೆ ಹೊಂದಿದೆ. ನರಸಿಂಹಯ್ಯನವರು 1980 ರಲ್ಲಿ ಕರ್ನಾಟಕ ರಾಜ್ಯ ವಿಧಾನಪರಿಷತ್ತಿಗೆ ನಾಮಕರಣಗೊಂಡರು. ಯಾವ ಅಧಿಕಾರ ಬಂದರು ನರಸಿಂಹಯ್ಯನವರು ಸರಳ ಜೀವನವನ್ನೇ ನಡೆಸಿದರು. ನರಸಿಂಹಯ್ಯ ಅವರು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ಅಂದರೆ ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ಖಾದಿ ಧರಿಸುವ ವ್ರತ ತೊಟ್ಟರು. ಅಂದಿನಿಂದ ತನ್ನ ಬದುಕಿನ ಉದ್ದಕ್ಕೂ ಈ ವ್ರತವನ್ನು ಮುರಿಯಲಿಲ್ಲ. ಬಿಳಿಬಣ್ಣದ ಖಾದಿ ಪಂಚೆ. ಖಾದಿ ಶರ್ಟು, ಬಿಳಿ ಖಾದಿ ಟೋಪಿ, ಕಾಲಿಗೆ ಚಪ್ಪಲಿ ಅವರ ಉಡುಪು.

ನರಸಿಂಹಯ್ಯನವರು ಮಿತ ಆಹಾರಿ, ಸಸ್ಯಹಾರಿ ಕಾಫಿ ಟೀ ಸೇವಿಸುತ್ತಿರಲಿಲ್ಲ. ಅವರು ವಾಸಿಸಿದ್ದು ನ್ಯಾಷನಲ್ ಕಾಲೇಜ್ ಹಾಸ್ಟೆಲಿನ ಒಂದು ಕಿರು ಕೋಣೆಯಲ್ಲಿ. ಹತ್ತು/ಹನ್ನೆರಡು ಅಡಿ ಕೊಠಡಿಗೆ ಬೀಗವಿಲ್ಲ. ಆಸ್ತಿ ಆತ್ಮಕಥೆ ಹೋರಾಟದ ಹಾದಿ ಪುಸ್ತಕದಲ್ಲಿ ಇವೆಲ್ಲವನ್ನೂ ಸಮಗ್ರವಾಗಿ ತಿಳಿಸಿದ್ದಾರೆ.

ನರಸಿಂಹಯ್ಯನವರು ಶಿಕ್ಷಣಕ್ಷೇತ್ರ, ಸಾಮಾಜಿಕ ಕ್ಷೇತ್ರ ಎಲ್ಲಕಡೆಯೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಅತ್ಯಂತ ಸರಳ ಸತ್ವವಂತ ಸೌಮ್ಯ ಬದುಕನ್ನು ಬಾಳಿ ತೋರಿಸಿದರು. ದೊಡ್ಡ ವಿದ್ಯಾಸಂಸ್ಥೆಯ ಮುಖ್ಯಸ್ಥರಾದರೂ, ದೊಡ್ಡ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರೂ, ಸರ್ಕಾರಿ ಸ್ಥಾನಮಾನಗಳನ್ನು ಗಳಿಸಿದರೂ ಎಂದಿಗೂ ಅವರು ಸರಳತೆಯನ್ನು ಬಿಡಲಿಲ್ಲ. ಮೂಢನಂಬಿಕೆಗಳ ವಿರುದ್ಧ ಅವಿರತವಾಗಿ ದನಿಯೆತ್ತಿದರು. ಮಾತು, ನಡವಳಿಕೆ, ಜೀವನದಲ್ಲಿ ಮಹಾತ್ಮ ಗಾಂಧೀಜಿ ಅವರನ್ನು ಅನುಸರಿಸಿದರು. ನರಸಿಂಹಯ್ಯನವರು ಜನಿಸಿ ನೂರು ವರ್ಷಗಳಾದವು. ಪದ್ಮಭೂಷಣ ನಾಡೋಜ ಡಾಕ್ಟರ್ ಎಚ್ ನರಸಿಂಹಯ್ಯನವರ ಜೀವನಚರಿತ್ರೆಯನ್ನು ಅಧ್ಯಯನ ಮಾಡೋಣ. ಶಿಕ್ಷಣ ಕ್ಷೇತ್ರದಲ್ಲಿ ಅವರು ನೀಡಿದ ಕೊಡುಗೆಯನ್ನು ಸ್ಮರಿಸೋಣ.

●

# ಬೆಂಗಳೂರು ವಿಭಾಗ ಹಂತದ ಬೈಠಕ್

2-5-2020 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ವಿಭಾಗದ ಜೂಮ್ ವೀಡಿಯೋ ಕಾನ್ಫರೆನ್ಸ್‌ನ್ನು ಬೆಂಗಳೂರು ವಿಭಾಗ ಪ್ರಮುಖರ ಮುಖ್ಯ ಕಾರ್ಯದ ನಿಮಿತ್ತ ಅವರ ಅನುಪಸ್ಥಿತಿಯಲ್ಲಿ ರಾಜ್ಯ ಕೋಶಾಧ್ಯಕ್ಷರಾದ ಶ್ರೀ ಜೆ.ಎಂ ಜೋಷಿಯವರು ಪ್ರಾರಂಭಿಸಿದರು.

ವಿಭಾಗದ ಬೆಂಗಳೂರು ಉತ್ತರ ಜಿಲ್ಲೆ, ದಕ್ಷಿಣ ಜಿಲ್ಲೆ, ರಾಮನಗರ ಜಿಲ್ಲೆಗಳಿಂದ ಜಿಲ್ಲಾ ಅಧ್ಯಕ್ಷರುಗಳು ಮತ್ತು ತಂಡದವರು, ತಾಲ್ಲೂಕು ಅಧ್ಯಕ್ಷರುಗಳು ಮತ್ತು ತಂಡದವರು ಸೇರಿ ಸುಮಾರು 30 ಕಾರ್ಯಕರ್ತರು ವಿಡಿಯೋ ಕಲಾಪದಲ್ಲಿ ಭಾಗವಹಿಸಿದ್ದರು. ಪ್ರಾರ್ಥನೆಯನ್ನು ಶ್ರೀ ನಾರಾಯಣ ಭಟ್ಟರು ಪ್ರಾರಂಭಿಸಿ ಎಲ್ಲರೂ ದನಿಗೂಡಿಸಿದರು. ನಂತರದಲ್ಲಿ ಜಿಲ್ಲಾವಾರು ಕಾರ್ಯಕರ್ತರು ತಮ್ಮ ಪರಿಚಯವನ್ನು ಮಾಡಿಕೊಂಡರು.

ಜಿಲ್ಲಾವಾರು ಸಂಘದ ವರದಿಗಳನ್ನು ಬೆಂಗಳೂರು ದಕ್ಷಿಣದಿಂದ ಅಧ್ಯಕ್ಷರಾದ ಶ್ರೀ ಸುರೇಂದ್ರರವರು ತಮ್ಮ ಜಿಲ್ಲೆಯಲ್ಲಿ ಲಾಕ್‌ಡೌನ್ ಆದ ಸಂದರ್ಭದಲ್ಲಿ ಕೆಲವು ಖಾಸಗಿ ಶಾಲೆಗಳ ಶಿಕ್ಷಕರು ಹಾಗೂ ಇತರೆ ಸಿಬ್ಬಂದಿಗಳಿಗೆ ಪಡಿತರ ವಿತರಿಸುವ ಮೂಲಕ ನೆರವನ್ನು ನೀಡಿದ ವಿಷಯ ತಿಳಿಸಿದರು. ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪರವರು ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪೋನ್‌ಇನ್ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ತಿಳಿಸಿದರು. ರಾಮನಗರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಜಯಣ್ಣರವರು ಆನ್‌ಲೈನ್ ಮುಖಾಂತರ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪರೀಕ್ಷೆ ಮತ್ತು ಸ್ಟಡಿ ಮೆಟೀರಿಯಲ್ ಪೂರೈಸಿದ ಬಗ್ಗೆ ಹಾಗೂ ಕೋವಿಡ್-19 ರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಧನಸಹಾಯ ಮಾಡಿದ ಬಗ್ಗೆ ತಿಳಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗಂಗಾಧರಾಚಾರಿ.ಎ ರವರು ಬೈಠಕ್‌ನ ಮೂಲ ಉದ್ದೇಶ, ಮುಂದಿನ ದಿನಗಳಲ್ಲಿ ತಾಲ್ಲೂಕು ಅಥವಾ ವಲಯಗಳಲ್ಲಿ ಸಕ್ರಿಯರಾಗಿರುವ ಕಾರ್ಯಕರ್ತರನ್ನು ಗುರ್ತಿಸಿ ಸಕ್ರಿಯವಾಗಿ ತೊಡಗಿಸುವ ಬಗ್ಗೆ ಹಾಗೂ ಹೆಚ್ಚು ಸದಸ್ಯತ್ವನ್ನು ಮಾಡುವ ಬಗ್ಗೆ ತಿಳಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ರವರು ಈಗಾಗಲೇ ಎಲ್ಲಾ ಜಿಲ್ಲೆಗಳ ಪ್ರಮುಖ ಕಾರ್ಯಕರ್ತರಿಗೆ ಕಳುಹಿಸಿರುವ ನಮೂನೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ತಾಲ್ಲೂಕು ಘಟಕಗಳ ಮಾಹಿತಿಯನ್ನು ತುಂಬಿ ಕಳುಹಿಸುವಂತೆ ಮನವಿ ಮಾಡಿ ಪೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಸಂಪನ್ಮೂಲ ಶಿಕ್ಷಕರಿಗೆ ರಾಜ್ಯ ಸಂಘದ ವತಿಯಿಂದ ಅಭಿನಂದನಾ ಪತ್ರ ಕಳುಹಿಸುವ ಬಗ್ಗೆ ತಿಳಿಸಿದರು.

ರಾಜ್ಯ ಮಹಿಳಾ ಪ್ರಮುಖರೂ ಹಾಗೂ ಶಿಕ್ಷಕ ಸಮಾಚಾರದ ಪ್ರಮುಖರೂ ಆದ ಶ್ರೀಮತಿ ಮಮತಾ ಡಿ.ಕೆ ರವರು ಲಾಕ್‌ಡೌನ್ ಸಂದರ್ಭದಲ್ಲಿ ಶಿಕ್ಷಕ ಸಮಾಚಾರದ ಮುದ್ರಣ ಮಾಡಲು ಸಾಧ್ಯವಾಗಿಲ್ಲ ಆದರೆ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಮಹಿಳಾ ಪ್ರಮುಖರಾದ ಶ್ರೀಮತಿ ವಾಸುಕಿಯವರು ಮಹಿಳಾ ವಿಭಾಗದ ಬೈಠಕ್ ಬಗ್ಗೆ ತಿಳಿಸುತ್ತಾ ಎಲ್ಲಾ ಜಿಲ್ಲೆಗಳ ಪ್ರಮುಖರಿಗೆ ಆನ್‌ಲೈನ್ ಬೈಠಕ್ ಆಯೋಜಿಸಿರುವ ಬಗ್ಗೆ ತಿಳಿಸಿದರು.

ಎಬಿಆರ್‌ಎಸ್‌ಎಂ ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾರವರು ವಿಡಿಯೋ ಕಾಲ್ ಮುಖಾಂತರ ಸಂಘಟನೆಯ ಅಭಿವೃದ್ಧಿಗಾಗಿ ಎಲ್ಲರೂ ಆನ್‌ಲೈನ್‌ನಲ್ಲಿ ಸೇರಬೇಕಾದ ಅನಿವಾರ್ಯತೆ ಬಗ್ಗೆ ತಿಳಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲ ಕಾರ್ಯಕರ್ತರು ಯೋಗ ಮತ್ತು ಆಯುರ್ವೇದದ ಮೂಲಕ ಆರೋಗ್ಯ ವೃದ್ಧಿಸಿಕೊಳ್ಳುವ ಬಗ್ಗೆ ದೂರದರ್ಶನದಲ್ಲಿ ಕೆಲವು ಸುದ್ದಿಗಳಿಗೆ ಮೀಸಲಾಗಿದೆ ರಾಮಾಯಣ, ಮಹಾಭಾರತದಂತಹ ಸಂಸ್ಕಾರ ತರುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವ ಬಗ್ಗೆ ತಿಳಿಸಿದರು.

ರಾಜ್ಯ ಕಾರ್ಯಾಲಯದ ಪ್ರಮುಖರಾದ ಶ್ರೀ ಜಿ.ಎಸ್ ಕೃಷ್ಣಮೂರ್ತಿರವರು ಲಾಕ್‌ಡೌನ್ ಸಂದರ್ಭದಲ್ಲಿ ಆನ್‌ಲೈನ್ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲಾ ಕಾರ್ಯಕರ್ತರಿಗೆ ಅಭಿನಂದಿನೆ ಸಲ್ಲಿಸಿದರು. ಶ್ರೀ ಚಿದಾನಂದ ಪಾಟೀಲರು ಈ ರೀತಿಯ ಜಿಲ್ಲಾ ಮಟ್ಟದ ಬೈಠಕ್‌ಗಳನ್ನು ಆಯೋಜಿಸಬೇಕೆಂದು ತಿಳಿಸುತ್ತಾ ಎಲ್ಲರಿಗೂ ವಂದಿಸಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ●

# 'ಮೇ ಸಂಚಿಕೆಯ' ಬಗ್ಗೆ ಓದುಗರ ಅನಿಸಿಕೆ

'ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ/ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ' ಎಂದು ವರಕವಿ ಕುಮಾರವ್ಯಾಸ ತಾನು ಮಹಾಭಾರತವನ್ನೇ ಕಾವ್ಯರಚನೆಗೆ ಆಯ್ದುಕೊಂಡಿದ್ದಕ್ಕೆ ಕಾರಣವನ್ನು ಹೇಳಿದ್ದಾನೆ. ರಾಮಾಯಣದ ವೈಶಿಷ್ಟ್ಯವೇ ಅದು. ಆದಿಕವಿ ವಾಲ್ಮೀಕಿ ಮಹರ್ಷಿಗಳ ನಂತರ ಅದೆಷ್ಟು ಕವಿಗಳು, ವಿದ್ವಾಂಸರು, ಮಹಾಕವಿಗಳೂ ಸೇರಿದಂತೆ ನೂರಾರು ಮಂದಿ ದೇಶದಾದ್ಯಂತ ರಾಮಚರಿತೆಯನ್ನು ತಮ್ಮ ಸಾಹಿತ್ಯರಚನೆಯ ವಸ್ತುವನ್ನಾಗಿ ತೆಗೆದುಕೊಂಡು ಧನ್ಯರಾಗಿದ್ದಾರೆ.

ಅಲ್ಲಿ ಬಿಂಬಿಸಿರುವ ಎಲ್ಲ ಬಗೆಯ ಮೌಲ್ಯಗಳು, ಎಲ್ಲ ಪಾತ್ರಗಳ, ಘಟನೆಗಳ, ಭೌಗೋಳಿಕ ಅಂಶಗಳ ಮೂಲಕ ವ್ಯಕ್ತವಾಗಿರುವಷ್ಟು ವಿವರವಾಗಿ ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ಶ್ರೀರಾಮನ, ಸೀತಾದೇವಿಯ, ಭರತನ, ಲಕ್ಷ್ಮಣನ, ಊರ್ಮಿಳೆಯ ಪಾತ್ರಗಳಂತೂ ಭಾರತೀಯ ಸಂಸ್ಕೃತಿಯ ಜೀವನಾಡಿಗಳಂತೆ ಮಿಂಚುತ್ತವೆ. ಅದಕ್ಕೇ ಮೊಗೆದಷ್ಟು ಮತ್ತೆ ಮತ್ತೆ ಅಲ್ಲಿನ ಮೌಲಿಕ ಅಂಶಗಳು ಗೋಚರವಾಗುತ್ತವೆ.

ಅದರಿಂದಲೇ ನಾವು ಗಮನಿಸಬೇಕಾದ ಅಂಶವೇನೆಂದರೆ ಇಂತಹ ಅದ್ಭುತವಾದ ಶ್ರೀರಾಮನ ಇತಿಹಾಸದ ವ್ಯಾಪ್ತಿಯು ಪ್ರಸ್ತುತ ಭಾರತದಾದ್ಯಂತ ಮಾತ್ರವಲ್ಲ ಹಲವಾರು ವಿದೇಶಗಳಲ್ಲಿ ಕೂಡ ತನ್ನ ಅಸ್ತಿತ್ವವನ್ನು ವಿಸ್ತರಿಸಿಕೊಂಡಿತ್ತೆಂಬುದನ್ನು, ಈ ಎಲ್ಲಾ ವಿಚಾರಗಳನ್ನು ಒಳಗೊಂಡ ಲೇಖನಗಳು ನಮ್ಮ 'ಮೇ ಸಂಚಿಕೆ'ಯ 'ಶಿಕ್ಷಕ ಸಮಾಚಾರ'ದಲ್ಲಿ ಬಹಳ ಚೆನ್ನಾಗಿ ಬಂದಿವೆ. ಪ್ರತಿಯೊಬ್ಬರೂ ತಿಳಿಯಲೇಬೇಕಾದ, ಮುಂದಿನ ಜನಾಂಗಕ್ಕೂ ಅವಶ್ಯವಾಗಿ ತಿಳಿಸಲೇಬೇಕಾದ ಜೀವನ ಮೌಲ್ಯಗಳ ಪರಿಚಯವನ್ನು ರಾಮಾಯಣ ಕೇಂದ್ರಿತ ಲೇಖನಗಳಲ್ಲಿ ಅರ್ಥಪೂರ್ಣವಾಗಿ ಮೂಡಿರುವುದನ್ನು ಕಾಣುತ್ತೇವೆ. ಪತ್ರಿಕೆಯ ಮುಖಪುಟವೇ ಸೊಗಸಾಗಿದ್ದು, 'ರಾಮಾಯಣದ ವಿಶ್ವಭ್ರಮಣ'ವೆಂಬ ಹೆಸರು ಕುತೂಹಲ ಕೆರಳಿಸುತ್ತದೆ. ಸಂಚಿಕೆಯ ಎಲ್ಲಾ ಲೇಖಕರು ಅಭಿನಂದನಾರ್ಹರು, ತುಂಬಾ ಮೌಲಿಕ ಸಂಚಿಕೆ. ಸಂಗ್ರಹ ಯೋಗ್ಯವೂ ಸಹ.

– ಗೌತಮಿ, ಧಾರವಾಡ

---

ತಮ್ಮ ಅನಿಸಿಕೆಯನ್ನು ಓದಿ ತುಂಬಾ ಸಂತೋಷವಾಯಿತು. ತಮ್ಮ ಅನಿಸಿಕೆಯಿಂದ ನಮ್ಮ ಲೇಖಕರ ತಂಡಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆದಂತಾಗಿದೆ. ಧನ್ಯವಾದಗಳು.

–ಸಂಪಾದಕರು

**ಸನ್ಮಿತ್ರ ಓದುಗರಿಂದ ಇನ್ನೂ ಹೆಚ್ಚಿನ ಅನಿಸಿಕೆಗಳ ನಿರೀಕ್ಷೆಯಲ್ಲಿ ಸಂಪಾದಕೀಯ ತಂಡವಿದೆ.**

– ಸಂಪಾದಕರು ●

# ಕಾಲೇಜು ಶಿಕ್ಷಣ ಆಯುಕ್ತರೊಂದಿಗೆ KRMSS ನ ಫಲಪ್ರದ ಸಭೆ

ಬೆಂಗಳೂರು/ಹುಬ್ಬಳ್ಳಿ : ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ(ರಿ), ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಾದ ಮಾನ್ಯ ಪ್ರದೀಪ್. ಪಿ, ಐಎಎಸ್ ರವರೊಂದಿಗೆ ಫಲಪ್ರದವಾದ ಸಭೆಯನ್ನು ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರಿನಲ್ಲಿ ರವಿವಾರ (ದಿನಾಂಕ 06/06/2020) ಹಮ್ಮಿಕೊಳ್ಳಲಾಗಿತ್ತು.



ಮಾನ್ಯ ಆಯುಕ್ತರು ಸುಮಾರು ಎರಡೂವರೆ ಗಂಟೆಯಷ್ಟು ಸಮಯವನ್ನು ನಮಗೆ ನೀಡಿ ನಮ್ಮೆಲ್ಲಾ ಸಮಸ್ಯೆ, ಸಲಹೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಸೂಕ್ತ ವಿವರಣೆ, ಸಮಜಾಯಿಸಿ, ಸಕಾರಾತ್ಮಕ ಒಪ್ಪಿಗೆ ಮೂಲಕ ನಮ್ಮಲ್ಲೂ ಅತ್ಯಂತ ಹರ್ಷವನ್ನುಂಟು ಮಾಡಿದ್ದಾರೆ ಎಂದು ಕೆಆರ್‌ಎಂಎಸ್‌ಎಸ್ ತಿಳಿಸಿದೆ.

ಆಯುಕ್ತರೊಂದಿಗೆ ನಡೆದ ಸಭೆಯಲ್ಲಿ ಚರ್ಚಿತ ವಿಷಯಗಳು ಮತ್ತು ಆಯುಕ್ತರ ಸ್ಪಂದನೆ ಈ ಕೆಳಗಿನಂತಿದೆ.

1) ಸಂಘಟನೆಯ ಸ್ಥಾಪನೆ, ಉದ್ದೇಶ ಮತ್ತು ಕಳೆದ ಐದಾರು ವರ್ಷಗಳಿಂದ ಸಂಘ ಕೈಗೊಂಡ ಶೈಕ್ಷಣಿಕ ಕಾರ್ಯಾಗಾರಗಳು, ಸಭೆಗಳು, ಚರ್ಚೆಗಳ ಮಾಹಿತಿಯನ್ನು ಕಕಖಿ ಮೂಲಕ ನೀಡಲಾಯಿತು.

2) KRMSS ಹೇಗೆ ಶೈಕ್ಷಣಿಕ ಪರಿವಾರವಾಗಿ ಶಿಕ್ಷಕರು, ವಿದ್ಯಾರ್ಥಿಗಳು, ಇಲಾಖೆಯ ಹಿತ ಕಾಪಾಡುವ ಕೆಲಸ ಮಾಡುವ ಉದ್ದೇಶಹೊಂದಿದೆ ಎಂದು ಮನವರಿಕೆ ಮಾಡಲಾಯಿತು.

   ಪ್ರತಿಯಾಗಿ ಆಯುಕ್ತರು ಹರ್ಷಿತರಾಗಿ ನಮ್ಮ ಶೈಕ್ಷಣಿಕ ಪರಿವಾರ ಕಲ್ಪನೆಯನ್ನು ಸ್ವಾಗತಿಸಿದರು.

3) ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಶಿಕ್ಷಣ ಅದಾಲತ್ ನಡೆಸಲು ನಾವು ಆಯುಕ್ತರಲ್ಲಿ ಮನವಿ ಮಾಡಿದೆವು, ನಮ್ಮ ಮನವಿಗೆ ಸ್ಪಂದಿಸಿದ ಆಯುಕ್ತರು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಸಹಾಯವಾಣಿಯನ್ನು ಪ್ರಾರಂಭಿಸಿ, ಬರುವ ಎಲ್ಲಾ ದೂರುಗಳನ್ನು ವಿವಿಧ ಹಂತಗಳಲ್ಲಿ ಶೀಘ್ರ ಪರಿಹಸಲು ಪ್ರಯತ್ನ ಮಾಡುವ ಬಗ್ಗೆ ತಿಳಿಸಿರುತ್ತಾರೆ. ಈ ವಿಧಾನವು ದೂರುಗಳನ್ನು ಇ– ಆಡಳಿತ ಮೂಲಕ ಸ್ವಿಕರಿಸಿ ನಿರ್ವಹಿಸುವುದರಿಂದ, ಬಹುತೇಕ ಸಮಸ್ಯೆಗಳ ಶೀಘ್ರ ಪರಿಹಾರ ಸಾಧ್ಯವೆಂದು ತಿಳಿಸಿರುತ್ತಾರೆ.

4) ವರ್ಗಾವಣೆಗೆ ಸಂಬಂಧಿಸಿದ ನಮ್ಮ ದೂರುಗಳನ್ನು ಸಾವಧಾನದಿಂದ ಆಲಿಸಿದ ಆಯುಕ್ತರು, ವರ್ಗಾವಣಾ ಕಾಯ್ದೆಯನ್ನು ಬದಲಿಸಿ ಶೀಘ್ರ ನೂತನ ನಿಯಮಗಳನ್ನು ಜಾರಿಗೆ ತರಲು ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸಿರುತ್ತಾರೆ.

5) ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ಉಪನ್ಯಾಸಕರ ವೇತನ ವಿಳಂಬ, ಭೋದಕ ಮತ್ತು ಭೋದಕೇತರ ನೌಕರರ ನೇಮಕದ ಬಗ್ಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿರುತ್ತಾರೆ.

6) ಕಾಲೇಜುಗಳ ಮೂಲ ಸೌಕರ್ಯಗಳ ಕೊರತೆಯ ಬಗೆಗಿನ ನಮ್ಮ ಮನವಿಗೆ ಸ್ಪಂದಿಸಿ ಮೂಲ ಸೌಕರ್ಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿರುತ್ತಾರೆ.

7) ಅತಿಥಿ ಉಪನ್ಯಾಸಕರ ವೇತನ ಹಚ್ಚಳಕ್ಕೆ ನಾವು ನೀಡಿದ ಮನವಿಗೆ ಉತ್ತರಿಸಿ, ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳಲ್ಲಿ ಈ ಬಗ್ಗೆ ಸ್ವತಃ ಆಯುಕ್ತರೇ ಮಾತನಾಡಿದ್ದು ಹೆಚ್ಚಿಸಲು ಸರ್ಕಾರ ತೀರ್ಮಾನಿಸಿರುವ ಬಗ್ಗೆ ತಿಳಿಸಿರುತ್ತಾರೆ.

8) ಪ್ರಾಂಶುಪಾಲರ ನೇಮಕ, ಸ್ಟಾಪ್ ಗ್ಯಾಪ್ ಮತ್ತು ಅತಿಥಿ ಉಪನ್ಯಾಸಕರಾಗಿ ಸೇವಾಕಾಯಂ ಆಗಿರುವ ಉಪನ್ಯಾಸಕರ ಸಮಸ್ಯೆಗಳನ್ನು ಶೀಘ್ರವಾಗಿ ಸಕಾರಾತ್ಮಕವಾಗಿ ಪರಿಹರಿಸುವ ಆಶಯ ವ್ಯಕ್ತಪಡಿಸಿದ್ದಾರೆ.

9) ರಾಜ್ಯ ಮಟ್ಟದಲ್ಲಿ ಪದವಿ ತರಗತಿಗಳಿಗೆ ಸಾಮಾನ್ಯ ಪಠ್ಯ ವಿಷಯ ತರುವ ಬಗ್ಗೆ ಆಗಿರುವ ಪ್ರಯತ್ನಗಳಿಗೆ ನಮ್ಮ ವಿರೋಧವನ್ನು ಆಯುಕ್ತರಲ್ಲಿ ನಾವು ಪ್ರಸ್ತಾಪಿಸಿದಾಗ, ಮಾನ್ಯ ಆಯುಕ್ತರು ನಮ್ಮ ಆತಂಕವನ್ನು ಹೋಗಲಾಡಿಸಿ ಸಾಮಾನ್ಯ ಪಠ್ಯ ವಿಷಯ ತರುವ ಉದ್ದೇಶವಿಲ್ಲ, ಕೇವಲ ಒಂದು ಚೌಕಟ್ಟನ್ನು ನಿಗಧಿ ಪಡಿಸುವ ಪ್ರಯತ್ನವನ್ನಷ್ಟೇ ಸರ್ಕಾರ ಮಾಡುತ್ತಿದೆ ಹಾಗಾಗಿ ವಿಶ್ವವಿದ್ಯಾಲಯಗಳಿಗಿರುವ ಪಠ್ಯ ವಿಷಯದ ಸ್ವಾತಂತ್ರ್ಯ ಬದಾಲಾಗದಿರುವ ಬಗ್ಗೆ ತಿಳಿಸಿರುತ್ತಾರೆ.

10) ಮಾನ್ಯ ಆಯುಕ್ತರು, ಪ್ರಾಂಶುಪಾಲರ ಕಾರ್ಯಬಾರಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಿಗೆ ಒಂದೇ ನಿಯಮವನ್ನು ಜಾರಿಗೆ ತರಲು ಒಪ್ಪಿರುತ್ತಾರೆ.

11) ವಿದ್ಯಾರ್ಥಿಗಳ ಬಸ್ ಪಾಸ್‌ಗೆ ಸಂಬಂಧಿಸಿದಂತೆ online ಮೂಲಕ ಪಾಸ್ ನೀಡುವ ಸಾಧ್ಯತೆ ಬಗ್ಗೆ ಗಮನ ನೀಡಲು ಒಪ್ಪಿರುತ್ತಾರೆ.


ಈ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀಯುತ ಅರುಣ್ ಶಹಾಪುರ್, ಅಧ್ಯಕ್ಷರಾದ ಡಾ. ರಘು ಅಕ್ಮಂಚಿ, ಡಾ. ಗುರುನಾಥ್ ಬಡಿಗೇರ್, ಲಿಂಗರಾಜ್ ಹೋರ್ಕೇರಿ, ಡಾ. ಎಸ್.ಎಸ್.ಕೋಟಿ, ಶ್ರೀಮತಿ ವನಜ, ಶ್ರೀ ಮದನ್ ಮೋಹನ್ ರೆಡ್ಡಿ, ಕೃಷ್ಣ ಹೆಚ್.ಎಮ್, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜಣ್ಣ. ಜಿ.ಸಿ, ಬಿ. ಎಂ ಬಡಿಗೇರ, ಸಿ.ವಿ.ಮರಿದೇವರಮಠ, ಡಾ. ಶ್ರೀಕಾಂತ ಕುಲಕರ್ಣಿ, ಎಸ್. ಟಿ. ಮೀಶೆ ಮುಂತಾದವರು ಭಾಗವಹಿಸಿದ್ದರು.


MAG(3)/NPP/26/2018-19 Registered No. RNI 45459/85
Posted at Bangalore PSO Bangalore -560 026
Date of Publishing : 17-06-2020
Date of Posting 20h or 21st of every month
Posted at Periodical Rate

# ದಿನಾಂಕ 1.06.20 ರಂದು ಜಿಲ್ಲಾ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಮಹಿಳಾ ಪ್ರಮುಖರ ಆನ್ಲೈನ್ ಸಭೆ









**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ
akss1950@gmail.com Emailಗೆ ಕಳುಹಿಸಿಕೊಡಿ.
ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com